ನಿವೃತ್ತಿಯು ಚಿಂತೆ ಏಕೆ..?

ಎನ್. ಆನಂದರಾಮ ರಾವ್

BEWUF

ಭಾರತ್ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಟಿ ಫೋರಂ,
ಬಿ.ಇ.ಎಲ್., ಜಾಲಹಳ್ಳಿ, ಬೆಂಗಳೂರು - 560 013

BEWUF

ಭಾರತ್ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಟಿ ಫೋರಂ

ಬಿ.ಇ.ಎಲ್., ಜಾಲಹಳ್ಳಿ ಅಂಚೆ, ಬೆಂಗಳೂರು - 560 013

ಪದಾಧಿಕಾರಿಗಳು

ಅಧ್ಯಕ್ಷರು
ಪ್ರೊ. ಬಿ.ಕೆ. ಚಂದ್ರಶೇಖರ್,
ಎಲ್‌ಎಲ್‌ಎಂ (ಲೀಡ್ಸ್)ಡಿ.ಫಿಲ್(ಆಕ್ಸ್‌ಫರ್ಡ್)

ಕಾರ್ಯಾಧ್ಯಕ್ಷರು
ಎಸ್.ಎಂ. ಲಕ್ಷ್ಮಣಗೌಡ,
ಬಿ.ಕಾಂ., ಎಲ್.ಎಲ್.ಬಿ.

ಕಾನೂನು ಸಲಹೆಗಾರರು
ಎನ್. ಬಾಲಪ್ಪ,
ಬಿ.ಕಾಂ., ಎಲ್.ಎಲ್.ಬಿ.,

ಪ್ರಧಾನ ಸಲಹೆಗಾರರು
ಸಿ.ವಿ.ಎಸ್. ರೆಡ್ಡಿ
ಎಂ.ಈ. ಪಿಳ್ಳಪ್ಪ

ಉಪಾಧ್ಯಕ್ಷರು - I
ಎಲ್. ಕೃಷ್ಣ

ಉಪಾಧ್ಯಕ್ಷರು - II
ನಾರಾಯಣ ಬಿ.

ಮಹಿಳಾ ಉಪಾಧ್ಯಕ್ಷರು - I
ಪಾರ್ವತಿ ಸುಬ್ರಮಣ್ಯಂ

ಮಹಿಳಾ ಉಪಾಧ್ಯಕ್ಷರು - II
ಜಯಲಕ್ಷ್ಮಿ

ಪ್ರಧಾನ ಕಾರ್ಯದರ್ಶಿ
ಸಿ.ವಿ. ಕೃಷ್ಣಪ್ಪ

ಜಂಟಿ ಕಾರ್ಯದರ್ಶಿ
ಎಂ. ಕೃಷ್ಣಪ್ಪ, ಡಿ.ಎಂ.ಇ.,

ಸಂಘಟನಾ ಕಾರ್ಯದರ್ಶಿ
ಕೆ.ಪಿ. ಭೀಮಯ್ಯ, ಬಿ.ಕಾಂ.,

ಕಾರ್ಯದರ್ಶಿ
ಚಂದ್ರಶೇಖರ್ ಆರ್.ಎನ್

ಸಹ ಕಾರ್ಯದರ್ಶಿ
ಹೆಚ್. ಅನಿಲ್ ಕುಮಾರ್,
ಡಿ.ಇ. ಅಂಡ್ ಸಿ.,

ಖಜಾಂಚಿ
ಶ್ರೀಧರ್ .ಜಿ,
ಡಿ.ಎಂ.ಇ.

ನಿವೃತ್ತಿಯ ಚಿಂತೆ ಏಕೆ?

ಲೇಖಕರು :

ಎನ್. ಆನಂದರಾಮ ರಾವ್

ಪ್ರಕಾಶಕರು :

ಭಾರತ್ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಟಿ ಫೋರಂ,

ಬಿ.ಇ.ಎಲ್., ಜಾಲಹಳ್ಳಿ, ಬೆಂಗಳೂರು - 560 013

"Nivruthiya Chinte Yake?" : N. Anandarama Rao,

Published by : Bharat Electronics Workers Unity Forum,
B.E.L., Jalahalli, Bangalore-560 013
Ph : 080-22195313

Year : 2009

Pages : 69 + 9

Price : Rs. 40/-

Printed at :
Sri Rajarajeshwari Printers
No. 67, Kanasu Complex,
Kabeer Mutt Road
Bangalore - 560 019
Ph : 22421110

Cover Page : Ravi

ಶುಭ ಹಾರೈಕೆ

" **ನಿವೃತ್ತಿಯ ಚಿಂತೆ ಏಕೆ** " ಎಂಬ ಈ ಕಿರು ಪುಸ್ತಕವನ್ನು ನಮ್ಮ ಬಿ.ಇ.ಎಲ್. ಸಂಸ್ಥೆಯ ನಿವೃತ್ತ ಅಧಿಕಾರಿಗಳಾದ ಶ್ರೀ ಎನ್. ಆನಂದರಾಮ ರಾವ್ ರವರು ಹೊರತರುತ್ತಿರುವುದು ಅತ್ಯಂತ ಸಂತೋಷದ ವಿಷಯ. ಈ ಮೂಲಕ ಅವರು ನಿವೃತ್ತಿದಾರರು ಮತ್ತು ನಿವೃತ್ತಿಯಾಗಲಿರುವವರನ್ನು ನಿವೃತ್ತಿಯ ನಂತರ ಎದುರಿಸುವ ಸಮಸ್ಯೆಗಳಿಂದ ಪಾರುಮಾಡಿದ್ದಾರೆ ಎಂದರೆ ತಪ್ಪಾಗಲಾರದು. ಈ ಪುಸ್ತಕವು ಬಿ.ಇ.ಎಲ್. ಕಾರ್ಖಾನೆಯ ಈಗಾಗಲೇ ನಿವೃತ್ತರಾಗಿರುವ ಮತ್ತು ಮುಂದೆ ನಿವೃತ್ತಿಯಾಗಲಿರುವ ಎಲ್ಲ ನೌಕರರಿಗೆ ಮಾರ್ಗಸೂಚಿಯಂತೆ ಇರುವುದಲ್ಲದೆ, ಇತರೆ ಸಾರ್ವಜನಿಕ ಸಂಸ್ಥೆಗಳ ಕಾರ್ಮಿಕರಿಗೂ ಮತ್ತು ಸಾರ್ವಜನಿಕರಿಗೂ ಸಹ ಅನ್ವಯವಾಗಿ ಅವರು ಕೂಡ ಇದರ ಲಾಭವನ್ನು ಪಡೆಯಬಹುದಾಗಿದೆ. ಈ ಪುಸ್ತಕವು ಶ್ರೀ ಆನಂದರಾಮ ರಾವ್ ರವರ ವೃತ್ತಿಯಲ್ಲಿನ ಸ್ವಂತ ಅನುಭವ ಮತ್ತು ಅವರು ತರಬೇತಿ ಕಾರ್ಯಕ್ರಮಗಳಲ್ಲಿ ನೀಡಿದ ಉಪನ್ಯಾಸಗಳ ಸಂಕ್ಷಿಪ್ತ ಬರಹ ರೂಪವಾಗಿದ್ದು, ಇದರಲ್ಲಿ ಅನೇಕ ಮಾಹಿತಿಗಳು, ನಿಯಮಾವಳಿಗಳು, ನಿಬಂಧನೆಗಳು, ಅಂಕಿ ಅಂಶಗಳು ಮತ್ತು ಮಾರ್ಗದರ್ಶನಗಳು ಅಡಕವಾಗಿ ಬಹಳ ಉಪಯುಕ್ತವಾಗಿದೆ. ಶ್ರೀ ಆನಂದರಾಮ ರಾವ್ ರವರು ಈ ಪುಸ್ತಕವನ್ನು ಸರಳ ಕನ್ನಡ ಭಾಷೆಯಲ್ಲಿ ಬರೆದು ಜನಸಾಮಾನ್ಯರಿಗೆ ಅನುಕೂಲವಾಗುವಂತೆ ಮಾಡಿರುವುದು ಅತ್ಯಂತ ಹೆಮ್ಮೆಯ ಸಂಗತಿ. ಕರ್ನಾಟಕ ರಾಜ್ಯೋತ್ಸವ ಆಚರಿಸಲ್ಪಡುವ ನವೆಂಬರ್ ಮಾಹೆಯಲ್ಲಿ ಈ ಪುಸ್ತಕವನ್ನು ಪ್ರಕಟಿಸುತ್ತಿರುವುದು ಇದರ ಇನ್ನೊಂದು ವಿಶೇಷ.

ತರಬೇತಿ ವಿಭಾಗದ ನಿವೃತ್ತ ಜೀವನದ ತರಬೇತಿಯ ಒಂದು ಕಾರ್ಯಕ್ರಮದಲ್ಲಿ ಓರ್ವ ಅಭ್ಯರ್ಥಿಯು ನೀಡಿದ ಅಭಿಪ್ರಾಯಕ್ಕೆ ಸ್ಪಂದಿಸಿ ಮಿತ್ರರು ನೀಡಿದ ಸೂಚನೆಯನ್ನು ಸವಾಲಾಗಿ ಸ್ವೀಕರಿಸಿ ಶ್ರೀ ಆನಂದರಾಮ ರಾವ್ ರವರು ಕನ್ನಡದಲ್ಲಿ ಕಾರ್ಯಕ್ರಮವನ್ನು ನಡೆಸಿಕೊಡಲು ಒಪ್ಪಿಕೊಂಡಿದ್ದು ಇವರ ಸೇವಾ ಮನೋಭಾವವನ್ನು ತೋರಿಸುತ್ತದೆ. ನಿಜಕ್ಕೂ ಇದು ಅತ್ಯಂತ ಶ್ಲಾಘನೀಯ ಮತ್ತು ಅಭಿನಂದನೀಯ. ಅಲ್ಲದೆ, ಇದು ಅವರ ಕನ್ನಡದ ಮೇಲಿನ ಅಭಿಮಾನವನ್ನು ತೋರಿಸುತ್ತದೆ. ಈಗಾಗಲೇ ಇವರು ಈ ನಿವೃತ್ತಿ ವಿಷಯಕ್ಕೆ ಸಂಬಂಧಪಟ್ಟಂತೆ ಅನೇಕ ಲೇಖನಗಳನ್ನು ಪತ್ರಿಕೆಗಳಲ್ಲಿ

ಪ್ರಸ್ತುತಪಡಿಸಿ ಅನೇಕರ ಮೆಚ್ಚುಗೆಗಳಿಸಿದ್ದಾರೆ. ಇವರ ಲೇಖನಗಳಿಗೆ ಸಾರ್ವಜನಿಕರಿಂದ ಬೇಡಿಕೆ ಬಂದಿರುವುರು ಇಲ್ಲಿ ಅತ್ಯಂತ ಗಮವಾರ್ಹವಾದ ಸಂಗತಿ.

ಶ್ರೀ ಆನಂದರಾಮ ರಾವ್ ರವರು ತಮ್ಮ ನಿವೃತ್ತಿಯ ನಂತರವೂ ತಮ್ಮ ಕಾರ್ಯಕ್ಷೇತ್ರವನ್ನು ಮುಂದುವರಿಸಿಕೊಂಡು ಹೋಗುತ್ತಿರುವುದು ಅತ್ಯಂತ ಶ್ಲಾಘನೀಯ. ಈ ಸೇವೆಯನ್ನು ಅವರು ಹೀಗೆಯೆ ಮುಂದುವರಿಸಲಿ ಎಂದು ಶುಭ ಹಾರೈಸುತ್ತೇನೆ. ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಶೀಘ್ರಗತಿಯಲ್ಲಿ ಕಾರ್ಯ ವಿಧಾನಗಳು ಮತ್ತು ನಿಯಮ ನಿಬಂಧನೆಗಳು ಬದಲಾಗುವುದು ಸಾಮಾನ್ಯ. ಇದಕ್ಕೆ ಅನುಗುಣವಾಗಿ ಈ ಪುಸ್ತಕದ ಪರಿಷ್ಕೃತ ಆವೃತ್ತಿಗಳು ಇವರಿಂದ ಹೊರಹೊಮ್ಮಲಿ ಎಂದು ನಾನು ಈ ಸಂದರ್ಭದಲ್ಲಿ ಆಶಿಸುತ್ತೇನೆ. ಶ್ರೀ ಆನಂದ ರಾಮರಾವ್ ರವರಿಗೆ ಮತ್ತು ಅವರ ಕುಟುಂಬ ವರ್ಗಕ್ಕೆ ನನ್ನ ಅಭಿನಂದನೆಗಳು ಮತ್ತು ಶುಭಾಶಯಗಳು.

– ಎಮ್. ಜೆ. ರಘುವೀರ್
ಹಣಕಾಸು ನಿರ್ದೇಶಕರು
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಡೆಟ್
ಬೆಂಗಳೂರು

ಮುನ್ನುಡಿ

ಶ್ರೀ ಆನಂದರಾಮರಾವ್ ರವರು ಬಿ.ಇ.ಎಲ್. ಕಾರ್ಖಾನೆಯ ಭವಿಷ್ಯನಿಧಿ ವಿಭಾಗದಲ್ಲಿ ಅಧಿಕಾರಿಗಳಾಗಿ ಕೆಲಸ ಮಾಡುವಾಗ, ನಿವೃತ್ತಿಯಾಗುತ್ತಿರುವ ಕಾರ್ಮಿಕರ ಬವಣೆಗಳನ್ನು ದಿನ ನಿತ್ಯ ನೋಡುತ್ತಿದ್ದರು. ಇದನ್ನು ಗಮನಿಸಿ ಬಿ.ಇ.ಎಲ್.ನಲ್ಲಿ ನಿವೃತ್ತಿಯಾಗುತ್ತಿರುವ ಕಾರ್ಮಿಕರಿಗೆ ತರಗತಿಗಳನ್ನು ತೆಗೆದುಕೊಂಡು ಅವರ ಮುಂದಿನ ಜೀವನದ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಮಾಡಲು ಪ್ರಾರಂಭಿಸಿದರು. ಅವರ ನಿವೃತ್ತಿಯ ನಂತರವೂ ಸಹ ಅವರ ತರಗತಿಗಳು ನಿವೃತ್ತಿಯಾಗುತ್ತಿರುವ ಕಾರ್ಮಿಕರಿಗೆ ಬಹಳ ಅಗತ್ಯವೆಂದು ಅರಿತು ಆಡಳಿತವರ್ಗ ಶ್ರೀ ಆನಂದರಾಮ ರಾವ್‌ರವರು ತರಗತಿಗಳನ್ನು ತೆಗೆದುಕೊಂಡು ನಿವೃತ್ತಿಯ ನಂತರದ ಜೀವನದ ಬಗ್ಗೆ ತಿಳುವಳಿಕೆಯನ್ನು ನೀಡುತ್ತಿದ್ದಾರೆ. ನಿವೃತ್ತಿಯಾದ ಕಾರ್ಮಿಕರೂ ಸಹ ಶ್ರೀ ಆನಂದರಾಮರಾವ್‌ರು ಕೊಟ್ಟ ಸಲಹೆಗಳಂತೆ ನಡೆಯುತ್ತಿದ್ದೇವೆಂದು ಮತ್ತು ಬಹಳ ಅನುಕೂಲಕರವಾಗಿದೆಯೆಂದು ತಿಳಿಸುತ್ತಿದ್ದಾರೆ. ಅವರು ಬಿ.ಇ.ಎಲ್.ನಲ್ಲಿ ನಿವೃತ್ತಿಯಾಗುತ್ತಿರುವ ಕಾರ್ಮಿಕರಿಗೆ ತರಗತಿಗಳಲ್ಲಿ ಭೋದನೆ ಮಾಡುತ್ತಿರುವ ವಿಷಯಗಳು ಇತರೆ ಕಡೆಗಳಲ್ಲಿ ಸೇವೆ ಮಾಡಿ ನಿವೃತ್ತಿಯಾಗುತ್ತಿರುವ ಕಾರ್ಮಿಕರಿಗೂ ಸಹ ಬಹಳ ಅನುಕೂಲವಾಗುತ್ತಿವೆಯೆಂದೂ, ಅದನ್ನು ಬರಹ ರೂಪದಲ್ಲಿ ನೀಡಿದರೆ ಮತ್ತಷ್ಟು ಉಪಯೋಗವಾಗುತ್ತದೆಂದೂ ಅನೇಕ ಕಾರ್ಮಿಕರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರು. ಅವರ ಉಪನ್ಯಾಸದ ಸಾರಾಂಶವನ್ನು ಈ ಕಿರು ಹೊತ್ತಿಗೆಯಲ್ಲಿ ತಂದು ಭಾರತ್ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಟಿ ಫೋರಂನಿಂದ ಪ್ರಕಟಿಸಿ ಕಾರ್ಮಿಕರಿಗೆ ನೆರವಾಗಲು ಯೋಚಿಸಲಾಯಿತು. ನಿವೃತ್ತಿಯಾಗುತ್ತಿರುವ ಕಾರ್ಮಿಕರು ಸೇವೆಯಲ್ಲಿರುವಾಗ ಯಾಂತ್ರಿಕ ಬದುಕನ್ನು ರೂಢಿಸಿಕೊಂಡಿರುತ್ತಾರೆ, ನಿವೃತ್ತಿಯ ನಂತರ ಆ ರೀತಿಯ

ಬದುಕನ್ನು ಮುಂದುವರೆಸಲು ಸಾಧ್ಯವಿರುವುದಿಲ್ಲ. ಸಮಯಕ್ಕೆ ತಕ್ಕಂತೆ ಬದಲಾವಣೆಗಳಿಗೆ ಹೊಂದಿಕೊಳ್ಳಬೇಕಾಗುತ್ತದೆ.

ಈ ಪುಸ್ತಕ ನಿವೃತ್ತಿಯ ನಂತರದ ಸಮಸ್ಯೆಗಳು ಕುಟುಂಬದವರೊಡನೆ ಸಾಮರಸ್ಯ, ದೈಹಿಕ ಆರೋಗ್ಯ, ಆರ್ಥಿಕ ಆರೋಗ್ಯ, ಹಣದ ರೂಪದಲ್ಲಿ ಬರುವ ಸೇವಾಂತ್ಯದ ಸೌಲಭ್ಯಗಳನ್ನು ಭದ್ರಪಡಿಸಿ ಉಪಯೋಗಿಸಿಕೊಳ್ಳುವ ಬಗ್ಗೆ, ಹಿರಿಯ ನಾಗರಿಕರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳು 1995 ರ ಕಾರ್ಮಿಕರ ಪಿಂಚಣಿ ಯೋಜನೆ ಅಲ್ಲದೆ ತಮ್ಮ ನಂತರ ಆಸ್ತಿಯನ್ನು ಯಾವ ರೀತಿ ಹಸ್ತಾಂತರಿಸಬೇಕು ಮುಂತಾದ ವಿಷಯಗಳ ಬಗ್ಗೆ ಎಲ್ಲರಿಗೂ ಅರ್ಥವಾಗುವ ರೀತಿ ಸರಳವಾಗಿ ಈ ಪುಸ್ತಕದಲ್ಲಿ ವಿವರಿಸಿದ್ದಾರೆ. ಅದಕ್ಕಾಗಿ ಹಲವಾರು ಮೂಲಗಳಿಂದ ಮಾಹಿತಿಯನ್ನು ಮತ್ತು ಅಂಕಿ ಅಂಶಗಳನ್ನು ಅಧಿಕೃತವಾಗಿ ಸಂಗ್ರಹಿಸಿ, ಎಲ್ಲರಿಗೂ ಮನದಟ್ಟಾಗುವಂತೆ ವಿಷದವಾಗಿ ಹೇಳಿದ್ದಾರೆ. ಈ ಪುಸ್ತಕ ನಿವೃತ್ತರಾಗಿರುವವರಿಗೆ ಮತ್ತು ನಿವೃತ್ತರಾಗಲಿರುವ ಕಾರ್ಮಿಕರಿಗೆ ಒಂದು ದಿಕ್ಸೂಚಿಯಾಗಲಿದೆ.

ಎಸ್.ಎಂ. ಲಕ್ಷ್ಮಣಗೌಡ
ಅಧ್ಯಕ್ಷರು, ಬಿ.ಇ. ಕಾರ್ಮಿಕರ ಪತ್ತಿನ ಸಹಕಾರ ಸಂಘ
ಕಾರ್ಯಾಧ್ಯಕ್ಷರು, ಬಿ.ಇ. ವರ್ಕರ್ಸ್ ಯೂನಿಟಿ ಫೋರಂ,
ಬಿ.ಇ.ಎಲ್., ಬೆಂಗಳೂರು

ನನ್ನುಡಿ

" **ನಿವೃತ್ತಿಯ ಚಿಂತೆ ಏಕೆ** " ? ಈ ಕಿರು ಪುಸ್ತಕವು ಈವರೆಗೆ ನಾನು ನೀಡಿರುವ "**ನಿವೃತ್ತಿಗಾಗಿ ಯೋಜನೆ**" **(Planning for Retirement)** ಎಂಬ ಉಪನ್ಯಾಸಗಳ ಸಂಕ್ಷಿಪ್ತ ಬರಹ ರೂಪ. ಸುಮಾರು 1995 ರಲ್ಲಿ ಬಿ.ಇ.ಎಲ್. ಕಾರ್ಖಾನೆಯಲ್ಲಿ ನಿವೃತ್ತರಾಗಲಿರುವ ಉದ್ಯೋಗಿಗಳಿಗೆ ಅವರ ನಿವೃತ್ತ ಜೀವನದ ಮಾರ್ಗದರ್ಶನಕ್ಕಾಗಿ ಕಾರ್ಖಾನೆಯ ತರಬೇತಿ ವಿಭಾಗದಲ್ಲಿ ಒಂದು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಕೊನೆಯಲ್ಲಿ ಒಬ್ಬ ಅಭ್ಯರ್ಥಿ ನೀಡಿದ ಮುಕ್ತ ಮನಸ್ಸಿನ ಅಭಿಪ್ರಾಯ ಎಲ್ಲರನ್ನು ಆಶ್ಚರ್ಯಗೊಳಿಸಿತು. ಅವರು ಹೇಳಿದ್ದಿಷ್ಟು : " ಕಾರ್ಯಕ್ರಮ ಪೂರ ನಡೆದಿದ್ದು ಇಂಗ್ಲೀಷಿನಲ್ಲಿ – ನನಗೆ ಅಷ್ಟಾಗಿ ತಿಳಿಯದ ಭಾಷೆಯಲ್ಲಿ. ಹಾಗಾಗಿ ನನಗೆ ಸರಿಯಾಗಿ ಅರ್ಥವಾಗಲಿಲ್ಲ. ಕನ್ನಡದಲ್ಲಿ ಹೇಳಿದ್ದಿದ್ದರೆ ನನಗೆ ಅರ್ಥವಾಗುತ್ತಿತ್ತು."

ಅವರ ಅಭಿಪ್ರಾಯಕ್ಕೆ ಸೂಕ್ತವಾಗಿ ಸ್ಪಂದಿಸಿದ ತರಬೇತಿ ವಿಭಾಗದ ಮುಖ್ಯಸ್ಥರಾಗಿದ್ದ ಶ್ರೀ ಜಗದೀಶ ಪ್ರಸಾದ್ ಅವರು "ಕನ್ನಡದಲ್ಲಿ ಈ ವಿಷಯದ ಬಗ್ಗೆ ಕಾರ್ಯಕ್ರಮ ನಡೆಸಿಕೊಡುವವರು ಸಿಗುವ ಸಾಧ್ಯತೆ ಸ್ವಲ್ಪ ಕಷ್ಟ. ಆದರೂ ಮುಂದಿನ ದಿನಗಳಲ್ಲಿ ಪ್ರಯತ್ನ ಪಡಲಾಗುವುದು" ಎಂದು ಹೇಳಿದರು. ಆ ಸಂದರ್ಭದಲ್ಲಿ ನನ್ನ ಜೊತೆ ಬಂದಿದ್ದ ನನ್ನ ಮಿತ್ರರಾದ ಶ್ರೀ ಸುಬ್ಬಣ್ಣಭಟ್ ಮತ್ತು ಶ್ರೀ ನಾಗನಾಥನ್ ರವರುಗಳು ತಕ್ಷಣವೇ ಆ ಕಾರ್ಯಕ್ಕೆ ನನ್ನ ಹೆಸರನ್ನು ಸೂಚಿಸಿಬಿಟ್ಟರು. ಈ ಬಗ್ಗೆ ಶ್ರೀ ಜಗದೀಶ ಪ್ರಸಾದ್‌ರವರು ನನ್ನ ಅಭಿಪ್ರಾಯವನ್ನು ಕೇಳಿದಾಗ ಒಂದು ಕ್ಷಣ ನನಗೆ ಏನು ಉತ್ತರ ಕೊಡಬೇಕೆಂದು ಹೊಳೆಯಲಿಲ್ಲ. ಸ್ವಲ್ಪ ಯೋಚನೆಗೆ ಒಳಗಾದೆ. ಮೊದಲಿನಿಂದ ಕನ್ನಡದ ಬಗ್ಗೆ ಒಲವು, ಪ್ರೀತಿ, ಅಭಿಮಾನಗಳನ್ನಿರಿಸಿಕೊಂಡಿದ್ದ ನನಗೆ ಕನ್ನಡದಲ್ಲಿ ಕಾರ್ಯಕ್ರಮವನ್ನು ಏಕೆ ನಡೆಸಲಾಗುವುದಿಲ್ಲ ? ಪ್ರಯತ್ನಪಡಬಾರದೇಕೆ ? ಎಂದು ಸವಾಲಾಗಿ ಸ್ವೀಕರಿಸಿ ಸಾಧಿಸಬೇಕೆಂಬ ಛಲವೂ ಉಂಟಾಯಿತು. ಹಾಗಾಗಿ ಕನ್ನಡದಲ್ಲಿ ಕಾರ್ಯಕ್ರಮವನ್ನು ನಡೆಸಲು ಒಪ್ಪಿದೆ.

ಅದರಂತೆ 1995 ರ ಆಗಸ್ಟ್ ತಿಂಗಳಿನಲ್ಲಿ ನನ್ನ ಮೊದಲ ಕಾರ್ಯಕ್ರಮ ನಡೆಯಿತು. ಅದು ನನ್ನ ಊಹೆಗೂ ಮೀರಿ ಯಶಸ್ವಿಯಾಯಿತು. ಭಾಗವಹಿಸಿದ್ದವರೆಲ್ಲರ

ಅಭಿಪ್ರಾಯವೂ ಒಂದೇ ಆಗಿತ್ತು – "ಕಾರ್ಯಕ್ರಮ ಬಹಳ ಚೆನ್ನಾಗಿದೆ. ಬಹಳ ಉಪಯುಕ್ತವಾಗಿದೆ" ಎಂಬುದು.

ಅಂದಿನಿಂದ ಇಂದಿನವರೆಗೆ ನನ್ನ ಉಪನ್ಯಾಸ ಕಾರ್ಯಕ್ರಮ ನಿರಂತರವಾಗಿ ನಡೆಯುತ್ತಿದೆ. ಬಿ.ಇ.ಎಲ್. ಕಾರ್ಖಾನೆಯ ಮಚಲಿಪಟ್ಟಣದ ಘಟಕ ಹಾಗೂ ಮೈಸೂರು ಕಾಗದದ ಕಾರ್ಖಾನೆಗಳಲ್ಲಿ ಇದೇ ಕಾರ್ಯಕ್ರಮಗಳನ್ನು ನಡೆಸಲು ನಮ್ಮ ಸಂಸ್ಥೆಯ ಪ್ರತಿನಿಧಿಯನ್ನಾಗಿ ಕಳಿಸಲಾಯಿತು. ಅಲ್ಲಿಯೂ ಸಹ ಕಾರ್ಯಕ್ರಮವು ಯಶಸ್ವಿಯಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದವರು ಅದರ ಉಪಯುಕ್ತತೆ ಹಾಗೂ ಸಾರ್ಥಕತೆಯನ್ನು ಮೆಚ್ಚಿ ಹೇಳುವ ಮನದಾಳದ ಮಾತುಗಳು ನನ್ನನ್ನು ಆನಂದ ತುಂದಿಲನನ್ನಾಗಿ ಮಾಡುತ್ತದೆ.

ಉಪನ್ಯಾಸಕ್ಕೆ ಸಿದ್ದಪಡಿಸಿದ ಬರಹವನ್ನು ಲೇಖನರೂಪವಾಗಿ ಬರೆದು ಪತ್ರಿಕೆಗೆ ಯಾಕೆ ಕಳಿಸಬಾರದೆಂಬ ಯೋಚನೆಯೂ ಒಮ್ಮೆ ಹೊಳೆಯಿತು. ಅಂತೆಯೇ "ನಿಮ್ಮ ಠೇವಣಿ ಎಲ್ಲಿ ಸುರಕ್ಷಿತ?" ಎಂಬ ಲೇಖನವನ್ನು "ಪ್ರಜಾವಾಣಿ" ಪತ್ರಿಕೆಗೆ ಕಳಿಸಿದೆ. ಆಶ್ಚರ್ಯವೆಂಬಂತೆ ಒಂದು ವಾರದಲ್ಲಿಯೇ ಪ್ರಮುಖ ಲೇಖನವಾಗಿ ಪ್ರಕಟವೂ ಆಯಿತು. ಅಲ್ಲದೆ ಹಲವಾರು ಮೆಚ್ಚುಗೆಯ ಪತ್ರಗಳು ಬಂದುವು. ಅಷ್ಟೇ ಅಲ್ಲ ಇಂತಹ ಲೇಖನಗಳಿಗೆ ಮತ್ತಷ್ಟು ಬೇಡಿಕೆಯೂ ಬಂದಿತು. ಇದರಿಂದ ಉತ್ತೇಜಿತನಾಗಿ ಹಲವಾರು ಲೇಖನಗಳನ್ನು "ಪ್ರಜಾವಾಣಿ" "ಸುಧಾ"ಪತ್ರಿಕೆಗಳಿಗೆ ಬರೆದು ಕಳಿಸಿದೆ. ಅವುಗಳ ಪ್ರಕಟಣೆಯೂ ಆಯಿತು.

ಈ ಮಧ್ಯೆ "ಉದಯವಾಣಿ" ಪತ್ರಿಕೆಯ ಸಂಪಾದಕಿಯವರಾದ ಶ್ರೀಮತಿ ಆರ್. ಪೂರ್ಣಿಮರವರು ತಮ್ಮ ಪತ್ರಿಕೆಯ "ಹಿರಿಯರ ಪುಟ – ಉತ್ತರಾಯಣ – ವಿಭಾಗಕ್ಕೆ" ಲೇಖನಮಾಲೆಯೊಂದನ್ನು ಬರೆಯಲು ಪ್ರೇರೇಪಿಸಿದರು. ಹಾಗಾಗಿ "ನಿವೃತ್ತಿ – ನೆಮ್ಮದಿ" ಎಂಬ ಅಂಕಣ ಮಾಲೆಗೆ ಲೇಖನವನ್ನು ಬರೆದೆ. ಅದು 52 ಕಂತುಗಳಲ್ಲಿ ಪ್ರಕಟವಾಯಿತು.

ಈ ಲೇಖನಮಾಲೆಯನ್ನು ನನ್ನ ಆತ್ಮೀಯರು, ಹಿತೈಷಿಗಳು ಅಲ್ಲದೆ ನನ್ನ ಬರಹಗಳಿಗೆ ಪ್ರೋತ್ಸಾಹ ನೀಡುತ್ತಿರುವ ನಾಡಿನ ಪ್ರಖ್ಯಾತ ಸುಂದರ ಪ್ರಕಾಶನದ ಶ್ರೀ ಗೌರಿಸುಂದರ್ ರವರು ಪುಸ್ತಕರೂಪದಲ್ಲಿ ಸದ್ಯದಲ್ಲಿಯೇ ಪ್ರಕಟಿಸಲಿದ್ದಾರೆ.

"ನಿವೃತ್ತಿಗಾಗಿ ಯೋಜನೆ" ವಿಷಯದ ಮೇಲೆ ಉಪನ್ಯಾಸವನ್ನು ನೀಡಲು ಆರಂಭಿಸಿದ ಮೇಲೆ ಅದು ನನ್ನನ್ನು ಒಬ್ಬ ಉಪನ್ಯಾಸಕನಾಗಿ ಮತ್ತು ಲೇಖಕನನ್ನಾಗಿ ರೂಪಿಸಿದೆ.

ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಉಪನ್ಯಾಸದ ಸಾರಾಂಶವನ್ನು ಬರಹರೂಪದಲ್ಲಿ ನೀಡಿದರೆ ಮತ್ತೂ ಹೆಚ್ಚಿನ ಉಪಯೋಗವಾಗುತ್ತದೆಂಬ ಅಭಿಪ್ರಾಯವನ್ನು ಆಗಾಗ್ಗೆ ವ್ಯಕ್ತಪಡಿಸುತ್ತಿದ್ದರು. ಈ ಬಗ್ಗೆ ಬಿ.ಇ.ಎಲ್.ನ ಕಾರ್ಮಿಕ ಸಂಘಟನೆಯಾದ ಯೂನಿಟಿ ಫೋರಮ್‌ನ ಕಾರ್ಯಾಧ್ಯಕ್ಷರಾದ ಶ್ರೀ ಲಕ್ಷ್ಮಣಗೌಡರ ಬಳಿ ಪ್ರಸ್ತಾಪಿಸಿದಾಗ ತಕ್ಷಣವೇ ಸ್ಪಂದಿಸಿ, ಬರೆದು ಕೊಟ್ಟರೆ, ಅದನ್ನು ಪ್ರಕಟಿಸಿ ನಿವೃತ್ತ ಉದ್ಯೋಗಿಗಳಿಗೆ ನೀಡುವುದಾಗಿ ಭರವಸೆಯನ್ನಿತ್ತರು. ಅಷ್ಟೇ ಅಲ್ಲ, ಈ ವಿಚಾರದಲ್ಲಿ ನನ್ನನ್ನು ಕಾರ್ಯೋನ್ಮುಖನನ್ನಾಗಿಸಿ ಈ ಕಿರುಪುಸ್ತಕದ ಪ್ರಕಟಣೆಗೆ ಕಾರಣರಾದರು. ಬಹುಶಃ ಅವರ ಒತ್ತಾಸೆ, ನೆರವು ಇಲ್ಲದಿದ್ದರೆ ಇದರ ಪ್ರಕಟಣೆ ಆಗುತ್ತಿರಲಿಲ್ಲವೆಂದೇ ಹೇಳಬಹುದು. ಅಲ್ಲದೆ ಪುಸ್ತಕಕ್ಕೆ ತಮ್ಮ ಮುನ್ನುಡಿಯನ್ನೂ ಬರೆದುಕೊಟ್ಟಿದ್ದಾರೆ. ಅವರಿಗೆ ನನ್ನ ಧನ್ಯವಾದಗಳು.

ಆರಂಭದಲ್ಲಿ ನನ್ನ ಉಪನ್ಯಾಸ ಕಾರ್ಯಕ್ರಮ ನಡೆಸಲು ಪ್ರೇರಕರಾಗಿ ಸಲಹೆ ಸಹಕಾರ, ಉತ್ತೇಜನ ನೀಡಿದ ತರಬೇತಿ ವಿಭಾಗದ ಮುಖ್ಯಸ್ಥರಾಗಿದ್ದ ಶ್ರೀ ಜಗದೀಶ ಪ್ರಸಾದ್ ಹಾಗೂ ಶ್ರೀಮತಿ ಜಯಶ್ರೀ, ಶ್ರೀ ಚಂದ್ರಶೇಖರ್ ರವರಿಗೆ ಮತ್ತು ಗೆಳೆಯರಾದ ಶ್ರೀ ಸುಬ್ಬಣ್ಣಭಟ್, ಶ್ರೀ ನಾಗನಾಥನ್‌ರವರಿಗೆ ಹಾಗೂ ನನ್ನ ಎಲ್ಲ ಕಾರ್ಯಗಳಲ್ಲಿಯೂ ಸಂಪೂರ್ಣ ಸಹಕಾರವನ್ನಿತ್ತು ನನಗೆ ಸಹಾಯ, ಸಹಕಾರ ನೀಡುತ್ತಿರುವ ಪತ್ನಿ ಉಷಾಗೆ ನನ್ನ ವಂದನೆಗಳು.

ನನ್ನ ಮೇಲಿನ ವಿಶ್ವಾಸದಿಂದ ಆತ್ಮೀಯವಾಗಿ ಶುಭ ಹಾರೈಸಿರುವ ಬಿ.ಇ.ಎಲ್.ನ ಹಣಕಾಸು ನಿರ್ದೇಶಕರಾದ ಶ್ರೀ ಎಮ್.ಜಿ. ರಘುವೀರ್ ಅವರಿಗೆ ಧನ್ಯವಾದಗಳು.

ಪುಸ್ತಕವನ್ನು ಪ್ರಕಟಿಸಲು ನೆರವಾದ ಯೂನಿಟಿಫೋರಂನ ಎಲ್ಲ ಅಧಿಕಾರವರ್ಗದವರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ರಾಜರಾಜೇಶ್ವರಿ ಪ್ರಿಂಟರ್ಸ್‌ರವರಿಗೂ ನನ್ನ ವಂದನೆಗಳು.

ಪುಸ್ತಕದಲ್ಲಿ ಏನಾದರು ತಪ್ಪು ಒಪ್ಪುಗಳಿದ್ದರೆ, ತಿಳಿಸಿದಲ್ಲಿ, ಮುಂದಿನ ಆವೃತ್ತಿಯಲ್ಲಿ ಸರಿಪಡಿಸಲಾಗುವುದು.

– ಎನ್. ಆನಂದರಾಮ ರಾವ್

ನಿವೃತ್ತಿಯ ಚಿಂತೆ ಏಕೆ?



ಪ್ರತಿಯೊಬ್ಬ ಉದ್ಯೋಗಿಯೂ ಒಂದಷ್ಟು ವರ್ಷಗಳ ಸೇವೆಯ ನಂತರ ನಿವೃತ್ತರಾಗುವುದು ಅತ್ಯಂತ ಸಹಜವೂ ಹಾಗೂ ನಿರೀಕ್ಷಿತವಾದುದೂ ಆಗಿರುತ್ತದೆ. ಸಾಮಾನ್ಯವಾಗಿ 58/60 ವರ್ಷಗಳನ್ನು ನಿವೃತ್ತಿಯ ವಯಸ್ಸೆಂದು ನಿಗದಿಪಡಿಸಲಾಗಿರುತ್ತದೆ. ಅದಕ್ಕೆ ಕಾರಣವಿಷ್ಟೆ ಈ ವಯಸ್ಸನ್ನು ದಾಟಿದಾಗ ದೇಹದ ಶಕ್ತಿ ಕುಂದುತ್ತದೆ. ಮಾನಸಿಕ ಚೈತನ್ಯ ಕುಂಠಿತವಾಗುತ್ತದೆ. ಕೆಲಸ ಮಾಡುವ ಶಕ್ತಿ ಕ್ಷೀಣಿಸುತ್ತದೆ. ಅದಕ್ಕಾಗಿಯೇ "ಅರವತ್ತಕ್ಕೆ ಅರಳು ಮರಳು" ಎಂಬ ಗಾದೆ ಪ್ರಚಲಿತದಲ್ಲಿದೆ.

ಈ ಕಾರಣದಿಂದ ನಿವೃತ್ತಿ ಎನ್ನುವುದು ಅನಿವಾರ್ಯ ಎಂಬುದು ಖಚಿತವಾದ ಮೇಲೆ ಪ್ರತಿಯೊಬ್ಬ ನಿವೃತ್ತರೂ ಹೊಸ ಜೀವನಕ್ಕೆ ಹೊಂದಿಕೊಂಡು ಜೀವನ ಶೈಲಿಯಲ್ಲಿ ಸೂಕ್ತ ಮಾರ್ಪಾಡು ಮಾಡಿಕೊಳ್ಳಬೇಕಾದ್ದು ಅತಿ ಅಗತ್ಯವಾಗಿದೆ.

ನಿವೃತ್ತಿ ನಂತರದ ಸಮಸ್ಯೆಗಳು

ನಿವೃತ್ತಿಯ ನಂತರ ಸಾಮಾನ್ಯವಾಗಿ ಎದುರಾಗುವ ಸಮಸ್ಯೆಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು.

1. ಮಾನಸಿಕ ಆರೋಗ್ಯ	Mental health
2. ದೈಹಿಕ ಆರೋಗ್ಯ	Physical health
3. ಆರ್ಥಿಕ ಆರೋಗ್ಯ	Financial health

ಈ ಮೂರೂ ಸಮಸ್ಯೆಗಳಲ್ಲಿ ಯಾವುದೇ ಒಂದು ಸಮಸ್ಯೆಯಿದ್ದರೂ ನಿವೃತ್ತ ಜೀವನದಲ್ಲಿ ಶಾಂತಿ ಸಮಾಧಾನವಿರುವುದಿಲ್ಲ. ಆ ಕಾರಣದಿಂದ ಈ ಸಮಸ್ಯೆಗಳನ್ನು ಆದಷ್ಟು ದೂರ ಮಾಡಿ ನಿಶ್ಚಿಂತರಾಗಿ ಜೀವನ ಸಾಗಿಸಬೇಕಾದ್ದು ಅತಿ ಮುಖ್ಯ.

ಮಾನಸಿಕ ನೆಮ್ಮದಿ



ನಿವೃತ್ತಿಯ ನಂತರ ಬಹು ಮುಖ್ಯವಾಗಿ ಕಾಡುವ ಸಮಸ್ಯೆ ಎಂದರೆ ಸಮಯವನ್ನು ಕಳೆಯುವುದು. ಉದ್ಯೋಗದಲ್ಲಿದ್ದಾಗ ದಿನದ ಬಹು ಭಾಗ ಚಟುವಟಿಕೆಯಾಗಿದ್ದವರು ಏಕಾ ಏಕಿ ಕೆಲಸವಿಲ್ಲದೆ ಮನೆಯಲ್ಲಿ ಕುಳಿತುಕೊಳ್ಳುವುದೆಂದರೆ ಅಂತಹವರ ಪರಿಸ್ಥಿತಿ ನೀರಿನಿಂದ ಹೊರಬಿದ್ದ ಮೀನಿನಂತೆ ಆಗುತ್ತದೆ. ಈ ಹೊಸ ಬದಲಾವಣೆಗೆ ಹೊಂದಿಕೊಳ್ಳುವುದು ಸ್ವಲ್ಪ ಕಷ್ಟದ ಕೆಲಸವೇ ಹೌದು.

ಆದರೆ ಇದಕ್ಕೆ ಪರಿಹಾರವಾದರೂ ಏನು? ಇರುವ ಮಾರ್ಗೋಪಾಯವಾದರೂ ಯಾವುದು? ಈ ಬಗ್ಗೆ ಯೋಚಿಸಿದಾಗ ನಮಗೆ ಹೊಳೆಯುವುದು ಬಿಡುವಿನ ಸಮಯವನ್ನು ಕಳೆಯುವುದಕ್ಕೆ ಹಲವಾರು ಮಾರ್ಗಗಳು ದಾರಿ ತೋರಿಸುತ್ತವೆ. ಅವುಗಳಲ್ಲಿ ಕೆಲವನ್ನು ಉದಾಹರಿಸಬಹುದಾದರೆ :

ಉತ್ತಮ ಸಾಹಿತ್ಯ ಅಂದರೆ ಕಥೆ, ಕವನ ಓದುವುದು

ಒಳ್ಳೆಯ ಉಪನ್ಯಾಸ, ಸಂಗೀತ ಹಾಗೂ ಸಾಂಸ್ಕೃತಿಕ ಮತ್ತು ಕಲಾತ್ಮಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದು

ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಹೋಗುವುದು

ಸಮಾಜ ಸೇವಾ ಸಂಸ್ಥೆಗಳಲ್ಲಿ ಸ್ವಯಂ ಸೇವಕರಾಗಿ ಕಾರ್ಯ ನಿರ್ವಹಿಸುವುದು

ತಾವು ಉದ್ಯೋಗದಲ್ಲಿ ನಿರತರಾಗಿದ್ದಾಗ ಗಳಿಸಿದ ಅನುಭವದ ನೈಪುಣ್ಯತೆಯನ್ನು ಅವಶ್ಯಕತೆ ಇದ್ದವರೊಂದಿಗೆ ಹಂಚಿಕೊಳ್ಳುವುದು – ಬರಹ ರೂಪದಲ್ಲಿ ಪ್ರಕಟಿಸುವುದು.

ಉಪನ್ಯಾಸಗಳನ್ನು ನೀಡುವುದು

ಭಾಷಾ ಪಾಂಡಿತ್ಯವಿದ್ದಲ್ಲಿ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದ ಮಾಡುವುದು.

ತೋಟಗಾರಿಕೆಯಲ್ಲಿ ಆಸಕ್ತಿಯಿದ್ದರೆ ಅಂತಹ ಹವ್ಯಾಸದಲ್ಲಿ ನಿರತರಾಗುವುದು.

ಕುಟುಂಬದವರೊಡನೆ ಸಾಮರಸ್ಯದ ಬದುಕು

ಸಾಮಾನ್ಯವಾಗಿ ನಿವೃತ್ತಿ ಎಂದರೆ ವೃದ್ಧಾಪ್ಯವನ್ನು ಮೆಟ್ಟಿದಂತೆಯೇ. ಪ್ರತಿಯೊಬ್ಬರ ಜೀವನದಲ್ಲಿಯೂ ಸಂಭವಿಸಲೇ ಬೇಕಾದ, ಯಾರೊಬ್ಬರೂ ತಪ್ಪಿಸಿಕೊಳ್ಳಲೇ ಆಗದ, ಸಂದಿಗ್ಧದ ಪರಿಸ್ಥಿತಿ ಎಂದೆನ್ನಬಹುದು. ಮಾನವನ ಬದುಕಿನ ಅಂತಿಮ ಹಂತವೇ ವೃದ್ಧಾಪ್ಯ.

ಹಿಂದಿನ ಕಾಲದಲ್ಲಿಯಾದರೋ, ಹಿರಿಯ ಜೀವಿಗಳಿಗೆ ಮನೆಗಳಲ್ಲಿ ಪೂಜ್ಯಸ್ಥಾನ ಇರುತ್ತಿತ್ತು. ಹಿರಿಯರಿದ್ದರೆ ಮನೆಗೆ ಭೂಷಣ ಎನ್ನುವ ಅಭಿಪ್ರಾಯ ಇತ್ತು. ಹೆತ್ತ ತಂದೆ ತಾಯಿಗಳನ್ನು ಗೌರವಿಸಿ ಆದರಿಸಿ ಅವರ ಬೇಕು ಬೇಡಗಳನ್ನು ಗಮನಿಸಿಕೊಂಡು ಅವರನ್ನು ಪೋಷಿಸುವ ಮನೋ ಇಚ್ಛೆ ಇರುತ್ತಿತ್ತು. ಆದರೆ ಈಗ ಕಾಲ ಬದಲಾಗಿದೆ. ಪೂಜ್ಯಭಾವ ಹೋಗಿ ತಿರಸ್ಕಾರ, ಅಸಡ್ಡೆಯ ಮನೋಭಾವ ಬೀರೂರತೊಡಗಿದೆ. ಹಿರಿಯ ಜೀವಿಗಳು ತಮಗೆ ಹೊರೆ ಎಂದು ಭಾವಿಸುವವರೇ ಹೆಚ್ಚಾಗಿರುವ ಪರಿಸ್ಥಿತಿ ಈಚಿನ ದಿನಗಳಲ್ಲಿ ಕಾಣುತ್ತಿದೆ. ತಂದೆ ತಾಯಿಗಳನ್ನು ಮನೆಯಲ್ಲಿಟ್ಟುಕೊಂಡು ಸಹ ಬಾಳ್ವೆ ನಡೆಸುವ ಬದಲು ಅವರನ್ನು ದೂರದ ವೃದ್ಧಾಶ್ರಮಗಳಿಗೆ ಕಳಿಸಿ "ತಾವು ತಮ್ಮ ಗಂಡ ಹೆಂಡತಿ ಮಕ್ಕಳೇ ನಮ್ಮ ಪ್ರಪಂಚ" ಎನ್ನುವ ವಿಚಿತ್ರ ವಾತಾವರಣ ಹೆಚ್ಚಾಗುತ್ತಿದೆ.



ಇದಕ್ಕೆ ಕೇವಲ ಮಕ್ಕಳು ಸೊಸೆಯಂದಿರನ್ನೇ ಆಕ್ಷೇಪಿಸಿ, ದೂಷಿಸುವುದೂ ಸರಿಯಲ್ಲ. ಹಿರಿಯರೆನಿಸಿಕೊಂಡವರೂ ಸಹ ಕಿರಿಯರೊಡನೆ ಹೊಂದಿಕೊಂಡು ಸಹ-ಜೀವನ ನಡೆಸುವ ಮನೋಭಾವವನ್ನು ರೂಢಿಸಿಕೊಳ್ಳಬೇಕು. ಮಕ್ಕಳು ಮೊಮ್ಮಕ್ಕಳುಗಳೊಂದಿಗೆ ಪ್ರೀತಿ ವಿಶ್ವಾಸದಿಂದಿರಬೇಕು. ಸಹನೆ-ಸೌಹಾರ್ದತೆಯ ಮನೋಭಾವವನ್ನು ಹೊಂದಿದವರಾಗಿರಬೇಕು. ಸಾಧ್ಯವಾದಷ್ಟು ತಮ್ಮ ಸಣ್ಣ ಪುಟ್ಟ ಸಮಸ್ಯೆಗಳನ್ನು ಅವರ ಗಮನಕ್ಕೆ ತಾರದೆ ತಾವೇ ಬಗೆಹರಿಸಿಕೊಳ್ಳುವ ಅಭ್ಯಾಸ ಬೆಳೆಸಿಕೊಳ್ಳಬೇಕು.

ಕುಟುಂಬದ ಸದಸ್ಯರಲ್ಲಿ ಒಬ್ಬರ ಮೇಲೆ ಇನ್ನೊಬ್ಬರ ಬಳಿ ಚಾಡಿ ಹೇಳುವುದು, ಕ್ಷುಲ್ಲಕ ಆಪಾದನೆ ಮಾಡುವುದು, ಅವರೊಡನೆ ಕೀಳಾಗಿ ವರ್ತಿಸುವುದು. ಒಬ್ಬರಿಗೊಬ್ಬರ ಮನಸ್ಸು ಕೆಡುವಂತೆ ನೋಡುವುದು ಮುಂತಾದ ಕೀಳುಮಟ್ಟದ ನಡವಳಿಕೆಗಳಿಂದ

ದೂರವಿರಬೇಕು. ಸಣ್ಣ ಪುಟ್ಟ ಸಮಸ್ಯೆಗಳನ್ನೇ ದೊಡ್ಡದು ಮಾಡಿ, ರಣಾರಂಪ ಮಾಡಿ ಮನೆ ಮಂದಿಯೆಲ್ಲರ ಶಾಂತಿ ನೆಮ್ಮದಿಯನ್ನು ಕದಡಬಾರದು.

ನಿವೃತ್ತಿಯ ನಂತರ ಬಹಳಷ್ಟು ಮಂದಿ ನಿವೃತ್ತರಲ್ಲಿ 'ತಾನು ಯಾರಿಗೂ ಬೇಡವಾದವನು' 'ತನಗೆ ಮನೆಯಲ್ಲಿ ಪ್ರಾಧಾನ್ಯತೆ ಇಲ್ಲ' 'ಎಲ್ಲರೂ ನನ್ನನ್ನು ಕಡೆಗಣಿಸುತ್ತಿದ್ದಾರೆ' ಎಂಬ ಕೀಳರಿಮೆ ಉಂಟಾಗುತ್ತದೆ. ಈ ಕಾರಣದಿಂದ ಸಂಸಾರದಲ್ಲಿ ಅಸಹಜ ರೀತಿಯಲ್ಲಿ ವರ್ತಿಸುತ್ತಾರೆ. ಮನೆಯವರ ಮೇಲೆ ಅಧಿಕಾರವನ್ನು ಚಲಾಯಿಸಲು ಆರಂಭಿಸುತ್ತಾರೆ. ಇದರಿಂದಾಗಿ ಎಲ್ಲರ ಮನಸ್ಸಿಗೂ ಕಿರಿಕಿರಿಯುಂಟಾಗುತ್ತದೆ. ಪರಸ್ಪರ ವೈಮನಸ್ಯ ಮೂಡುತ್ತದೆ. ಇಂತಹ ವಿಚ್ಛಿದ್ರಕಾರಿ ಮನೋಭಾವವನ್ನು ದೂರ ಮಾಡಬೇಕು. ತಮ್ಮ ನಡೆ ನುಡಿಯಿಂದ ವರ್ತನೆಯಿಂದ ಕುಟುಂಬದ ಎಲ್ಲ ಸದಸ್ಯರೂ ಸಂತೋಷದಿಂದ ಪ್ರೀತಿ ವಿಶ್ವಾಸದಿಂದ ಇರುವಂತೆ ವರ್ತಿಸಬೇಕು.

ಸಂಸಾರದಲ್ಲಿ ಸುಖವಾಗಿ ಸಂತೋಷವಾಗಿ ಬಾಳಬೇಕಾದರೆ ಸಾಮರಸ್ಯದ ಬದುಕನ್ನು ನಡೆಸಬೇಕು. ಅದಕ್ಕಾಗಿ ಕೆಲವು ಸರಳ ರೀತಿಯ ಕ್ರಮಗಳನ್ನು ಅನುಸರಿಸಬೇಕು.

ಕುಟುಂಬದಲ್ಲಾಗಲಿ, ಸಮಾಜದಲ್ಲಾಗಲಿ ಅಧಿಕಾರ ಚಲಾಯಿಸಬಾರದು.

ವಯಸ್ಸಿನ ಹಿರಿತನದಿಂದ ಪ್ರಾಧಾನ್ಯತೆಯನ್ನು ಅಪೇಕ್ಷಿಸಬಾರದು.

ಮತ್ತೊಬ್ಬರಿಂದ ಸಹಾನುಭೂತಿಯನ್ನು ಅಪೇಕ್ಷಿಸಬಾರದು.

ವಯಸ್ಸಿಗೆ ಬಂದ ಮಕ್ಕಳ ವಿಚಾರದಲ್ಲಿ ಅನಗತ್ಯವಾಗಿ ತಲೆ ಹಾಕಬಾರದು.

ಪ್ರತಿಯೊಬ್ಬ ನಿವೃತ್ತರೂ ಗಮನಿಸಲೇಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ, ಸಾಧ್ಯವಾದಷ್ಟು ತಮ್ಮ ಸ್ವಂತ ಆರ್ಥಿಕ ಬಲದ ಮೇಲೆ ತಮ್ಮ / ಮತ್ತು ತಮ್ಮ ಹೆಂಡತಿಯ ಸಣ್ಣ ಪುಟ್ಟ ಅಗತ್ಯತೆಯನ್ನು ಪೂರೈಸಿಕೊಳ್ಳಬೇಕು. ಆರ್ಥಿಕವಾಗಿ ಇನ್ನೊಬ್ಬರಿಗೆ ಹೊರೆಯಾಗದಂತೆ, ತಾವು ನಿವೃತ್ತಿಯ ಸಮಯದಲ್ಲಿ ಪಡೆದ ಸೇವಾಂತ್ಯ ಸೌಲಭ್ಯಗಳನ್ನು ಸುರಕ್ಷಿತ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಿ ಅದರಿಂದ ಪಡೆಯುವ ಆದಾಯದ ಮೂಲಕ ಆರ್ಥಿಕ ಸ್ವಾವಲಂಬನೆಯಿಂದಿರಲು ಮನಸ್ಸು ಮಾಡಬೇಕು.

ದೈಹಿಕ ಆರೋಗ್ಯ



ನಿವೃತ್ತಿಯ ನಂತರ ಪ್ರತಿಯೊಬ್ಬರನ್ನೂ ಕಾಡುವುದು ಆರೋಗ್ಯ ಸಮಸ್ಯೆ. ಹದಿಹರಯವನ್ನು ದಾಟಿ ವಯಸ್ಸು ಐವತ್ತು ಸಮೀಪಿಸುತ್ತಿದ್ದಂತೆ ವಯಸ್ಸಿಗೆ ಸಹಜವಾದ ಹಲವಾರು ಕಾಯಿಲೆಗಳು ಬಾಧಿಸುತ್ತವೆ. ಅದರಲ್ಲಿಯೂ ಪ್ರಮುಖವಾಗಿ ಸಕ್ಕರೆ ಕಾಯಿಲೆ, ರಕ್ತದೊತ್ತಡ, ಹೃದಯದ ಬೇನೆಗಳು ನಮ್ಮ ದೇಹದ ಮೇಲೆ ತಮ್ಮ ಅಸ್ತಿತ್ವವನ್ನು ಸಾರುತ್ತವೆ.

ಇವುಗಳಿಂದ ದೂರವಿರಬೇಕಾದರೆ ಕೆಲವೊಂದು ಪದ್ಧತಿಗಳನ್ನು ನಮ್ಮ ಜೀವನಕ್ರಮದಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ. ಕೆಲವನ್ನು ವರ್ಜಿಸಬೇಕಾಗುತ್ತದೆ. ಮತ್ತೆ ಕೆಲವನ್ನು ಅನುಸರಿಸಬೇಕಾಗುತ್ತದೆ.

ಅನುಸರಿಸಬೇಕಾದ ಕೆಲವು ಕ್ರಮಗಳೆಂದರೆ ಪ್ರತಿ ನಿತ್ಯವೂ ವಾಕಿಂಗ್ ಮಾಡುವ ಅಭ್ಯಾಸವನ್ನು ರೂಢಿಸಿಕೊಳ್ಳುವುದು. "ಪ್ರತಿದಿನದ ಅರ್ಧ ಮುಕ್ಕಾಲು ಗಂಟೆಯ ನಡಿಗೆ – ಆರೋಗ್ಯದ ಕಡೆಗೆ" ಎಂಬುದು ನಿಶ್ಚಿತದ ಮಾತು. ನಡಿಗೆಯಿಂದ ಹೃದಯಕ್ಕೆ ಆಮ್ಲಜನಕ ಪೂರೈಕೆಯಾಗುತ್ತದೆ. ಹೃದಯಕ್ಕೆ ವ್ಯಾಯಾಮ ದೊರೆತು ರಕ್ತನಾಳಗಳು ಪುಷ್ಟಿಗೊಂಡು ರಕ್ತ ಸಂಚಾರ ಸರಾಗವಾಗಿ ನಡೆಯುತ್ತದೆ. ಹೃದಯದ ಕಾರ್ಯ ಸಾಮರ್ಥ್ಯ ಹೆಚ್ಚುತ್ತದೆ.


ಪ್ರತಿದಿನದ ನಡಿಗೆ / ವಾಕಿಂಗ್ / ಸಕ್ಕರೆ ಕಾಯಿಲೆ ಇರುವವರಿಗೆ ಒಳ್ಳೆಯ ವ್ಯಾಯಾಮ

ಮಾನಸಿಕ ಒತ್ತಡ ಕಡಿಮೆಯಾಗುತ್ತದೆ.

ಲವಲವಿಕೆ ಮುಖಕಾಂತಿ ಹೆಚ್ಚುತ್ತದೆ.

ಅಲ್ಲದೆ ಯೋಗಾಭ್ಯಾಸ, ದೈಹಿಕ ವ್ಯಾಯಾಮ ಮುಂತಾದವು ಸಹ ಆರೋಗ್ಯವನ್ನು ಕಾಪಾಡಿಕೊಳ್ಳುವುದರಲ್ಲಿ ನೆರವಾಗುತ್ತದೆ.

ಆರೋಗ್ಯ ಮತ್ತು ಆಹಾರ ಸೇವನೆ



ಆಹಾರ ಸೇವನೆಯು ಆರೋಗ್ಯ ಕಾಪಾಡಿಸಕೊಳ್ಳುವುದರಲ್ಲೂ ಪ್ರಮುಖ ಪಾತ್ರ ವಹಿಸುತ್ತದೆ. "ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ" ಎಂಬ ನಾಣ್ಣುಡಿಯಂತೆ ಯಾರು ಆಹಾರದ ಬಗ್ಗೆ ಎಚ್ಚರವಹಿಸುವರೋ ಅಂತಹವರನ್ನು ಯಾವ ರೋಗವೂ ಕಾಡುವುದಿಲ್ಲ.

ಆಹಾರದ ನಿಯಮಗಳಲ್ಲಿ ಹೇಳಿರುವಂತೆ ಹಸಿವಾದಾಗ ಮಾತ್ರ ಊಟ ಮಾಡುವದು ಒಳ್ಳೆಯದು. ಸಾತ್ವಿಕ ಆಹಾರ - ಸಾತ್ವಿಕ ವಿಚಾರ ಉತ್ತಮ ಆರೋಗ್ಯದ ಆಧಾರ. ಹಸಿರು ತರಕಾರಿ, ನಾರಿನ ತರಕಾರಿ, ಮೊಳಕೆ ಧಾನ್ಯಗಳನ್ನು ಜಾಸ್ತಿ ಸೇವಿಸಬೇಕು. ಜಿಡ್ಡಿನ ಪದಾರ್ಥ, ಸಕ್ಕರೆ, ಮಾಂಸಾಹಾರಗಳನ್ನು ಸಾಧ್ಯವಾದಷ್ಟೂ ಕಡಿಮೆ ಮಾಡಬೇಕು.

ಇಷ್ಟೆಲ್ಲ ಕ್ರಮಗಳನ್ನು ಅನುಸರಿಸಿಯೂ ಕೆಲವೊಮ್ಮೆ ರೋಗ ನಮ್ಮನ್ನು ಆವರಿಸುತ್ತದೆ. ಅಂತಹ ಸಂದರ್ಭದಲ್ಲಿ ಅದನ್ನೇ ಮನಸ್ಸಿಗೆ ಹಚ್ಚಿಕೊಳ್ಳದೆ, ಚಿಂತೆಯ ದಾಸರಾಗದೆ, ವೈದ್ಯರ ಮಾರ್ಗದರ್ಶನದಂತೆ ಔಷಧಿ ಸೇವನೆ ಮಾಡಲೇಬೇಕು. ಸುಖಕ್ಕೆ ಸ್ಪಂದಿಸಿದಂತೆ ಕಷ್ಟ (ದುಃಖ)ಕ್ಕೆ ಸ್ಪಂದಿಸುವ ಸಮಾನ ಮನೋಭಾವವನ್ನು ರೂಢಿಸಿಕೊಳ್ಳಬೇಕು. "ಬಂದದ್ದೆಲ್ಲ ಬರಲಿ" ಎಂದು ವಿಧಿಗೆ ಶರಣಾಗಲೇಬೇಕು.

ಆರ್ಥಿಕ ಆರೋಗ್ಯ

ನಿವೃತ್ತಿಯ ನಂತರ ಮಾನಸಿಕ ಹಾಗೂ ಆರೋಗ್ಯದ ಕಡೆ ನಿಗಹರಿಸಿದ ಒಳಿತು ಸಹಜವಾಗಿ ಗಮನಹರಿಸಬೇಕಾಗಿರುವುದು ಹಣಕಾಸಿನ ಸಮಸ್ಯೆಯತ್ತ.



ನಿವೃತ್ತಿಯಾಗುವವರೆಗೂ ಪ್ರತಿ ತಿಂಗಳೂ ಕ್ರಮವಾಗಿ ಸಂಬಳ ದೊರಕುತ್ತಿದ್ದು ಜೀವನ ನಡೆಸಲು ಸುಸೂತ್ರವಾಗಿರುತ್ತಿತ್ತು. ಆದರೆ ನಿವೃತ್ತಿಯಾದ ಮಾರನೆಯ ತಿಂಗಳಿನಿಂದಲೇ ಕ್ಲುಪ್ತವಾಗಿ ಬರುತ್ತಿದ್ದ ಸಂಬಳ ನಿಂತು ಹೋಗುತ್ತದೆ. ಪೆನ್ಷನ್ ಸೌಲಭ್ಯವಿರುವ ಉದ್ಯೋಗಸ್ಥರಿಗಾದರೋ ಸ್ವಲ್ಪ ನಿಗದಿತ ವರಮಾನ ಪೆನ್ಷನ್ ರೂಪದಲ್ಲಿ ಬರುತ್ತದೆ. ಆದರೆ ಆ ಸೌಲಭ್ಯವಿಲ್ಲದವರಿಗೆ ಎದುರಾಗುವ ಸಮಸ್ಯೆಗಳು ಹಲವಾರು. ಅದಕ್ಕಾಗಿಯೇ ಚೀನಿ ಗಾದೆಯೊಂದು ಈ ರೀತಿ ಪ್ರಚಲಿತದಲ್ಲಿದೆ – "ವೃದ್ಧಾಪ್ಯಕ್ಕಾಗಿ ಹಣ ಹಾಗೂ ಗೆಳೆಯರನ್ನು ಕೂಡಿಡು".

ಈ ಸಂದರ್ಭದಲ್ಲಿ ಗಮನಿಸಬೇಕಾದ ಮಹತ್ತರ ಅಂಶವೆಂದರೆ ಉದ್ಯೋಗದಿಂದ ನಿವೃತ್ತರಾದಾಗ ಯಾರೂ ಬರಿಗೈಯಿಂದ ಮನೆಗೆ ಬರುವುದಿಲ್ಲ. ಅವರಿಗಾಗಿ ನಿವೃತ್ತಿಯ ಹಲವಾರು ಸೌಲಭ್ಯಗಳು ದೊರಕುತ್ತವೆ. ಅವುಗಳನ್ನು ಸೇವಾಂತ್ಯ ಸೌಲಭ್ಯಗಳು (terminal benefits) ಎಂದು ಕರೆಯಬಹುದು. ಈ ಹಣದ ಆಧಾರದ ಮೇಲೆಯೇ ನಿವೃತ್ತಿದಾರರು ತಮ್ಮ ಮುಂದಿನ ಇಡೀ ಜೀವನವನ್ನು ನಿರ್ವಹಿಸಬೇಕಾಗುತ್ತದೆ. ಈ ಸೇವಾಂತ್ಯ ಸೌಲಭ್ಯವೇ ಅವರ ಜೀವನದ ಸೋಪಾನವಾಗುತ್ತದೆ. ಅವರ ಜೀವನದ ಶ್ರೀರಕ್ಷೆಯಾಗಿ ಅವರ ಜೀವಮಾನ ಪರ್ಯಂತ ಕಾಪಾಡುತ್ತದೆ.

ಹಾಗಾಗಿ ಈ ಸೇವಾಂತ್ಯ ಸೌಲಭ್ಯಗಳ್ಯಾವುವು, ಎಷ್ಟು ದೊರಕುತ್ತದೆ ಎಂಬುದರ ಬಗ್ಗೆ ಗಮನ ಹರಿಸಬೇಕಾಗಿದೆ.

ಸೇವಾಂತ್ಯ ಸೌಲಭ್ಯಗಳು (terminal benefits)

ನಿವೃತ್ತಿಯ ಸಮಯದಲ್ಲಿ ಒಬ್ಬ ಉದ್ಯೋಗಿಗೆ ದೊರಕಬಹುದಾದ ಸೇವಾಂತ್ಯ ಸೌಲಭ್ಯಗಳು ಪ್ರಮುಖವಾಗಿ ಕೆಳಕಂಡಂತಿರುತ್ತವೆ :



1. ನಿವೃತ್ತಿ ವೇತನ Pension
2. ಭವಿಷ್ಯನಿಧಿ Provident fund
3. ಉಪದಾನ Gratuity
4. ಗಳಿಕೆಯ ರಜದ ನಗದೀಕರಣ Leave Encashment

ನಿವೃತ್ತಿ ವೇತನ (Pension)

ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಉದ್ಯೋಗಿಗಳಿಗೆ ಅವರ ನಿವೃತ್ತಿ ನಂತರ ಅವರ ಸೇವಾ ನಿಯಮಗಳಿಗೆ ಅನುಗುಣವಾಗಿ ಅವರು ಪಡೆಯುತ್ತಿದ್ದ ವೇತನದ ಆಧಾರದ ಮೇಲೆ ನಿವೃತ್ತಿ ವೇತನವನ್ನು ಮತ್ತು ಅದಕ್ಕೆ ಅನ್ವಯವಾಗುವ ತುಟ್ಟಿಭತ್ಯೆಯನ್ನು ನೀಡಲಾಗುತ್ತದೆ. ಇದನ್ನು ಪ್ರತಿ ತಿಂಗಳೂ, ನಿವೃತ್ತದಾರನ ಜೀವಮಾನ ಪರ್ಯಂತ ನೀಡಲಾಗುವುದು. ಆತನ ನಿಧನಾ ನಂತರ ಆತನ / ಆಕೆಯ ಪತ್ನಿ / ಪತಿಗೆ ಕುಟುಂಬ ನಿವೃತ್ತಿ ವೇತನವಾಗಿ ನೀಡಲಾಗುವುದು.

ಕೈಗಾರಿಕಾ ಕಾರ್ಮಿಕರಿಗೆ ನಿವೃತ್ತಿ ವೇತನ
Pension for Industrial Employees

ನಿವೃತ್ತಿ ವೇತನವು ಸರ್ಕಾರೀ ನೌಕರರಿಗೆ ಸಿಗುವ ಸೌಲಭ್ಯವಾದರೆ ಕೈಗಾರಿಕೆಗಳಲ್ಲಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿರುವ ಉದ್ಯೋಗಿಗಳಿಗೆ ಈ ಸೌಲಭ್ಯ ಸಿಗುವುದಿಲ್ಲ.

ಆದರೆ ಭವಿಷ್ಯನಿಧಿ ಕಾಯಿದೆಯಡಿಯಲ್ಲಿ ಲಭ್ಯವಿರುವ ನೌಕರರ ಕುಟುಂಬ ನಿವೃತ್ತಿಯೋಜನೆ – 1971 (Employees Family Pension Scheme 1971) ಹಾಗೂ ನೌಕರರ ನಿವೃತ್ತಿ ಯೋಜನೆ – 1995 (Employees Pension Scheme 1995) ರಲ್ಲಿ ಸದಸ್ಯರಾಗಿರುವ ಎಲ್ಲ ನೌಕರರಿಗೆ ನಿಯಮಗಳಿಗೊಳಪಟ್ಟು ನಿವೃತ್ತಿ ವೇತನವನ್ನು ನೀಡಲಾಗುವುದು. ಈ ಯೋಜನೆಯಡಿಯಲ್ಲಿ ನೌಕರರಿಗೆ ಅವರು 58 ವರ್ಷ ದಾಟಿದಾಗ ನಿವೃತ್ತಿ ವೇತನವು ದೊರಕುತ್ತದೆ. ಅವರು ಬದುಕಿರುವವರೆಗೂ ಅವರಿಗೆ ಸಿಗುತ್ತಿದ್ದು ಅವರ ನಿಧನಾ ನಂತರ ಆತನ / ಆಕೆಯ ಪತ್ನಿ / ಪತಿಗೆ ಈ ಸೌಲಭ್ಯವನ್ನು ನೀಡಲಾಗುವುದು.

ನಿವೃತ್ತಿ ವೇತನದ ಮೂರನೇ ಒಂದು ಭಾಗದಷ್ಟನ್ನು ಪರಿವರ್ತಿತ ನಿವೃತ್ತಿ ವೇತನವನ್ನಾಗಿ (commutation) ಪಡೆಯಲು ಅವಕಾಶವಿರುತ್ತದೆ.

ಭವಿಷ್ಯ ನಿಧಿ Provident Fund

ಕೈಗಾರಿಕೆಗಳಲ್ಲಿ ಕೆಲಸ ಮಾಡುವ ನೌಕರರಿಗೆ ಭವಿಷ್ಯನಿಧಿ ಯೋಜನೆ – 1952 ಅನ್ವಯವಾಗುತ್ತದೆ. (Provident Fund Act 1952) ಈ ಯೋಜನೆಯನ್ವಯ ನೌಕರನ ಪ್ರತಿ ತಿಂಗಳ ವೇತನದ ಒಂದು ಭಾಗವನ್ನು (ಪ್ರಸ್ತುತ ಈ ದರ ಶೇ. 12) ಕಡಿತಗೊಳಿಸಿ ಅದಕ್ಕೆ ತತ್ಸಮವಾದ ಆಡಳಿತ ವರ್ಗದ ವಂತಿಗೆಯನ್ನು ಸೇರಿಸಿ ನೌಕರರ ಭವಿಷ್ಯನಿಧಿ ಖಾತೆಗೆ ಜಮಾ ಮಾಡಲಾಗುವದು. ಹೀಗೆ ಒಟ್ಟುಗೂಡಿದ ಮೊತ್ತಕ್ಕೆ ವಾರ್ಷಿಕವಾಗಿ ನಿಗದಿಪಡಿಸಿದ ದರದಲ್ಲಿ (ಪ್ರಸ್ತುತ ಶೇ. 8.5) ಬಡ್ಡಿಯ ಹಣವನ್ನು ಸಂದಾಯ ಮಾಡಲಾಗುತ್ತದೆ. ನೌಕರನು ನಿವೃತ್ತನಾಗುವ ವೇಳೆಗೆ ಹೀಗೆ ಸಂಚಿತವಾದ ಮೊತ್ತವು ಗಣನೀಯವಾಗಿರುತ್ತದೆ. ಯೋಜನೆಯ ಹೆಸರೇ ಸೂಚಿಸುವಂತೆ ನಿವೃತ್ತಿಯ ನಂತರದ ಭವಿಷ್ಯದ ಜೀವನಕ್ಕೆ ಆ ಹಣವು ನೆರವಾಗುತ್ತದೆ.

ಉಪದಾನ Gratuity

ಉಪದಾನವು ಸಾಮಾಜಿಕ ಸುರಕ್ಷಾ ಯೋಜನೆಯಾಗಿದ್ದು ಎಲ್ಲಾ ಸರ್ಕಾರಿ ನೌಕರರಿಗೂ ಲಭ್ಯವಿರುತ್ತದೆ. ಸೇವೆಯಲ್ಲಿದ್ದಾಗ ನೌಕರರು ಸಲ್ಲಿಸಿದ ನಿಷ್ಠಾವಂತ ಹಾಗೂ ಪ್ರಾಮಾಣಿಕ ಸೇವೆಗೆ ಆಡಳಿತವರ್ಗವು ನೀಡುವ ಕೊಡುಗೆ ಇದಾಗಿರುತ್ತದೆ. ಕೈಗಾರಿಕೆಗಳಲ್ಲಿ ಉದ್ಯೋಗಸ್ಥರಾಗಿರುವ ನೌಕರರಿಗೆ Payment of Gratuity Act 1972ರ ಅನ್ವಯ ಉಪದಾನವು ಲಭ್ಯವಾಗುತ್ತದೆ. ಉದ್ಯೋಗಿಯು ಸಲ್ಲಿಸಿದ ಪ್ರತಿವರ್ಷದ ಸೇವೆಗೆ 15 ದಿನಗಳ ವೇತನದಂತೆ ಲೆಕ್ಕಾಚಾರ ಮಾಡಿ ಉಪದಾನವನ್ನು ನೀಡಲಾಗುತ್ತದೆ. ಹೀಗೆ ಲಭ್ಯವಾಗುವ ಗರಿಷ್ಠ ಮೊತ್ತ ಪ್ರಸ್ತುತ 3 1/2 ಲಕ್ಷವಿದ್ದು ಅದನ್ನು 10 ಲಕ್ಷ ರೂ.ಗಳಿಗೆ ಏರಿಸುವ ಸಂಭವವಿದೆ.

ಕೊನೆಯ ತಿಂಗಳಿನಲ್ಲಿ ಪಡೆದ ವೇತನ (ಮೂಲವೇತನ ಮತ್ತು ತುಟ್ಟಿ ಭತ್ಯೆ) ವನ್ನು 26 ದಿನಗಳಿಂದ ಭಾಗಿಸಿದರೆ ಬರುವ ವೇತನವನ್ನು ದಿನ ಒಂದಕ್ಕೆ ಎಂದು ಪರಿಗಣಿಸಿ)

ರಜೆಯ ನಗದೀಕರಣ Leave encashment

ಉದ್ಯೋಗಿಯು ಸೇವೆಯಲ್ಲಿರುವಾಗ ಆತನು ಗಳಿಸಿ ಉಳಿಸಿದ ಹಕ್ಕಿನ ರಜೆ (earned leave)/ವಾರ್ಷಿಕ ರಜೆಗೆ (annual leave) ನಿವೃತ್ತಿಯ ಸಮಯದಲ್ಲಿ ಆ ರಜೆಗೆ ತತ್ಸಮವಾದ ವೇತನವನ್ನು ನೀಡಲಾಗುವುದು. 300 ದಿನಗಳತನಕ ನಗದೀಕರಿಸಲು ಬಿ.ಇ.ಎಲ್ ಉದ್ಯೋಗಿಗಳಿಗೆ ಅವಕಾಶವಿರುತ್ತದೆ.

ಮೇಲೆ ತಿಳಿಸಿರುವ ಎಲ್ಲಾ ಸೌಲಭ್ಯಗಳಿಗೂ ಕೆಲವು ನಿಯಮಗಳಿಗೊಳಪಟ್ಟಂತೆ ಆದಾಯ ತೆರಿಗೆಯ ವಿನಾಯಿತಿ ಇರುತ್ತದೆ.

ಬಿ.ಇ.ಎಲ್. ಉದ್ಯೋಗಿಗಳಿಗೆ ದೊರಕುವ ಮತ್ತಷ್ಟು ಸೌಲಭ್ಯಗಳು

ಸಾಮೂಹಿಕ ಉಳಿತಾಯ ಪೂರಕ ವಿಮಾ ಯೋಜನೆ

Group Savings Linked Insurance Scheme

ಈ ಯೋಜನೆಯು 01.06.1993 ರಿಂದ ಜಾರಿಗೆ ಬಂದಿದ್ದು ಉದ್ಯೋಗಿಯ ವೇತನ ಶ್ರೇಣಿಗೆ ಅನುಗುಣವಾಗಿ ವಂತಿಗೆಯನ್ನು ಸಂಬಳದಲ್ಲಿ ಹಿಡಿಯಲಾಗುವುದು. ಹೀಗೆ ಹಿಡಿಯಲಾದ ವಂತಿಗೆಯಲ್ಲಿ ಶೇಕಡಾ 35 ರಷ್ಟನ್ನು ಆಕಸ್ಮಿಕ ವಿಮೆಗೂ, ಶೇಕಡಾ 65 ರಷ್ಟನ್ನು ಉಳಿತಾಯದ ಬಾಬ್ತಿಗೂ ಜಮಾ ಮಾಡಲಾಗುತ್ತದೆ.

ಉಳಿತಾಯದ ಹಣಕ್ಕೆ ಕಾಲಾನುಕಾಲಕ್ಕೆ ನಿಗದಿಪಡಿಸಲಾಗುವ ಬಡ್ಡಿಯ ದರದಲ್ಲಿ ಪ್ರತಿವರ್ಷವೂ ಬಡ್ಡಿಯನ್ನು ನೀಡಲಾಗುತ್ತದೆ. ಆದಾಯ ತೆರಿಗೆ ನಿಯಮದ ಪ್ರಕಾರ ಮಾಸಿಕ ಕಂತುಗಳಿಗೆ ವರಮಾನ ತೆರಿಗೆಯಿಂದ ವಿನಾಯಿತಿ ಸಿಗುತ್ತದೆ.

ಈ ಯೋಜನೆಯ ಲೆಕ್ಕಪತ್ರವನ್ನು ಆಡಳಿತ ವರ್ಗವೇ ನೋಡಿಕೊಳ್ಳುತ್ತದೆ. ಕಾರ್ಮಿಕನು ಸೇವೆಯಲ್ಲಿದ್ದಾಗ, ದುರದೃಷ್ಟವಶಾತ್ ನಿಧನ ಹೊಂದಿದರೆ ಆತನು ನಾಮ ನಿರ್ದೇಶನ ಮಾಡಿರುವ ವ್ಯಕ್ತಿಗೆ, ಮೃತ ಉದ್ಯೋಗಿಯು ನೀಡುತ್ತಿದ್ದ ಮಾಸಿಕ ಕಂತಿನ ಆಧಾರದ ಮೇಲೆ ವಿಮೆಯ ಹಣವನ್ನು ಮತ್ತು ಜೊತೆಗೆ ಸಂಚಿತವಾಗಿರುವ ಉಳಿತಾಯದ ಮೊತ್ತವನ್ನು ಬಡ್ಡಿಯ ಸಮೇತ ನೀಡಲಾಗುತ್ತದೆ.

ಪ್ರಸ್ತುತ ಉದ್ಯೋಗಿಯು ಸಲ್ಲಿಸುತ್ತಿರುವ ವಂತಿಗೆ ಹಾಗೂ ನಿಧನ / ನಿವೃತ್ತಿಯ ಸಮಯದಲ್ಲಿ ಪಡೆಯುವ ಹಣ ಈ ರೀತಿ ಇದೆ :

ವೇತನ ಶ್ರೇಣಿ	ತಿಂಗಳ ವಂತಿಗೆ	ನಿಧನರಾದಾಗ ಪಡೆಯುವ ಹಣ	ನಿವೃತ್ತರಾದಾಗ ಪಡೆಯುವ ಹಣ
1–2	40 ರೂ.	40,000 + ಉಳಿತಾಯದ ಹಣ	ಉಳಿತಾಯದ ಹಣ
3–5	75 ರೂ.	75,000 + ಉಳಿತಾಯದ ಹಣ	ಉಳಿತಾಯದ ಹಣ
1–10	115 ರೂ.	1,15,000 + ಉಳಿತಾಯದ ಹಣ	ಉಳಿತಾಯದ ಹಣ
ಅಧಿಕಾರಿಗಳು ಮತ್ತು ಟಿ.ಸಿ ಸಿಬ್ಬಂದಿ	150 ರೂ.	1,50,000 + ಉಳಿತಾಯದ ಹಣ	ಉಳಿತಾಯದ ಹಣ

ಅನಾರೋಗ್ಯದ ರಜೆಯ ನಗದೀಕರಣ



ಬಿ.ಇ.ಎಲ್. ಉದ್ಯೋಗಿಯು ತಾನು ಹೊಂದಿರುವ ಅನಾರೋಗ್ಯದ ರಜೆಯನ್ನು ನಿವೃತ್ತಿಯ ಸಮಯದಲ್ಲಿ ನಗದೀಕರಣಗೊಳಿಸಬಹುದು. ಆದರೆ ಈ ನಗದೀಕರಣವು ಅರ್ಧ ಸಂಬಳದ 300 ದಿನಗಳಿಗೆ (ಅಂದರೆ ಪೂರ್ತಿ ಸಂಬಳದ 150 ದಿನಗಳಿಗೆ) ಸೀಮಿತಗೊಂಡಿರುತ್ತದೆ. ನಿವೃತ್ತಿಯ ಸಮಯದಲ್ಲಿ ಉದ್ಯೋಗಿಯು ಪಡೆಯುತ್ತಿರುವ ಮಾಸಿಕ ವೇತನದ (ಮೂಲವೇತನ ಮತ್ತು ತುಟ್ಟಿಭತ್ಯೆ) ಮೇಲೆ ನೀಡಲಾಗುತ್ತದೆ. ಈ ರೀತಿ ಗಳಿಸುವ ನಗದೀಕರಣಕ್ಕೆ ಆದಾಯ ತೆರಿಗೆ ವಿನಾಯಿತಿ ಇರುವುದಿಲ್ಲ.

ಬಿ.ಇ.ಎಲ್. ನೌಕರರ ಮರಣೋತ್ತರ ಪರಿಹಾರ ಮತ್ತು ಸೇವಾಲಾಭ ನಿಧಿ

ನಿರಂತರವಾಗಿ ಏಳು ವರ್ಷಗಳ ಸದಸ್ಯತ್ವವನ್ನು ಹೊಂದಿರುವ ನೌಕರನು ನಿವೃತ್ತನಾದಾಗ ಆತನಿಗೆ ಸೇವಾ ಪರಿಹಾರವಾಗಿ ಒಂದು ನಿರ್ದಿಷ್ಟ ಮೊತ್ತವನ್ನು ನೀಡಲಾಗುವುದು. ಪ್ರಸ್ತುತ ಈ ಯೋಜನೆಯಡಿಯಲ್ಲಿ ನೀಡಲಾಗುತ್ತಿರುವ ಗರಿಷ್ಠ ಮೊತ್ತ 9000 ರೂ. ಗಳಾಗಿರುತ್ತದೆ.

ಈ ಮೇಲೆ ವಿವರಿಸಿದ ನಿವೃತ್ತಿ ವೇತನ, ಭವಿಷ್ಯನಿಧಿ, ಉಪದಾನ, ರಜೆಯ ನಗದೀಕರಣ ಮುಂತಾದುವೇ ಅಲ್ಲದೆ ಉದ್ಯೋಗಿಯು ತಾನು ಸೇವೆಯಲ್ಲಿರುವಾಗ ಮಾಡಿಕೊಂಡಿರಬಹುದಾದ ಅನೇಕ ಉಳಿತಾಯ ಯೋಜನೆಗಳು – ಉದಾಹರಣೆಗೆ – ಜೀವ ವಿಮೆ, ಆವರ್ತಕ ಠೇವಣಿ (recurring deposit), ಸಹಕಾರ ಸಂಘಗಳಲ್ಲಿ ತೊಡಗಿಸಿರಬಹುದಾದ ಉಳಿತಾಯ ಹಣ ಮುಂತಾದುವು ಆತನ ಸೇವಾವಧಿಯ ಅಂತ್ಯದಲ್ಲಿ ಸಿಗಬಹುದಾಗಿದೆ.

ಸ್ವಾತಂತ್ರ್ಯ ಸೌಲಭ್ಯ-ಸುಖೀ ಜೀವನದ ತಳಪಾಯ



ನಿವೃತ್ತಿಯ ಸಮಯದಲ್ಲಿ ಸಿಗುವ ಸ್ವಾತಂತ್ರ್ಯ ಸೌಲಭ್ಯಗಳ ಬಗ್ಗೆ ತಿಳಿದುಕೊಂಡಾಯಿತು. ಅದನ್ನು ಮುಂದಿನ ಜೀವನದ ನಿರ್ವಹಣೆಗಾಗಿ, ಸುಖ ಸಂತೃಪ್ತಿಗಾಗಿ ಹೇಗೆ ಬಳಸಿಕೊಳ್ಳಬಹುದು, ಅದರ ಆಧಾರದ ಮೇಲೆ ಜೀವನ ಪರ್ಯಂತ ಇನ್ನೊಬ್ಬರಿಗೆ ಹೊರೆಯಾಗದೆ ಹೇಗೆ ಬಾಳಬಹುದು - ತಮ್ಮ ನಿಧನಾನಂತರ ವಾರಸುದಾರರಿಗೆ ಹೇಗೆ ಹಸ್ತಾಂತರ ಮಾಡಬಹುದು ಎಂಬುದರ ಬಗ್ಗೆ ತಿಳಿಯೋಣ.

"ಧರ್ಮೋ ರಕ್ಷತಿ ರಕ್ಷಿತಃ" ಎಂಬ ಸಂಸ್ಕೃತದ ಸೂಕ್ತಿಯೊಂದಿದೆ. ಅಂದರೆ ಧರ್ಮವನ್ನು ರಕ್ಷಿಸಿದವನನ್ನು ಧರ್ಮವು ರಕ್ಷಿಸುತ್ತದೆ. ಅದರಂತೆ ಹಣವನ್ನು ರಕ್ಷಿಸಿಕೊಂಡು ಬಂದವನನ್ನು ಹಣವೇ ಕಾಪಾಡುತ್ತದೆ ಎಂದು ತಿಳಿಯಬಹುದು. ಹಾಗಾಗಿ ಅದರ ರಕ್ಷಣೆಯ ಹೊಣೆಯೂ ನಮ್ಮದೇ ಆಗಿರುತ್ತದೆ.

ನಮ್ಮಲ್ಲಿ ಇಡುಗಂಟಿದೆ ಎಂದು ಗೊತ್ತಾಗುತ್ತಲೇ ಅಪ್ತರಂತೆ ಬಂದು, ಇಲ್ಲ ಸಲ್ಲದ ಆಸೆ ತೋರಿಸಿ ಹಲವಾರು ಸಲಹೆಗಳನ್ನು ನೀಡಿ ಹಣ ಲಪಟಾಯಿಸುವ ಆಷಾಡಭೂತಿಗಳು ಹಲವರಿರುತ್ತಾರೆ. ಹಲವಾರು ಸಲಹೆಗಳನ್ನು ನೀಡಿ ಹಣ ಲಪಟಾಯಿಸುವ ಮಂದಿಯೂ ಇರುತ್ತಾರೆ.

ಇಂತಹವರ ಮೋಸ ವಂಚನೆಗಳಿಗೆ ಬಲಿಯಾಗದೆ, ಬೀದಿ ಭಿಕಾರಿಗಳಾಗದೆ, ಕಷ್ಟಪಟ್ಟು ಗಳಿಸಿದ, ಇಡೀ ಜೀವಮಾನದ ಸಂಪಾದನೆಯನ್ನು ಸರಿಯಾದ ಕಡೆ, ಸರಿಯಾದ ರೀತಿಯಲ್ಲಿ ಠೇವಣಿ ಮಾಡಿ, ಸುಖವಾಗಿರುವುದರತ್ತ ಪ್ರತಿಯೊಬ್ಬರೂ ಯೋಚನೆ ಮಾಡಬೇಕು.

ಹಣ ಹೂಡಿಕೆಯ ಮೂರು ಸರಳ ಸೂತ್ರಗಳು

ಹಣ ಹೂಡಿಕೆಯ ಸಂದರ್ಭದಲ್ಲಿ ಅನುಸರಿಸಬೇಕಾದ ಮೂರು ಸರಳ ಸೂತ್ರಗಳೆಂದರೆ :

1. ಭದ್ರತೆ — Safety
2. ಪ್ರತಿಫಲ ಅಥವ ಬಡ್ಡಿ — Returns
3. ಬೇಕೆಂದಾಗ ಹಣ ಮರಳಿ ಪಡೆಯಲು ಇರುವ ಅವಕಾಶ — Liquidity

ಭದ್ರತೆ Safety

ಜೀವನದ ಸುಭದ್ರತೆಗೆ ಅತ್ಯಗತ್ಯವಾಗಿ ಬೇಕಾಗಿರುವುದು – ಹಣ. ಜೀವನದ ಕೊನೆಯವರೆಗೂ ಜೀವನದ ನಿರ್ವಹಣೆಗೆ ಯಾರೊಬ್ಬರ ಹಂಗಿಲ್ಲದೆ ಜೀವಿಸಲು ಹಣ ಬೇಕೇ ಬೇಕು. ಹಾಗಾಗಿ ಠೇವಣಿ ಮಾಡುವಾಗ ಹಣದ ಭದ್ರತೆಗೆ ಗಮನ ಕೊಡಬೇಕಾದುದು ಅತ್ಯಗತ್ಯ.

ಹಿಂದಿನ ಕಾಲದಲ್ಲಿ ಹಣದ ಭದ್ರತೆಗಾಗಿ, ಸುರಕ್ಷತೆಗಾಗಿ ಅದನ್ನು ನೆಲದಲ್ಲಿ ಹೂತಿಡುತ್ತಿದ್ದರು. ಕಬ್ಬಿಣದ ಪೆಟ್ಟಿಗೆಗಳಲ್ಲಿ ಶೇಖರಿಸಿಡುತ್ತಿದ್ದರು. ಈಗಿನಂತೆ ಹಣದ ವ್ಯವಹಾರ ಹೆಚ್ಚಿಲ್ಲದ ಅಂದಿನ ದಿನಗಳಲ್ಲಿ, ತಮ್ಮ ಮನೆಗಳಲ್ಲಿಯೇ ಹಣವನ್ನು ಗೋಪ್ಯವಾಗಿ ಬಚ್ಚಿಡುತ್ತಿದ್ದರು. ಆದರೆ ಈ ರೀತಿಯಲ್ಲಿ ಹಣದ ಬಳಕೆ ಸಾರ್ಥಕ ರೀತಿಯಲ್ಲಿ ಆಗುತ್ತಿರಲಿಲ್ಲ. ಅಲ್ಲದೆ ಹಣದ ಒಡೆಯನಿಗೂ ಅದರ ಪ್ರತಿಫಲ ದೊರೆಯುತ್ತಿರಲಿಲ್ಲ.

ಹಣಕಾಸಿನ ಮಹತ್ವದ ನೀತಿಯೆಂದರೆ – ಹಣ ಚಲಾವಣೆಯಲ್ಲಿರಬೇಕು. ಅದಕ್ಕಾಗಿಯೇ 'ನಡೆದರೆ ನಾಣ್ಯ' ಎಂಬ ಉಕ್ತಿ ಪ್ರಚಲಿತದಲ್ಲಿದೆ. ಹಣ

ಚಲಾವಣೆಯಲ್ಲಿದ್ದರೆ ಮಾತ್ರ ಅದರ ಸಾರ್ಥಕತೆ ಮತ್ತು ಪ್ರಯೋಜನ. ಅಲ್ಲದೆ ರಾಷ್ಟ್ರದ ಅಭಿವೃದ್ಧಿ ಕಾರ್ಯಗಳಿಗೂ ಸಹ ಸಹಾಯಕವಾಗುವುದು. ಬಚ್ಚಿಟ್ಟ ಹಣ ಯಾವುದೇ ಕಾಲಕ್ಕೂ ಯಾವುದೇ ಕಾರಣಕ್ಕೂ ಸಾರ್ಥಕತೆ ಪಡೆಯುವುದಿಲ್ಲ.

ಈಗ ಕಾಲ ಬದಲಾಗಿದೆ. ಜನಗಳ ಮನೋಭಾವವೂ ಬದಲಾಗಿದೆ. ಅಲ್ಲದೆ ಹಣದ ಹೂಡಿಕೆಯ ಸುರಕ್ಷತೆಗೆ, ಭದ್ರತೆಗೆ ನಾನಾ ತರದ ಅವಕಾಶಗಳಿವೆ. ಹಾಗಾಗಿ ಭದ್ರತೆಗೆ ಹೆಚ್ಚಿನ ಪ್ರಾಮುಖ್ಯತೆ ಎಲ್ಲಿದೆಯೋ ಅಂತಹ ಕಡೆ ಹೂಡಿಕೆಯನ್ನು ಮಾಡುವುದು ಸೂಕ್ತ.

ಪ್ರತಿಫಲ – ಬಡ್ಡಿ Returns / interest

ಹೂಡಿದ ಹಣಕ್ಕೆ ಪ್ರತಿಫಲವಾಗಿ ದೊರಕುವುದು ಬಡ್ಡಿ. ಬಡ್ಡಿಯ ದರ ಎಷ್ಟಿರಬೇಕು ಎನ್ನುವುದು ಆಯಾ ಕಾಲದ ಸರಕಾರದ / ರಿಸರ್ವ್ ಬ್ಯಾಂಕಿನ ರೀತಿ ನೀತಿಗಳ ಮೇಲೆ ಅವಲಂಬಿತವಾಗಿರುತ್ತದೆ.

ಸಾಮಾನ್ಯವಾಗಿ, ಎಲ್ಲಿ ಬಡ್ಡಿ ಜಾಸ್ತಿ ಸಿಗುತ್ತದೆಯೋ ಅಂತಹ ಕಡೆ ಜನ ಆಕರ್ಷಿತರಾಗುತ್ತಾರೆ. ಹೂಡಿಕೆಯ ನಿಯಮವನ್ನು ಅನುಸರಿಸದೆ ಹೆಚ್ಚಿನ ಬಡ್ಡಿಗೆ ಆಸೆ ಪಟ್ಟು ಇಡೀ ಜೀವಮಾನದ ಗಳಿಕೆಯನ್ನು ಕಳೆದುಕೊಳ್ಳುತ್ತಾರೆ. ಅತಿ ಆಸೆ ಗತಿಕೇಡು ಎಂಬಂತಾಗುತ್ತದೆ.

ಹಲವಾರು ಹಣಕಾಸು ಸಂಸ್ಥೆಗಳು ಮುಗ್ಧ ಜನಗಳ ಹಣವನ್ನು ಕಬಳಿಸುವುದಕ್ಕಾಗಿಯೇ ಸಂಸ್ಥೆಗಳನ್ನು ಸ್ಥಾಪಿಸುತ್ತವೆ. ತಮ್ಮ ವ್ಯವಹಾರದ ಕೌಶಲ್ಯದಿಂದ ಜನರಲ್ಲಿ ಪ್ರಲೋಭನೆಯನ್ನುಂಟು ಮಾಡಿ ಹಣವನ್ನು ಸೆಳೆಯುವ ತಂತ್ರವನ್ನು ಹೆಣೆಯುತ್ತವೆ. ಹೆಚ್ಚಿನ ಬಡ್ಡಿ ದರ, ಪ್ರೋತ್ಸಾಹ ಧನ, ಚಿನ್ನ / ಬೆಳ್ಳಿ ಉಡುಗೊರೆಗಳು, ಪ್ರವಾಸಕ್ಕೆ ಕರೆದುಕೊಂಡು ಹೋಗುವುದು ಮುಂತಾದ ಅಮಿಷಗಳನ್ನು ಒಡ್ಡಿ ಜನಗಳಿಗೆ ಮಂಕುಬೂದಿ ಎರಚುತ್ತಾರೆ. ಅದಕ್ಕಾಗಿ ಚೆನ್ನಾಗಿ ಮಾತು ಬಲ್ಲ ಏಜಂಟರನ್ನು ನೇಮಿಸಿ, ಹೆಚ್ಚಿನ ಕಮೀಷನ್ ನೀಡಿ ಅವರ ಮೂಲಕ ಸಾರ್ವಜನಿಕರ ಹಣವನ್ನು ಲಪಟಾಯಿಸುತ್ತಾರೆ. ಮುಗ್ಧ ಜನರ ದರೋಡೆ ಮಾಡುತ್ತಾರೆ.

ಇಂತಹ ಮೋಸದಾಟ ಇಂದು ನೆನ್ನೆಯದಲ್ಲ. ಕಾಲ ಕಾಲಾಂತರದಿಂದಲೂ ನಡೆಯುತ್ತಿದೆ. ಇದಕ್ಕೆ ಮುಖ್ಯ ಕಾರಣ ಹಿಂದೆ ನಡೆದಿರಬಹುದಾದ ಸಂಗತಿಗಳನ್ನು ಜನ ಸುಲಭವಾಗಿ ಮರೆಯುವುದು ಒಂದಾದರೆ ಮತ್ತೊಂದು ಹಣ ಹೂಡಿಕೆಯ ಬಗ್ಗೆ ಜನಗಳಿಗಿರುವ ಅಜ್ಞಾನ / ಮುಗ್ಧತೆ (Innocense) ಮತ್ತು ದುರಾಸೆ (greediness)

ಜನಗಳ ಮುಗ್ಧತೆಯನ್ನು ಮೌಢ್ಯವನ್ನು, ದುರಾಸೆಯನ್ನು ತಮ್ಮ ಬಂಡವಾಳವಾಗಿ ಮಾಡಿಕೊಂಡು ಹಗಲು ದರೋಡೆ ಮಾಡುತ್ತಿರುವ ಸಂಸ್ಥೆಗಳು ಅಂದಿನಿಂದ ಇಂದಿನವರೆಗೂ ಹೊಸ ಹೊಸದಾಗಿ ಹುಟ್ಟಿಕೊಂಡು ಅವ್ಯಾಹತವಾಗಿ ಜನಗಳಿಗೆ ಟೋಪಿ ಹಾಕುತ್ತಲೇ ಇವೆ.

ಇಂತಹ ಮೋಸಗಾರ ಸಂಸ್ಥೆಗಳಿಂದ ಜನ ಎಚ್ಚೆತ್ತುಕೊಳ್ಳಬೇಕು. ಅವುಗಳಿಂದ ದೂರವಿರಬೇಕು. ಪದೇ ಪದೇ ನಡೆಯುತ್ತಿರುವ ಇಂತಹ ವಂಚನೆ ಪ್ರಕರಣಗಳು ಪತ್ರಿಕೆಗಳಲ್ಲಿ, ದೃಶ್ಯ ಮಾಧ್ಯಮಗಳಲ್ಲಿ ಬರುತ್ತಲೇ ಇರುತ್ತವೆ. ಆದರೂ ಜನ ದುರಾಸೆಯಿಂದ ಇಂತಹ ಸಂಸ್ಥೆಗಳಲ್ಲಿ ಹಣವನ್ನು ತೊಡಗಿಸುತ್ತಲೇ ಇರುತ್ತಾರೆ. "ರಾತ್ರಿ ಕಂಡ ಬಾವಿಯಲ್ಲಿ ಹಗಲು ಹೋಗಿ ಬಿದ್ದರಂತೆ" ಎಂಬ ಗಾದೆಯ ಮಾತಿನಂತೆ ವಂಚಕರ ಮಾತಿಗೆ-ಆಮಿಷಕ್ಕೆ ಬಲಿಯಾಗಬಾರದು.

ತಮ್ಮ ಜೀವಮಾನವಿಡೀ ದುಡಿದು ಸಂಪಾದಿಸಿದ ಹಣವನ್ನು – ತಮ್ಮ ನಿವೃತ್ತಿ ಜೀವನದ ಊರುಗೋಲಾದ ಹಣವನ್ನು – ತಮ್ಮ ಮೂರ್ಖತನದ ಹಾಗೂ ದುರಾಸೆಯಿಂದ ವಂಚಕರ ಪಾಲಾಗದಂತೆ ಎಚ್ಚರ ವಹಿಸಬೇಕಾದ್ದು ಅತಿ ಅವಶ್ಯ.

ಬೇಕೆಂದಾಗ ಹಣ ಪಡೆಯುವ ಸೌಲಭ್ಯ Liquidity


ಹಣ ಹೂಡಿಕೆಯಲ್ಲಿ ಗಮನ ಕೊಡಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ ನಾವು ಹೂಡಿದ ಹಣವನ್ನು ನಮಗೆ ಬೇಕೆಂದಾಗ, ಅವಶ್ಯಕತೆ ಇದ್ದಾಗ, ಅವಧಿಗೆ ಮುಂಚೆ ಪಡೆಯುವ ಅವಕಾಶವಿರುವುದು. ಕೆಲವು ಸಂದರ್ಭಗಳಲ್ಲಿ ಒಂದು ನಿರ್ದಿಷ್ಟ ಅವಧಿಗೆ ಹೂಡಿದ ಹಣವನ್ನು ಹಿಂದಕ್ಕೆ ಪಡೆಯಬೇಕಾದ ತುರ್ತು ಸಂದರ್ಭಗಳು ಬಂದೊದಗುತ್ತವೆ. ಸಂಸಾರದಲ್ಲಿ ಎದುರಾಗುವ ಅನಿರೀಕ್ಷಿತ ಘಟನೆಗಳು ಅನಿವಾರ್ಯ ಸಂದರ್ಭಗಳಲ್ಲಿ ಹಣದ ಅವಶ್ಯಕತೆ ಬಂದೊದಗುತ್ತದೆ.



ಅಂತಹ ಸಮಯದಲ್ಲಿ ಹಣವನ್ನು ಹಿಂದಕ್ಕೆ ಪಡೆಯ ಬೇಕಾದ ಅನಿವಾರ್ಯ ಪರಿಸ್ಥಿತಿ ಎದುರಾಗುತ್ತದೆ. ಆಗ ನಾವು ಠೇವಣಿ ಮಾಡಿದ ಹಣ ನಮ್ಮ ಕೈಗೆ ಸಿಗದಿದ್ದರೆ, ನೆರವಿಗೆ ಒದಗದಿದ್ದರೆ ಪ್ರಯೋಜನವಾದರೂ ಏನು? ಇನ್ನೊಬ್ಬರತ್ತ ಕೈ ಚಾಚುವ ಪರಿಸ್ಥಿತಿ ಬರಬಾರದು. ಆ ಕಾರಣದಿಂದ ಬೇಕೆಂದಾಗ, ಅವಶ್ಯಕತೆ ಇದ್ದಾಗ ಹಣವನ್ನು ಹಿಂದಕ್ಕೆ ಪಡೆಯುವ ಸೌಲಭ್ಯ, ಸೌಕರ್ಯ ಎಲ್ಲಿರುತ್ತದೆಯೋ ಅಂತಹ ಕಡೆ ಮಾತ್ರ ಠೇವಣಿ ಮಾಡಬೇಕಾಗುತ್ತದೆ.

ಈ ಮೇಲಿನ ಮೂರೂ ಅಂಶಗಳನ್ನು ಗಮನಿಸಿ ಅಂತಹ ಕಡೆಗಳಲ್ಲಿ ಅಂದರೆ – ಭದ್ರತೆ, ಪ್ರತಿಫಲ ಹಾಗೂ ಅಗತ್ಯವಿದ್ದಾಗ ಹಿಂದಕ್ಕೆ ಪಡೆಯಬಹುದಾದ ಸೌಲಭ್ಯ – ಇರುವಂತಹ ಕ್ಷೇತ್ರಗಳಲ್ಲಿ ಹಣ ಹೂಡಿದಾಗ, ಹೂಡಿಕೆದಾರರು ಹೂಡಿಕೆಯ ಸಂಪೂರ್ಣ ಪ್ರಯೋಜನ ಪಡೆಯುವುದೇ ಅಲ್ಲದೆ, ತನ್ನ ಜೀವಿತಾವಧಿಯವರೆಗೂ ನಿಶ್ಚಿಂತೆಯಿಂದ ಇದ್ದು ಪ್ರತಿ ತಿಂಗಳೂ ಅದರಿಂದ ಬರುವ ಬಡ್ಡಿಯ ಹಣದಿಂದ, ಸುಖಕರವಾದ ಜೀವನ ನಡೆಸಬಹುದು.

ಹಣ ಹೂಡಿಕೆಗೆ ಇರುವ ಹಲವು ಅವಕಾಶಗಳು



ಹಣ ಹೂಡಿಕೆಯ ಮೂರು ಸೂತ್ರಗಳನ್ನು ಗಮನದಲ್ಲಿರಿಸಿಕೊಂಡು ಪರಿಶೀಲಿಸಿದಾಗ ಮುಂದೆ ತಿಳಿಸಿದ ಠೇವಣಿಗಳಲ್ಲಿ ಹಣ ಹೂಡುವುದು ಸೂಕ್ತವೆಂದು ಕಂಡುಬರುತ್ತದೆ.

ಅಂಚೆ ಕಚೇರಿಯ ಮಾಸಿಕ ವರಮಾನ ಯೋಜನೆ
POST OFFICE MONTHLY INCOME SCHEME

ಹೆಸರೇ ಸೂಚಿಸುವಂತೆ ಪ್ರತಿ ತಿಂಗಳೂ ಆದಾಯ ತರುವ ಅಂಚೆ ಕಚೇರಿಯಲ್ಲಿ ಠೇವಣಿ ಮಾಡಬಹುದಾದ ಯೋಜನೆ ಇದಾಗಿದೆ. ಅಂಚೆ ಕಚೇರಿಯಲ್ಲಿರುವ ಅನೇಕ ಉಳಿತಾಯ ಯೋಜನೆಗಳಲ್ಲಿ ನಿವೃತ್ತರು ಸುರಕ್ಷಿತವಾಗಿ ಹೂಡಬಹುದಾದ ಯೋಜನೆ ಇದೆಂದು ಪರಿಗಣಿಸಬಹುದು.

ಈ ಯೋಜನೆಯ ವೈಶಿಷ್ಟ್ಯ ಹೀಗಿದೆ :

ಠೇವಣಿಯ ಅವಧಿ :	ಆರು ವರ್ಷ
ಹೂಡಬಹುದಾದ ಕನಿಷ್ಠ / ಗರಿಷ್ಠ ಮೊಬಲಗು	ಕನಿಷ್ಠ : ಒಂದು ಸಾವಿರ ರೂಪಾಯಿ ಗರಿಷ್ಠ : ಒಂದೆ ಹೆಸರಿನಲ್ಲಿ ಹೂಡಬಹುದಾದ ಮೊತ್ತ 4,50,000 ರೂ. ಜಂಟೀ ಹೆಸರಿನಲ್ಲಿ ಹೂಡಬಹುದಾದ ಮೊತ್ತ 9,00,000 ರೂ.
ಬಡ್ಡಿಯ ದರ	ವಾರ್ಷಿಕ ಶೇ 8 ಬಡ್ಡಿ ಹಣವನ್ನು ಪ್ರತಿ ತಿಂಗಳೂ ನೀಡಲಾಗುತ್ತದೆ. ಅಂಚೆ ಕಛೇರಿಯಲ್ಲಿ ಉಳಿತಾಯ ಖಾತೆಯನ್ನು ತೆಗೆದರೆ ಪ್ರತಿ ತಿಂಗಳೂ ಸಂದಾಯವಾಗುವ ಬಡ್ಡಿಯನ್ನು

ಆ ಖಾತೆಗೆ ಜಮಾ ಮಾಡಲಾಗುತ್ತದೆ. ಅವಶ್ಯಕತೆಗೆ ಅನುಗುಣವಾಗಿ ಬೇಕೆಂದಾಗ ಹಣವನ್ನು ಹಿಂದಕ್ಕೆ ಪಡೆಯಬಹುದು. ಅಥವಾ ಪ್ರತಿತಿಂಗಳು withdrawal slip ಮುಖಾಂತರ ಬಡ್ಡಿ ಹಣವನ್ನು ಪಡೆಯಬಹುದು.

ಬೋನಸ್	ಠೇವಣಿಯ ಅವಧಿ ಪೂರ್ಣಗೊಂಡ ನಂತರ, ಅಂದರೆ ಆರು ವರ್ಷಗಳ ನಂತರ ಹಣವನ್ನು ಹಿಂದಕ್ಕೆ ಪಡೆದಾಗ ಠೇವಣಿ ಮೊತ್ತದ ಮೇಲೆ ಶೇಕಡ 5ರಷ್ಟು ಬೋನಸ್ ನೀಡಲಾಗುವುದು.
ಅವಧಿಗೆ ಮುನ್ನ ಹಣ ಹಿಂದಕ್ಕೆ ಪಡೆಯುವ ಸೌಕರ್ಯ	ಠೇವಣಿ ಇಟ್ಟ ಒಂದು ವರ್ಷದೊಳಗೆ ಹಣವನ್ನು ಹಿಂದಕ್ಕೆ ಪಡೆಯಲಾಗುವುದಿಲ್ಲ. ಆದರೆ ಒಂದು ವರ್ಷದ ನಂತರ ಕೆಲವು ನಿಬಂಧನೆಗೊಳಪಟ್ಟಂತೆ ಹಣವನ್ನು ಹಿಂದಕ್ಕೆ ಪಡೆಯುವ ಸೌಕರ್ಯ ವಿರುತ್ತದೆ. ಅಂತಹ ಸಂದರ್ಭದಲ್ಲಿ ಕೆಳಕಂಡಂತೆ ಕೊಟ್ಟಿರುವ ಬಡ್ಡಿ ಹಣವನ್ನು ಕಡಿತ ಗೊಳಿಸಲಾಗುವುದು. 1 ರಿಂದ 3 ವರ್ಷ : ಶೇ. 2 3 ರಿಂದ 6 ವರ್ಷದೊಳಗೆ ಶೇ 1
ಇತರೇ ಸೌಲಭ್ಯಗಳು	1. ಬಡ್ಡಿಯು ಹಣವನ್ನು ನೀಡುವಾಗ ಮೂಲದಲ್ಲಿ ಆದಾಯ ತೆರಿಗೆಯನ್ನು ಕಡಿತಗೊಳಿಸುವುದಿಲ್ಲ. 2. ಒಂದು ಅಂಚೆಕಛೇರಿಯಿಂದ ಮತ್ತೊಂದು ಅಂಚೆ ಕಚೇರಿಗೆ ವರ್ಗಾಯಿಸುವ ಸೌಲಭ್ಯವಿದೆ. 3. ನಾಮನಿರ್ದೇಶನದ ಸೌಲಭ್ಯವಿದೆ.

ಶೇಕಡ 9ರ ಹಿರಿಯ ನಾಗರಿಕರ ಉಳಿತಾಯ ಯೋಜನೆ – 2004

9% SENIOR CITIZENS' SAVINGS SCHEME 2004



60 ವರ್ಷ ದಾಟಿರುವ ಹಿರಿಯ ನಾಗರಿಕರಿಗಾಗಿಯೇ ವಿಶೇಷವಾಗಿ ರೂಪಿತವಾಗಿರುವ ಈ ಯೋಜನೆಯು ಕೇಂದ್ರ ಸರ್ಕಾರದವರಿಂದ ಆಗಸ್ಟ್ 2, 2004 ರಿಂದ ಜಾರಿಗೆ ಬಂದಿದೆ.

ಅರವತ್ತು ವರ್ಷಗಳನ್ನು ಪೂರೈಸಿರುವ ಯಾರು ಬೇಕಾದರೂ ಈ ಯೋಜನೆಯಡಿಯಲ್ಲಿ ಠೇವಣಿ ಮಾಡುವ ಅವಕಾಶವನ್ನು ಹೊಂದಿರುತ್ತಾರೆ. ಅಷ್ಟೇ ಅಲ್ಲ, 55 ವರ್ಷ ದಾಟಿದವರೂ ಸಹ, ಅವರು ನಿವೃತ್ತಿ ಅಥವಾ ಸ್ವಯಂ ನಿವೃತ್ತರಾಗಿದ್ದರೆ ಠೇವಣಿ ಮಾಡಲು ಅವಕಾಶ ಮಾಡಿಕೊಡಲಾಗಿದೆ. ಆದರೆ ಅಂತಹವರು ನಿವೃತ್ತಿ / ಸ್ವಯಂ ನಿವೃತ್ತಿ ಹೊಂದಿದ ಮೂರು ತಿಂಗಳುಗಳ ಒಳಗೆ ಠೇವಣಿಯನ್ನು ಮಾಡಬೇಕು.

ಅಂಚೆಕಚೇರಿಗಳಲ್ಲಿ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳ ಪ್ರಧಾನ ಕಛೇರಿಗಳಲ್ಲಿ ಈ ಯೋಜನೆಯಡಿಯಲ್ಲಿ ಠೇವಣಿ ಮಾಡಬಹುದು. ಠೇವಣಿದಾರನು ವಯಸ್ಸಿನ ಸಮರ್ಥನಾಪತ್ರ, ಪ್ಯಾನ್ ಕಾರ್ಡ್ ಮತ್ತು ಇತ್ತೀಚಿನ ಎರಡು ಭಾವಚಿತ್ರಗಳನ್ನು ಅರ್ಜಿಯೊಂದಿಗೆ ಸಲ್ಲಿಸಬೇಕಾಗುತ್ತದೆ. ನಾಮನಿರ್ದೇಶನದ ಸೌಲಭ್ಯವೂ ಸಹ ಈ ಯೋಜನೆಯಲ್ಲಿದೆ.

ಬಡ್ಡಿ ದರ	ವಾರ್ಷಿಕ ಶೇಕಡ 9. ಪ್ರತಿ ಮೂರು ತಿಂಗಳಿಗೊಮ್ಮೆ ಅಂದರೆ ಜೂನ್ 30, ಸೆಪ್ಟೆಂಬರ್ 30, ಡಿಸೆಂಬರ್ 30 ಹಾಗೂ ಮಾರ್ಚ್ 30ರಂದು ಸಂದಾಯ ಮಾಡಲಾಗುವುದು.

	ಠೇವಣಿಯನ್ನು ಮಾಡಿರುವ ಕಡೆಯಲ್ಲಿಯೇ ಉಳಿತಾಯ ಖಾತೆಯನ್ನು ತೆಗೆದರೆ ಬಡ್ಡಿಯನ್ನು ಆ ಉಳಿತಾಯ ಖಾತೆಗೆ ವರ್ಗಾಯಿಸಲಾಗುವುದು.
ಠೇವಣಿಯ ಅವಧಿ	5 ವರ್ಷಗಳು. 5 ವರ್ಷಗಳ ನಂತರ ಮತ್ತೆ ಮೂರು ವರ್ಷಗಳಿಗೆ ವಿಸ್ತರಿಸಿಕೊಳ್ಳಬಹುದು.
ಹೂಡಿಕೆಯ ಮಿತಿ	ಕನಿಷ್ಠ ಒಂದು ಸಾವಿರ ಮತ್ತು ನಂತರ ಒಂದು ಸಾವಿರ ರೂಪಾಯಿಗಳ ಗಣಕದಲ್ಲಿ ಗರಿಷ್ಠ 15 ಲಕ್ಷ ರೂಪಾಯಿಗಳು
ಅವಧಿಗೆ ಮುನ್ನ ಹಣ ಪಡೆಯಲು ಇರುವ ಅವಕಾಶ	ಠೇವಣಿ ಇಟ್ಟ ಒಂದು ವರ್ಷದವರೆಗೆ ಹಣವನ್ನು ಹಿಂದೆ ಪಡೆಯಲು ಆಗುವುದಿಲ್ಲ. ನಂತರದ ದಿನಗಳಲ್ಲಿ ಕೆಲವೊಂದು ನಿಬಂಧನೆಗಳಿಗೆ ಒಳಪಟ್ಟಂತೆ ಹಣವನ್ನು ಹಿಂತಿರುಗಿಪಡೆಯಬಹುದು.
ಬಡ್ಡಿಯ ಮೇಲಿನ ತೆರಿಗೆ	ಈ ಯೋಜನೆಯಲ್ಲಿ ನೀಡಲಾಗುವ ಬಡ್ಡಿಗೆ ಆದಾಯ ತೆರಿಗೆ ಅನ್ವಯಿಸುತ್ತದೆ. ಬಡ್ಡಿಯನ್ನು ನೀಡುವ ಸಮಯದಲ್ಲಿಯೇ ಆದಾಯ ತೆರಿಗೆಯನ್ನು ಕಡಿತಗೊಳಿಸಲಾಗುತ್ತದೆ. ಆದರೆ ಫಾರಂ 15 ಜಿ ಯನ್ನು (55 ರಿಂದ 65 ವರ್ಷಗಳೊಳಗಿನ ಠೇವಣಿದಾರರು) ಅಥವಾ 15 ಹೆಚ್‌ನ್ನು (65 ವರ್ಷ ದಾಟಿರುವ ಹಿರಿಯ ನಾಗರಿಕರು) ಸಲ್ಲಿಸಿದಾಗ ಮೂಲದಲ್ಲಿ ತೆರಿಗೆಯನ್ನು ಕಡಿತಗೊಳಿಸದೆ ನೀಡಲಾಗುವುದು.
ಠೇವಣಿಗೆ ತೆರಿಗೆ ವಿನಾಯಿತಿ	ಠೇವಣಿ ಮಾಡಲಾಗುವ ಒಂದು ಲಕ್ಷ ರೂಪಾಯಿಗಳ ಮೊತ್ತದವರೆಗೆ ಆದಾಯ ತೆರಿಗೆ ಸೆಕ್ಷನ್ 80 ಸಿ ಅಡಿಯಲ್ಲಿ ತೆರಿಗೆ ವಿನಾಯಿತಿ ದೊರಕುತ್ತದೆ.

ಅಂಚೆ ಕಛೇರಿಯಲ್ಲಿ ಠೇವಣಿಗೆ ಇರುವ ಇತರೆ ಅವಕಾಶಗಳು

ಬ್ಯಾಂಕುಗಳಲ್ಲಿ ಠೇವಣಿ ಹಾಗೂ ಆವರ್ತಕ ಠೇವಣಿಗೆ ಅವಕಾಶವಿರುವಂತೆ ಅಂಚೆಕಛೇರಿಯಲ್ಲಿಯೂ ಸಹ ನಿಗದಿತ ಠೇವಣಿ ಮತ್ತು ಆವರ್ತಕ ಠೇವಣಿ, ಅಷ್ಟೇ ಅಲ್ಲದೆ ಉಳಿತಾಯ ಖಾತೆಗಳನ್ನು ತೆಗೆಯಲು ಸಹ ಅವಕಾಶವಿದೆ.

ಅಷ್ಟೇ ಅಲ್ಲ ಸಾರ್ವಜನಿಕ ಭವಿಷ್ಯನಿಧಿ, ರಾಷ್ಟ್ರೀಯ ಉಳಿತಾಯ ಪತ್ರ ಮತ್ತು ಕಿಸಾನ್ ವಿಕಾಸ ಪತ್ರಗಳಲ್ಲಿಯೂ ಠೇವಣಿ ಮಾಡುವ ಅವಕಾಶವಿದೆ.

ಅಂಚೆ ಕಛೇರಿಯ ಈ ಎಲ್ಲಾ ಉಳಿತಾಯ ಯೋಜನೆಗಳೂ ಸಣ್ಣ ಉಳಿತಾಯ ಯೋಜನೆಯಡಿಯಲ್ಲಿ ಬರುತ್ತವೆ. ಈ ಎಲ್ಲಾ ಯೋಜನೆಗಳಿಗೆ ಭಾರತ ಸರ್ಕಾರದ ಭರವಸೆ ಲಭ್ಯವಿದೆ. ಆ ಕಾರಣದಿಂದ ಈ ಹೂಡಿಕೆ ಸಂಪೂರ್ಣ ಸುರಕ್ಷಿತವಾಗಿರುತ್ತದೆ. ಬಡ್ಡಿಯ ನೀಡಿಕೆಯಲ್ಲಿ ಯಾವುದೇ ಪೊಳ್ಳು ಭರವಸೆಯಾಗಲೀ ಅಥವಾ ಪ್ರಲೋಭನೆಯಾಗಲೀ ಇರುವುದಿಲ್ಲ.

ಹಾಗಾಗಿ ಈ ಕ್ಷೇತ್ರದ ಉಳಿತಾಯ ಯೋಜನೆಯಲ್ಲಿ ಹಣ ಹೂಡುವುದು ವಿಶ್ವಾಸಾರ್ಹತೆ, ಲಾಭದಾಯಕ ಮತ್ತು ಸುರಕ್ಷತೆಯನ್ನು ಒಳಗೊಂಡಿರುತ್ತದೆ.

ಬ್ಯಾಂಕುಗಳಲ್ಲಿ ಹಣ ಹೂಡುವಿಕೆ



ಬ್ಯಾಂಕುಗಳು ಮತ್ತು ಅದರೊಂದಿಗಿನ ವ್ಯವಹಾರ ನಮ್ಮ ಜನ ಜೀವನದಲ್ಲಿ ಹಾಸು ಹೊಕ್ಕಾಗಿ ಬಂದಿದೆ. ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಬ್ಯಾಂಕ್ ವ್ಯವಹಾರದ ತಿಳಿವಳಿಕೆಯನ್ನು ಹೊಂದಿಯೇ ಇರುತ್ತಾರೆ.

ನಮ್ಮ ದೇಶದೊಳಗಿನ ಬ್ಯಾಂಕುಗಳನ್ನು ಸಾಮಾನ್ಯವಾಗಿ ಈ ಕೆಳಕಂಡಂತೆ ನಾಲ್ಕು ವಿಭಾಗಗಳಾಗಿ ವಿಭಾಗಿಸಬಹುದು :

1. ಸಾರ್ವಜನಿಕ ವಲಯದ ಬ್ಯಾಂಕುಗಳು
2. ಖಾಸಗಿ ವಲಯದ ಬ್ಯಾಂಕುಗಳು
3. ವಿದೇಶೀ ಬ್ಯಾಂಕುಗಳು
4. ಸಹಕಾರೀ ಬ್ಯಾಂಕುಗಳು

ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಈ ಮೇಲಿನ ಯಾವುದಾದರೂ ಬ್ಯಾಂಕುಗಳಲ್ಲಿ ವ್ಯವಹಾರವನ್ನು ಹೊಂದಿಯೇ ಇರುತ್ತಾರೆ. ಅವುಗಳಲ್ಲಿ ಪ್ರಮುಖವಾದುದೆಂದರೆ :

1. ಉಳಿತಾಯ ಖಾತೆ
2. ನಿಗದಿತ ಠೇವಣಿಗಳು

ಅದರಲ್ಲಿಯೂ ಉಳಿತಾಯ ಖಾತೆಯನ್ನು ಹೊಂದಿಲ್ಲದವರೇ ಇರುವುದಿಲ್ಲ ಎಂಬುದಾಗಿ ಹೇಳಿದರೆ ಅತಿಶಯೋಕ್ತಿಯಾಗಲಾರದು.

ಈ ಉಳಿತಾಯ ಖಾತೆಯನ್ನು ತೆಗೆಯುವಾಗ ಅದನ್ನು ಒಂದೇ ಹೆಸರಿನಲ್ಲಿ ತೆಗೆಯಬಹುದು ಅಥವಾ ಜಂಟೀ ಹೆಸರಿನಲ್ಲಿ ತೆಗೆಯಬಹುದು. ಇದು ಅವರವರ ಅವಶ್ಯಕತೆ, ಕೌಟುಂಬಿಕ ಸನ್ನಿವೇಶಗಳಿಗೆ ಅನ್ವಯವಾಗುತ್ತದೆ. ಆದರೆ ಸಾಧ್ಯವಾದಷ್ಟೂ ಸಹ ಉಳಿತಾಯ ಖಾತೆಯನ್ನು ಜಂಟೀ ಹೆಸರಿನಲ್ಲಿ ತೆಗೆಯುವುದು ಅತಿ ಅಗತ್ಯವಾದುದು. ಅಂದರೆ (E/S-Either of Survivor) ಕ್ರಮದಲ್ಲಿ ತೆಗೆಯಬೇಕು. ಈ ಕ್ರಮದಲ್ಲಿ ಖಾತೆಯನ್ನು ತೆಗೆದಾಗ ಇಬ್ಬರಲ್ಲಿ ಯಾರಾದರೊಬ್ಬರು ಅಥವಾ ಉಳಿದವರು ಖಾತೆಯನ್ನು ನಡೆಸಬಹುದು.

ವಯಸ್ಸಾದಂತೆ ಕಾಯಿಲೆ ಕಸಾಲೆ ಬರುವುದು ಸಹಜ. ಮರಗುಳಿತನ ಬರಬಹುದು, ಅಶಕ್ತತೆಯಿಂದ ಸಹಿ ಮಾಡಲು ಸಾಧ್ಯವಾಗದಿರಬಹುದು. ಇಂತಹ ಸಂದರ್ಭದಲ್ಲಿ ಖಾತೆದಾರರಲ್ಲಿ ಇಬ್ಬರಲ್ಲಿ ಯಾರಾದರೊಬ್ಬರು ಸಹಿ ಮಾಡುವ ಅಧಿಕಾರ ಹೊಂದಿರುವುದರಿಂದ ಒಬ್ಬರು ಇನ್ನೊಬ್ಬರ ಅನುಪಸ್ಥಿತಿಯಲ್ಲಿ ಹಣವನ್ನು ಹಿಂದಕ್ಕೆ ಪಡೆಯಲು ಯಾವುದೇ ಅಡ್ಡಿ ಇರುವುದಿಲ್ಲ. ಅಷ್ಟೇ ಅಲ್ಲ, ಖಾತೇದಾರರಲ್ಲಿ ಯಾರೇ ಒಬ್ಬರು ನಿಧನರಾದರೂ ಉಳಿದಿರುವ ಮತ್ತೊಬ್ಬರು ಖಾತೆಯನ್ನು ಮುಂದುವರೆಸಬಹುದು. ಅದೇ ಒಂದೇ ಹೆಸರಿನಲ್ಲಿ ಖಾತೆ ತೆಗೆದಿದ್ದಾಗ ಈ ಸೌಲಭ್ಯವಿರುವುದಿಲ್ಲ. ಬ್ಯಾಂಕ್‌ನ ಖಾತೆಯಲ್ಲಿ ಎಷ್ಟೇ ಹಣವಿದ್ದರೂ ಸಹ ಖಾತೇದಾರನ ವಿನಃ ಮತ್ತೊಬ್ಬರು ಹಣ ಹಿಂದಕ್ಕೆ ಪಡೆಯಲಾಗುವುದಿಲ್ಲ.

ಆದ್ದರಿಂದ ಯಾವುದೇ ವಯಸ್ಸಿನವರಿರಲಿ, ಅದರಲ್ಲಿಯೂ ಪ್ರಮುಖವಾಗಿ, ವಯಸ್ಸಾದವರು ಜಂಟೀ ಖಾತೆಯನ್ನು ತೆಗೆಯುವುದು ಎಲ್ಲ ದೃಷ್ಟಿಯಲ್ಲಿಯೂ ಅನುಕೂಲ ಹಾಗೂ ಅಗತ್ಯ.

ಅಷ್ಟೇ ಅಲ್ಲ, ಜಂಟೀ ಖಾತೆಯೊಂದಿಗೆ ನಾಮ ನಿರ್ದೇಶನದ ಸೌಲಭ್ಯವನ್ನು ಸಹ ಉಪಯೋಗಿಸಿಕೊಂಡು ತಮ್ಮ ವಾರಸುದಾರರಲ್ಲಿ ಯಾರಿಗೆ ಬೇಕೋ ಅಂತಹವರಿಗೆ ನಾಮ ನಿರ್ದೇಶನ ಮಾಡಬಹುದು. ದುರದೃಷ್ಟವಶಾತ್ ಖಾತೆದಾರನು ನಿಧನ ಹೊಂದಿದಾಗ ಆತನ ಖಾತೆಯಲ್ಲಿರುವ ಹಣವನ್ನು ನಾಮನಿರ್ದೇಶಿತ ವ್ಯಕ್ತಿ ಯಾವ ತೊಂದರೆ ಅಥವಾ ವಿಳಂಬವಿಲ್ಲದಂತೆ ಪಡೆಯಲು ಅನುಕೂಲವಾಗುತ್ತದೆ.

ಠೇವಣಿಗಳು

ಬ್ಯಾಂಕಿನಲ್ಲಿರುವ ಮತ್ತೊಂದು ಸೌಲಭ್ಯವೆಂದರೆ ನಿಗದಿತ ಠೇವಣಿ. ಈಗಾಗಲೇ ಮೇಲೆ ತಿಳಿಸಿರುವಂತೆ ಯಾವುದೇ ವರ್ಗದ ಬ್ಯಾಂಕಿನಲ್ಲಿ ಬೇಕಾದರೂ ನಿಗದಿತ ಠೇವಣಿ ಮಾಡಬಹುದು. ಕನಿಷ್ಠ 15 ದಿನದಿಂದ ಐದು ವರ್ಷ ಹಾಗೂ ಅದಕ್ಕೂ ಮೇಲ್ಪಟ್ಟ ಅವಧಿಗೆ ಠೇವಣಿ ಮಾಡಬಹುದು. ಹೀಗೆ ಠೇವಣಿ ಮಾಡಿದ ಹಣಕ್ಕೆ ರಿಸರ್ವ್ ಬ್ಯಾಂಕ್ ಕಾಲ ಕಾಲಕ್ಕೆ ನಿಗದಿಪಡಿಸಿದ ದರದಲ್ಲಿ ಬಡ್ಡಿ ದರವನ್ನು ನೀಡಲಾಗುತ್ತದೆ. ಹಿರಿಯ ನಾಗರಿಕರಿಗೆ (ಅಂದರೆ 60 ವರ್ಷ ದಾಟಿದವರಿಗೆ) ಸ್ವಲ್ಪ ಮಟ್ಟಿನ ಅಧಿಕ ಬಡ್ಡಿಯನ್ನು ನೀಡಲಾಗುತ್ತದೆ.

ಈ ನಿಗದಿತ ಠೇವಣಿಯನ್ನು ಮಾಡುವಾಗಲೂ ಸಹ ಜಂಟೀ ಹೆಸರಿನಲ್ಲಿ ಮಾಡುವುದು ಹಾಗೂ ನಾಮ ನಿರ್ದೇಶನ ಮಾಡುವದು ಅಗತ್ಯ.

ನಿಗದಿತ ಠೇವಣಿಯ ಕೆಲವು ವೈಶಿಷ್ಟ್ಯಗಳು

ನಿಗದಿತ ಠೇವಣಿಯು ಒಂದು ನಿರ್ದಿಷ್ಟ ಅವಧಿಗೆ ಮಾತ್ರ. ಆದ್ದರಿಂದ ಅದು ಮುಕ್ತಾಯವಾಗುವ ವಾಯಿದೆ ದಿನಾಂಕವನ್ನು ಮುಂದಾಗಿಯೇ ತಿಳಿದುಕೊಂಡಿರಬಹುದು.


ಠೇವಣಿಯ ಅವಧಿ ಪೂರ್ತಿ ನಿಗದಿತ ಬಡ್ಡಿಯ ದರ ಸಂದಾಯವಾಗುತ್ತಿರುತ್ತದೆ.

ಬೇಕೆಂದಾಗ / ಅವಶ್ಯಕತೆ ಇದ್ದಾಗ, ಠೇವಣಿಯ ಮೇಲೆ ಸಾಲವನ್ನು ಪಡೆಯಬಹುದು.

ತುರ್ತು ಪರಿಸ್ಥಿತಿಯಲ್ಲಿ ಪೂರಾ ಹಣವನ್ನು ವಾಯಿದೆಗೆ ಮುಂಚೆಯೇ ಪಡೆಯಬಹುದು.

ಠೇವಣಿ ಇಟ್ಟ ದಿನದಿಂದಲೇ ಬಡ್ಡಿ ಸಂದಾಯವಾಗುತ್ತದೆ.

ಬ್ಯಾಂಕ್ ಠೇವಣಿ ಎಷ್ಟು ಸುರಕ್ಷಿತ?



ಈಗಾಗಲೇ ಮೇಲೆ ವಿವರಿಸಿರುವಂತೆ ರಾಷ್ಟ್ರೀಕೃತ ಹಾಗೂ ಖಾಸಗೀ ಬ್ಯಾಂಕುಗಳು ಸಂಪೂರ್ಣವಾಗಿ ರಿಸರ್ವ್ ಬ್ಯಾಂಕಿನ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ಒಂದೆರಡು ಸಂದರ್ಭಗಳಲ್ಲಿ ಬ್ಯಾಂಕುಗಳು ವಿಫಲವಾದಾಗ ಅಂತಹ ಬ್ಯಾಂಕುಗಳ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿ ಬೇರೆ ಶಕ್ತಿಶಾಲಿ ಬ್ಯಾಂಕುಗಳೊಂದಿಗೆ ವಿಲೀನಗೊಳಿಸಿರುವ ಸಂದರ್ಭಗಳೂ ಉಂಟು. ಈ ಕಾರಣದಿಂದ ಬ್ಯಾಂಕುಗಳಲ್ಲಿ ಠೇವಣಿ ಸುರಕ್ಷಿತವೆಂದು ತಿಳಿಯಬಹುದು.

ಆದರೆ ಸಹಕಾರಿ ಬ್ಯಾಂಕುಗಳಲ್ಲಿ ಠೇವಣಿ ಇಡುವಾಗ ಕೆಲವು ಅಂಶಗಳತ್ತ ತೀವ್ರ ಗಮನ ಹರಿಸಬೇಕು. ಉದಾಹರಣೆಗೆ ಆ ಬ್ಯಾಂಕಿನ ನಿರ್ದೇಶಕರು, (ಆಡಳಿತವರ್ಗ) ಬ್ಯಾಂಕಿನ ಬಗ್ಗೆ ರಿಸರ್ವ್ ಬ್ಯಾಂಕ್ ಮತ್ತು ಸಹಕಾರ ಇಲಾಖೆ ಕಾಲಕಾಲಕ್ಕೆ ನೀಡಿರುವ ವರದಿ, ಆಡಿಟ್‌ವರದಿ, ಎಷ್ಟು ವರ್ಷಗಳಿಂದ ಬ್ಯಾಂಕ್ ಅಸ್ತಿತ್ವದಲ್ಲಿದೆ, ಬ್ಯಾಂಕ್ ಹೊಂದಿರುವ ಷೇರು ಬಂಡವಾಳ ಮತ್ತು ಮೀಸಲು ನಿಧಿ, ಠೇವಣಿಗಳು, ಬ್ಯಾಂಕು ಗ್ರಾಹಕರಿಗೆ ನೀಡಿರುವ ಸಾಲದ ಮೊಬಲಗು ಮತ್ತು ಮುಂಗಡ, ಅನುತ್ಪಾದಕ ಆಸ್ತಿಯ ಪ್ರಮಾಣ – ಇವೇ ಮುಂತಾದ ವಿವರಗಳನ್ನು ಅತ್ಯಗತ್ಯವಾಗಿ ತಿಳಿದುಕೊಳ್ಳಬೇಕು.

ಠೇವಣಿ ವಿಮೆ ಮತ್ತು ಉದರಿ ಖಾತರಿ ನಿಗಮ

ಈ ಸಂಸ್ಥೆಯು ದೇಶದಲ್ಲಿರುವ ಎಲ್ಲ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳನ್ನು ಸದಸ್ಯರನ್ನಾಗಿ ಹೊಂದಿದೆ. ಈ ಬ್ಯಾಂಕುಗಳಲ್ಲಿ ಠೇವಣಿ ಮಾಡಿರುವ ಎಲ್ಲ ಠೇವಣಿದಾರರಿಗೂ ವಿಮಾ ಸೌಲಭ್ಯವಿರುತ್ತದೆ. ಪ್ರತಿಯೊಂದು ಸದಸ್ಯ ಬ್ಯಾಂಕು ತಾನು ಹೊಂದಿರುವ ಠೇವಣಿಗಳ ಮೇಲೆ ನಿಗದಿತ ದರದ ವಿಮೆಯ ಪ್ರೀಮಿಯಂ ಹಣವನ್ನು ನೀಡಬೇಕಾಗುತ್ತದೆ.

ಬ್ಯಾಂಕುಗಳು ಯಾವುದೇ ಕಾರಣದಿಂದ ದಿವಾಳಿಯಾದಾಗ ಅಂತಹ ಸಂದರ್ಭದಲ್ಲಿ ವಿಮಾ ನಿಗಮವು ಠೇವಣಿದಾರರಿಗೆ ಒಂದು ಲಕ್ಷ ರೂಪಾಯಿಗಳವರೆಗೆ ಠೇವಣಿಗೆ ರಕ್ಷಣೆಯನ್ನು ಒದಗಿಸುತ್ತದೆ.

ಹಣ ಹೂಡುವಿಕೆಗೆ ಇತರೆ ಅವಕಾಶಗಳು



ಚಿನ್ನ ಮತ್ತು ಬೆಳ್ಳಿಯ ಮೋಹ ಎಂತಹವರನ್ನೂ ಆವರಿಸುತ್ತದೆ. ಶ್ರೀಮಂತರು ಚಿನ್ನವನ್ನು ಪ್ರತಿಷ್ಠೆಯ ವಸ್ತುವಾಗಿ ಹೊಂದಿದ್ದರೆ, ಬಡವರು ಅದನ್ನು ಅಪತ್ಕಾಲಕ್ಕೆ ನೆರವಾಗುವುದೆಂಬ ಆಶಾ ಭಾವನೆಯನ್ನು ಹೊಂದಿರುತ್ತಾರೆ. ತಮ್ಮ ಶಕ್ತಿ ಇದ್ದಷ್ಟು ಹೊಂದಲು ಪ್ರಯತ್ನಿಸುತ್ತಾರೆ.

ಆದರೆ ಚಿನ್ನ, ಬೆಳ್ಳಿ ಇವೆರಡನ್ನು ಹೂಡಿಕೆಯ ದೃಷ್ಟಿಯಿಂದ ಪರಿಗಣಿಸಿದಾಗ – ಅದರಲ್ಲಿಯೂ ನಿವೃತ್ತಿಯ ನಂತರ – ಅಷ್ಟೊಂದು ಸಮಂಜಸವಲ್ಲವೆಂದು ಹೇಳಬಹುದು. ಕಾರಣವೇನೆಂದರೆ ನಿವೃತ್ತರು ತಮ್ಮ ಇಳಿವಯಸ್ಸಿನಲ್ಲಿ ಠೇವಣಿ ಮಾಡುವ ಪ್ರಮುಖ ಉದ್ದೇಶವೆಂದರೆ ಪ್ರತಿ ದಿನದ ಜೀವನ ನಿರ್ವಹಣೆಗೆ ಬೇಕಾದ ಹಣದ ಆವಶ್ಯಕತೆಗಾಗಿ. ಚಿನ್ನ ಮತ್ತು ಬೆಳ್ಳಿಯ ಮೇಲೆ ಹಣವನ್ನು ಹೂಡುವುದರಿಂದ ಪ್ರತಿ ತಿಂಗಳಾಗಲೀ ಅಥವಾ ವರ್ಷಕ್ಕೊಮ್ಮೆಯಾಗಲೀ ಯಾವ ವಿಧವಾದ ಪ್ರತಿಫಲವೂ ಹಣದ ರೂಪದಲ್ಲಿ ದೊರಕುವುದಿಲ್ಲ. ಅಷ್ಟೇ ಅಲ್ಲದೆ ಹೆಚ್ಚಿನ ಪ್ರಮಾಣದಲ್ಲಿ ಇದನ್ನು ಸಂಗ್ರಹಿಸಿದಾಗ ಅದರ ಸುರಕ್ಷತೆಗೇ ಹೆಚ್ಚಿನ ಗಮನ ನೀಡಬೇಕಾಗುತ್ತದೆ.

ಇನ್ನು ನಿವೇಶನದ ಬಗ್ಗೆ ಗಮನ ಹರಿಸಿದಾಗಲೂ ಸಹ ಇದೇ ಅಭಿಪ್ರಾಯ ಮೂಡಿ ಬರುತ್ತದೆ. ಪ್ರತಿಯೊಬ್ಬ ಮನುಷ್ಯನಿಗೂ ಇರಲಿಕ್ಕೊಂದು ಮನೆ, ಅದಕ್ಕಾಗಿ ನಿವೇಶನದ ಅಗತ್ಯ ಇದ್ದೇ ಇರುತ್ತದೆ. ಅದನ್ನು ಪಡೆದ ನಂತರವೂ ಹಲವಾರು ಮಂದಿ ತಮ್ಮ ಹಣವನ್ನು ನಿವೇಶನಗಳಲ್ಲಿ ಹೂಡಿಕೆ ಮಾಡಿ ಅದರಿಂದ ಗಳಿಸಬಹುದಾದ ಅಧಿಕ ಲಾಭದ ನಿರೀಕ್ಷೆಯಲ್ಲಿರುತ್ತಾರೆ.

ಚಿನ್ನ ಬೆಳ್ಳಿಗಳಂತೆಯೇ ನಿವೇಶನದ ಮೇಲೆ ಹಾಕಿದ ಹಣಕ್ಕೂ ಕಾಲ ಕಾಲಕ್ಕೆ ಯಾವುದೇ ಪ್ರತಿಫಲ ಸಿಗುವುದಿಲ್ಲ ಬದಲಿಗೆ ಸುಭದ್ರತೆಗೆ, ಸುರಕ್ಷತೆಗೆ ಸಾಕಷ್ಟು

ಖರ್ಚು ಮಾಡಬೇಕಾಗುತ್ತದೆ. ಪ್ರತಿ ವರ್ಷವೂ ಸಂಬಂಧಪಟ್ಟ ಮುನಿಸಿಪಾಲಿಟಿ / ಕಾರ್ಪೋರೇಷನ್ ಮುಂತಾದ ಸ್ಥಳೀಯ ಸಂಸ್ಥೆಗಳಿಗೆ ತೆರಿಗೆಯನ್ನು ಕಟ್ಟುತ್ತಿರಬೇಕಾಗುತ್ತದೆ. ಅಲ್ಲದೆ ನಿವೇಶನದ ಮೇಲೆ ಹೂಡಬೇಕಾದ ಹಣವೂ ಸಹ ಅಧಿಕವಾಗಿಯೇ ಇರುತ್ತದೆ. ಬೇಕೆಂದಾಗ ಮಾರಿ ಹಣವನ್ನು ಪಡೆಯಲು ಸಾಕಷ್ಟು ಕಾಲ ಕಾಯಬೇಕು. ಅಲ್ಲದೆ ತತ್ಸಂಬಂಧವಾದ ಕಾನೂನಾತ್ಮಕ ವಿಧಿ ವಿಧಾನಗಳನ್ನು ಸಹ ಅವಶ್ಯಕವಾಗಿ ತಿಳಿದಿರಬೇಕಾಗುತ್ತದೆ.

ನಿವೃತ್ತಿಯ ನಂತರದ ಹಣಕಾಸಿನ ಹೂಡಿಕೆಯಲ್ಲಿ ಗಮನಿಸಬೇಕಾದ ಪ್ರಮುಖ ಅಂಶಗಳೆಂದರೆ ಭದ್ರತೆ, ಪ್ರತಿಫಲ ಹಾಗೂ ಬೇಕೆಂದಾಗ ಹಣ ಮರಳಿ ಪಡೆಯಲು ಇರುವ ಅವಕಾಶಗಳು ಎಂಬುದನ್ನು ಅರಿತಿದ್ದೇವೆ. ಈ ಸೌಲಭ್ಯಗಳು ಚಿನ್ನ, ಬೆಳ್ಳಿ ನಿವೇಶನಗಳಲ್ಲಿ ಹಣ ಹೂಡಿದಾಗ ಅಷ್ಟಾಗಿ ಕಾಣಬರುವುದಿಲ್ಲ.

ಈ ಕ್ಷೇತ್ರಗಳಲ್ಲಿ ಹಣ ಹೂಡಿದಲ್ಲಿ ಹಣದ ಮೌಲ್ಯವೇನೋ ಹೆಚ್ಚಾಗಬಹುದು. ಆದರೆ ಅದಕ್ಕೆ ಸಾಕಷ್ಟು ಸಮಯ ಕಾಯಬೇಕು. ಕಾಲಕಾಲಕ್ಕೆ ಅದರಿಂದ ಯಾವುದೇ ಪ್ರತಿಫಲ ಅಂದರೆ ಬಡ್ಡಿಯನ್ನು ಪಡೆಯಲಾಗುವುದಿಲ್ಲ. ಇನ್ನು ಬೇಕೆಂದಾಗ ಹಣವನ್ನು ತಕ್ಷಣವೇ ಹಿಂದಕ್ಕೆ ಪಡೆಯಲಾಗುವುದಿಲ್ಲ. ಸೂಕ್ತ ಬೆಲೆ ಬಂದಾಗ ಮಾರಿ ಲಾಭ ಗಳಿಸಬಹುದೇ ಹೊರತು ನಮ್ಮ ಕಷ್ಟಕಾಲದಲ್ಲಿ ಅಗತ್ಯ ಬಿದ್ದಾಗ ಅದನ್ನು ಮಾರಲು ಆಗುವುದಿಲ್ಲ.

ಈ ಎಲ್ಲ ಮೇಲಿನ ಕಾರಣದಿಂದ ತಾರುಣ್ಯದಲ್ಲಿ ಈ ಕ್ಷೇತ್ರದಲ್ಲಿ ಹೂಡಬಹುದೇ ಹೊರತು ಜೀವನದ ಪೂರ್ವಾರ್ಧದಲ್ಲಿ ಅಲ್ಲ. ಈ ಸಂದರ್ಭದಲ್ಲಿ ಹಣದ ಹೂಡಿಕೆಯ ಉದ್ದೇಶ – ಜೀವನ ನಿರ್ವಹಣೆಗೆ ಅತ್ಯಗತ್ಯವಾಗಿ ಪ್ರತಿ ತಿಂಗಳೂ ಬೇಕಾದ ಅಗತ್ಯತೆಯನ್ನು ಪೂರೈಸುವ ಹಣದ ಬಗ್ಗೆಯೇ ಹೊರತು ಹಣದ ವೃದ್ಧಿಯ ಬಗ್ಗೆ ಅಲ್ಲ.

ಠೇವಣಿ ಹೂಡುವಾಗ ಮತ್ತು ನಂತರ ವಹಿಸಬೇಕಾದ ಎಚ್ಚರಿಕೆ



ಠೇವಣಿ ಹೂಡುವಲ್ಲಿ ವಹಿಸಬೇಕಾದ ಎಚ್ಚರದಷ್ಟೇ ಹಣ ಹೂಡಿದ ನಂತರವೂ ಸಹ ಎಚ್ಚರಿಕೆ ಹೊಂದಿರಬೇಕು. ವಯಸ್ಸಾದಂತೆ ಮರೆಗುಳಿತನ ಜಾಸ್ತಿಯಾಗುವುದರಿಂದ ಪ್ರತಿಯೊಂದು ಠೇವಣಿಯ ವಿವರವನ್ನೂ ಅಂದರೆ ಠೇವಣಿ ಇಟ್ಟ ಸಂಸ್ಥೆಯ ಹೆಸರು, ಠೇವಣಿಯ ಮೊತ್ತ, ಠೇವಣಿಯ ಅವಧಿ, ಬಡ್ಡಿ ದರ. ಬಡ್ಡಿಯು ಸಂದಾಯವಾಗತಕ್ಕ ದಿನಾಂಕ, ಠೇವಣಿಯು ಮುಕ್ತಾಯಗೊಳ್ಳುವ ದಿನ, ಇತ್ಯಾದಿ ವಿವರಗಳನ್ನು ಒಂದೆಡೆ ದಾಖಲಿಸಿ ಇಟ್ಟುಕೊಳ್ಳಬೇಕು ಮತ್ತು ನಿಗದಿತ ದಿನದಂದು ಬಡ್ಡಿ ಸಂದಾಯವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಬಡ್ಡಿಯನ್ನು ತಮ್ಮ ಬ್ಯಾಂಕಿಗೆ ನೇರವಾಗಿ ಜಮಾ ಆಗುವಂತೆ ವಿದ್ಯುನ್ಮಾನ ತೀರುವಳಿ ಪದ್ಧತಿ Electronic Clearing Scheme - ECS ಯನ್ನು ಉಪಯೋಗಿಸಿಕೊಳ್ಳಬೇಕು.

ಮತ್ತೊಂದು ಮುಖ್ಯವಾಗಿ ಗಮನಿಸಬೇಕಾದ ವಿಚಾರವೆಂದರೆ ವಿಳಾಸ ಬದಲಾವಣೆಯಾದಲ್ಲಿ ಅದನ್ನು ಸಂಬಂಧಪಟ್ಟ ಹಣ ಹೂಡಿದ ಸಂಸ್ಥೆಗೆ ತಿಳಿಸಬೇಕು. ಕಾರಣ ಠೇವಣಿಯು ಮುಕ್ತಾಯದ ದಿನಾಂಕ ಹತ್ತಿರವಾಗುತ್ತಿದ್ದಂತೆ ಸಂಸ್ಥೆಗಳು ಠೇವಣಿದಾರರಿಗೆ ಜ್ಞಾಪನಾ ಪತ್ರವನ್ನು (Reminder) ಕಳುಹಿಸಲು ಅನುಕೂಲವಾಗುತ್ತದೆ.

ಷೇರುಪೇಟೆಯಲ್ಲಿ ಹಣ ಹೂಡುವಿಕೆ



ಷೇರುಪೇಟೆಯಲ್ಲಿ ಹಣ ಹೂಡುವುದಕ್ಕೆ ಮುಂಚೆ ಆ ಕ್ಷೇತ್ರದಲ್ಲಿ ಇರಬಹುದಾದ ಸಾಧಕ-ಬಾಧಕಗಳು ಅನುಕೂಲ - ಅನಾನುಕೂಲಗಳ ಬಗ್ಗೆ ಸ್ವಲ್ಪ ತಿಳಿವಳಿಕೆಯನ್ನು ಹೊಂದಿರಬೇಕಾದ್ದು ಅತಿ ಅಗತ್ಯ.

ಈ ಕ್ಷೇತ್ರದಲ್ಲಿ ಹಣ ತೊಡಗಿಸಬೇಕಾದರೆ ಷೇರುಪೇಟೆಯ ಸಾಮಾನ್ಯ ಜ್ಞಾನ ಮತ್ತು ತಿಳಿವಳಿಕೆ ಅತಿ ಮುಖ್ಯ. ಅಲ್ಲದೆ ಸ್ವಲ್ಪ ಮಟ್ಟಿಗಿನ ಧೈರ್ಯ ಹಾಗೂ ರಿಸ್ಕ್ ತೆಗೆದುಕೊಳ್ಳುವ ತಾಕತ್ತು, ಸಂಯಮ ಮತ್ತು ತಾಳ್ಮೆಯಿರಬೇಕು.

ಷೇರು ಎಂದರೇನು?

ಒಂದು ಕೈಗಾರಿಕಾ ಸಂಸ್ಥೆಯು ಹೊಂದಿರುವ ಬಂಡವಾಳದಲ್ಲಿ ಒಂದು ಪಾಲು ಅಥವ ಒಂದು ಭಾಗವನ್ನು ಷೇರು ಎಂದು ಕರೆಯಬಹುದು. ಉದಾಹರಣೆಗೆ ಹೇಳಬಹುದಾದರೆ ಯಾವನೇ ಒಬ್ಬ ಉದ್ದಿಮೆದಾರ ಒಂದು ಕೈಗಾರಿಕೆಯನ್ನು ಅಥವ ಸಂಸ್ಥೆಯನ್ನು ಸ್ಥಾಪಿಸಬೇಕಾದರೆ ಅಗಾಧ ಪ್ರಮಾಣದಲ್ಲಿ ಹಣವನ್ನು ಹೂಡಬೇಕಾಗುತ್ತದೆ. ಅಷ್ಟೊಂದು ಹಣವನ್ನು ಅವನೊಬ್ಬನೇ ಹೂಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಬೇಕಾಗುವ ಬಂಡವಾಳವನ್ನು ಹಲವಾರು ಘಟಕಗಳಾಗಿ ವಿಂಗಡಿಸುತ್ತಾನೆ. ಆ ಘಟಕ ಅಥವಾ ಭಾಗಕ್ಕೆ ಇಂಗ್ಲೀಷಿನಲ್ಲಿ ಷೇರು ಎಂದು ಕರೆಯಲಾಗುತ್ತದೆ. ಅದನ್ನೇ ಕನ್ನಡದಲ್ಲಿಯೂ ಸಹ ಷೇರು ಎಂದು ಕರೆಯಲಾಗುತ್ತದೆ.

ಬಂಡವಾಳವನ್ನು 10 ರೂ. 100 ರೂ. ಗಳ ಮುಖ ಬೆಲೆಯ ಷೇರುಗಳನ್ನಾಗಿ ವಿಭಜಿಸಲಾಗಿರುತ್ತದೆ. ಈಚೆಗೆ 1ರೂ. 2ರೂ. 5ರೂ. ಮುಖಬೆಲೆಯ ಷೇರುಗಳನ್ನಾಗಿಸಿರುವುದು ಸಾಮಾನ್ಯವಾಗಿದೆ.

ಷೇರುಗಳನ್ನು ಕೊಳ್ಳುವುದು ಹೇಗೆ?

ಷೇರುಗಳನ್ನು ಕೊಳ್ಳಲು ಎರಡು ರೀತಿಯ ಅವಕಾಶಗಳಿವೆ.

1. ಪ್ರಾಥಮಿಕ ಮಾರುಕಟ್ಟೆ
2. ದ್ವಿತೀಯ ಮಾರುಕಟ್ಟೆ

ಪ್ರಾಥಮಿಕ ಮಾರುಕಟ್ಟೆ /Primary Market :

ಕಂಪನಿಗಳು ಸ್ಥಾಪನೆಯಾಗುವಾಗ ಸಾರ್ವಜನಿಕರಿಗೆ ಷೇರುಗಳನ್ನು ನೀಡುತ್ತವೆ. ಈ ಕ್ರಿಯೆಯನ್ನು ಸಾರ್ವಜನಿಕ ನೀಡಿಕೆ ಎಂದು ಕರೆಯಲಾಗುತ್ತದೆ. ಈ ಸಾರ್ವಜನಿಕ ನೀಡಿಕೆಯಲ್ಲಿ ಹೂಡಿಕೆದಾರರು ಭಾಗವಹಿಸಿ ಷೇರುಗಳಿಗೆ ಅರ್ಜಿ ಸಲ್ಲಿಸಿದಾಗ ನೇರವಾಗಿ ಕಂಪನಿಯಿಂದಲೇ ಷೇರುಗಳನ್ನು ಪಡೆಯಬಹುದು. ಈ ಕ್ರಮಕ್ಕೆ ಪ್ರಾಥಮಿಕ ಮಾರುಕಟ್ಟೆ ಎಂದು ಹೇಳಲಾಗುತ್ತದೆ.

ದ್ವಿತೀಯ ಮಾರುಕಟ್ಟೆ / Secondary Market :

ಈಗಾಗಲೇ ಕಾರ್ಯ ನಿರ್ವಹಿಸುತ್ತಿದ್ದು ಷೇರು ವಿನಿಮಯ ಕೇಂದ್ರದಲ್ಲಿ ವಹಿವಾಟು ನಡೆಸುತ್ತಲಿರುವ ಕಂಪನಿಗಳ ಷೇರುಗಳನ್ನು ಷೇರು ದಲ್ಲಾಳಿಗಳ ಮುಖಾಂತರ ಕೊಳ್ಳಬಹುದು. ಇದನ್ನು ದ್ವಿತೀಯ ಮಾರುಕಟ್ಟೆ ಎಂದು ಹೇಳಲಾಗುತ್ತದೆ. ಈ ಷೇರುಗಳ ಮಾರುಕಟ್ಟೆಯ ಬೆಲೆಯು ಅದರ ಮುಖಬೆಲೆಗಿಂತ ವಿಭಿನ್ನವಾಗಿರುತ್ತದೆ. ಅದು ಜಾಸ್ತಿಯೂ ಇರಬಹುದು. ಅಥವಾ ಕಡಿಮೆಯೂ ಇರಬಹುದು.

ಷೇರುಗಳ ಮಾರುಕಟ್ಟೆ ಬೆಲೆಯು ಕಂಪನಿಯ ಆರ್ಥಿಕ ಸುಸ್ಥಿರತೆ, ಅದರ ಉತ್ಪನ್ನ / ಸೇವೆಗಳಿಗಿರುವ ಬೇಡಿಕೆ, ಗಳಿಸಿದ ಲಾಭ, ಷೇರುದಾರರಿಗೆ ಹಂಚಿದ ಲಾಭಾಂಶ, ಹೊಂದಿರುವ ಬಂಡವಾಳ ಮತ್ತು ಮೀಸಲು ನಿಧಿ ಮುಂತಾದವುಗಳ ಮೇಲೆ ಅವಲಂಬಿತವಾಗಿರುತ್ತದೆ. ಅಷ್ಟೇ ಅಲ್ಲದೆ ಮಾರುಕಟ್ಟೆಯಲ್ಲಿ ಆ ಕಂಪನಿಯ ಷೇರುಗಳು ಲಭ್ಯವಿರುವ ಪ್ರಮಾಣದ ಮೇಲೂ ನಿರ್ಧಾರವಾಗುತ್ತದೆ.

ದ್ವಿತೀಯ ಮಾರುಕಟ್ಟೆಯಲ್ಲಿ ಷೇರುಗಳನ್ನು ಕೊಳ್ಳುವುದು ಹೇಗೆ?

ಷೇರುಗಳನ್ನು ಪ್ರಾಥಮಿಕ ಮಾರುಕಟ್ಟೆಯಲ್ಲಿ ಅರ್ಜಿ ಸಲ್ಲಿಸುವಾಗಾಗಲೀ ಅಥವ ದ್ವಿತೀಯ ಮಾರುಕಟ್ಟೆಯಲ್ಲಿ ಕೊಳ್ಳುವಾಗಾಗಲೀ ಅಥವ ಮಾರುವಾಗಾಗಲೀ, ಪ್ರತಿಯೊಬ್ಬರೂ ಡಿಮ್ಯಾಟ್ ಖಾತೆಯನ್ನು ಕಡ್ಡಾಯವಾಗಿ ಪಡೆದಿರಬೇಕಾದುದು ಅತ್ಯವಶ್ಯಕ.

ಡಿಮ್ಯಾಟ್ ಸೇವೆಯನ್ನು ಒದಗಿಸಲು ಎರಡು ಸೇವಾಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಅವುಗಳೆಂದರೆ :

ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್‌ನ ನ್ಯಾಷನಲ್ ಡಿಪಾಸಿಟರಿ ಲಿಮಿಟೆಡ್

ಬೊಂಬಾಯಿ ಸ್ಟಾಕ್ ಎಕ್ಸ್ಚೇಂಜ್‌ನ ಸೆಂಟ್ರಲ್ ಡಿಪಾಸಿಟರಿ ಲಿಮಿಟೆಡ್

ಈ ಎರಡೂ ಸೇವಾ ಸಂಸ್ಥೆಗಳಲ್ಲಿ ಯಾವುದಾದರೂ ಒಂದರಲ್ಲಿ ಒಂದು ಖಾತೆಯನ್ನು ಕಡ್ಡಾಯವಾಗಿ ತೆಗೆಯಲೇಬೇಕಾಗುತ್ತದೆ. ಈ ಖಾತೆಯನ್ನು ತೆಗೆಯಲು ಖಾತೆದಾರರಾಗ ಬಯಸುವವರು ಈ ಕೆಳಕಂಡ ದಾಖಲೆಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ನೀಡಬೇಕಾಗುತ್ತದೆ. ಅವುಗಳೆಂದರೆ :

1. ಪ್ಯಾನ್ ಕಾರ್ಡ್
2. ವಿಳಾಸದ ದಾಖಲೆ ಪತ್ರ
3. ಗುರುತಿನ ದಾಖಲೆ ಪತ್ರ
4. ಅರ್ಜಿದಾರನ ಭಾವಚಿತ್ರ
5. ಅರ್ಜಿದಾರನು ಖಾತೆ ಹೊಂದಿರುವ ಬ್ಯಾಂಕಿನ ಕ್ಯಾನ್ಸಲ್ ಮಾಡಿದ ಒಂದು ಚೆಕ್‌ನ ಹಾಳೆ ಅಥವಾ ಅದರ ಜೆರಾಕ್ಸ್ ಪ್ರತಿ.

ಈ ಡಿಮ್ಯಾಟ್ ಖಾತೆಯನ್ನು ಅರ್ಜಿದಾರನು ತನ್ನ ಒಂದೇ ಹೆಸರಿನಲ್ಲಿ ಅಥವ ಜಂಟೀ ಹೆಸರಿನಲ್ಲಿ ತೆಗೆಯಬಹುದು ಮತ್ತು ಈ ಖಾತೆಗೆ ನಾಮನಿರ್ದೇಶನವನ್ನೂ ಮಾಡಬಹುದು.

ಷೇರುಗಳನ್ನು ಡಿಮ್ಯಾಟ್ ಖಾತೆಯಲ್ಲಿ ಹೊಂದುವುದರಿಂದ ಇರುವ ಅನುಕೂಲಗಳು

1. ಷೇರು ವರ್ಗಾವಣೆಯಲ್ಲಿ ವಿಳಂಬವಿರುವುದಿಲ್ಲ.
2. ಷೇರು ವರ್ಗಾವಣೆಯಲ್ಲಿ ಸ್ಟಾಂಪ್ ಶುಲ್ಕವಿರುವುದಿಲ್ಲ.
3. ಷೇರುಪತ್ರಗಳನ್ನು ಸುರಕ್ಷಿತವಾಗಿ ಕಾಪಾಡುವ ಸಮಸ್ಯೆ ಇರುವುದಿಲ್ಲ.
4. ಷೇರುಪತ್ರಗಳ ಕಳವು, ತಪ್ಪು ಜಾಗದಲ್ಲಿಟ್ಟು ಹುಡುಕುವ ಪ್ರಮೇಯ, ಫೋರ್ಜರಿ ಮುಂತಾದುವುಗಳಿಗೆ ಅವಕಾಶವಿಲ್ಲ.
5. ಹಣದ ಅಗತ್ಯತೆ ಇದ್ದಾಗ ಒತ್ತೆ ಇಟ್ಟು ಸಾಲ ಪಡೆಯುವ ಸೌಕರ್ಯ.
6. ಬೋನಸ್ ಹಾಗೂ ಹಕ್ಕಿನ ಷೇರು ನೀಡಿದಾಗ ಖಾತೆಗೆ ಜಮೆ ಆಗುವುದರಲ್ಲಿ ವಿಳಂಬವಿರುವುದಿಲ್ಲ.
7. ಷೇರುದಾರರ ವಿಳಾಸ ಬದಲಾವಣೆ, ಬ್ಯಾಂಕಿನ ಖಾತೆ ಬದಲಾವಣೆ, ನಾಮ ನಿರ್ದೇಶನದ ಬದಲಾವಣೆ ಮುಂತಾದ ಸಂದರ್ಭಗಳಲ್ಲಿ ಸೇವಾ ಸಂಸ್ಥೆಗೆ ತಿಳಿಸಿದರೆ ಸಾಕು. ಆ ಖಾತೆಯಲ್ಲಿರುವ ಎಲ್ಲಾ ಕಂಪನಿಗಳ ದಾಖಲೆಗಳಲ್ಲಿ ಈ ಬದಲಾವಣೆಗಳು ತಕ್ಷಣವೇ ಜಾರಿಗೆ ಬರುತ್ತವೆ.

ಷೇರು ವ್ಯವಹಾರದಲ್ಲಿ ಹಣ ಹೂಡುವುದರಲ್ಲಿ ಇರುವ ಅನುಕೂಲಗಳು :

ಷೇರುಗಳಲ್ಲಿ ಹಣ ಹೂಡುವುದರಲ್ಲಿ ಈ ಕೆಳಗಿನ ಅನುಕೂಲತೆಗಳಿವೆ :

ಲಾಭಾಂಶ

ಬೋನಸ್ ಷೇರು

ಹಕ್ಕಿನ ಷೇರು

ಅಲ್ಪ ಕಾಲಾವಧಿಯ ಲಾಭ

ದೀರ್ಘ ಕಾಲಾವಧಿಯ ಲಾಭ

ಕಂಪನಿಗಳು ನೀಡುವ ಲಾಭಾಂಶಕ್ಕೆ ಷೇರುದಾರರು ಯಾವುದೇ ಆದಾಯ ತೆರಿಗೆಯನ್ನು ನೀಡಬೇಕಾಗಿರುವುದಿಲ್ಲ. ಅಷ್ಟೇ ಅಲ್ಲ, ಷೇರುದಾರನು ತಾನು ಕೊಂಡ ಒಂದು ವರ್ಷಕ್ಕೂ ಹೆಚ್ಚಿನ ಅವಧಿಯ ಷೇರುಗಳನ್ನು ಷೇರು ವಿನಿಮಯ ಕೇಂದ್ರದಿಂದ ನೋಂದಾಯಿತವಾದ ಷೇರು ದಲ್ಲಾಳಿಯ ಮುಖಾಂತರ ಮಾರಿ, ನಿಗದಿತ ಶುಲ್ಕ – ಸೆಕ್ಯುರಿಟಿ ಟ್ರಾನ್ಸಾಕ್ಷನ್ ಟ್ಯಾಕ್ಸ್ ಮುಂತಾದ ತೆರಿಗೆಗಳನ್ನು ಸಂದಾಯಿಸಿದ್ದಾಗ ತಾನು ಗಳಿಸಿದ ಲಾಭದ ಮೇಲೆ ಯಾವುದೇ ಆದಾಯ ತೆರಿಗೆಯನ್ನು ನೀಡಬೇಕಾಗಿರುವುದಿಲ್ಲ.

ಇಷ್ಟೆಲ್ಲ ಅನುಕೂಲ / ಸೌಲಭ್ಯಗಳಿದ್ದರೂ, ಮುಂಚೆಯೇ ತಿಳಿಸಿದ್ದಂತೆ ಷೇರುಗಳ ವ್ಯವಹಾರವನ್ನು ರಿಸ್ಕ್ ಕ್ಯಾಪಿಟಲ್ ಎಂದೇ ಭಾವಿಸಲಾಗುತ್ತದೆ. ಈ ಕ್ಷೇತ್ರದಲ್ಲಿ ಹಣ ಹೂಡುವಾಗ ಅದರ ಸಾಧಕ ಬಾಧಕಗಳನ್ನು ಅರಿತುಕೊಂಡು ಹೂಡುವುದು ಒಳ್ಳೆಯದು.

ಅಲ್ಲದೆ ತನ್ನ ಜೀವನ ನಿರ್ವಹಣೆಗೆ ಬೇಕಾಗುವ ಹಣವನ್ನು ನಿಶ್ಚಿತ ಆದಾಯ ತರುವಂತಹ ಬಂಡವಾಳ ಹೂಡಿಕೆ ಕ್ಷೇತ್ರಗಳಲ್ಲಿ ತೊಡಗಿಸಿ ತಾನು ಹೊಂದಿರಬಹುದಾದ ಸ್ವಲ್ಪ ಮಟ್ಟಿನ ಹೆಚ್ಚುವರಿ ಹಣವನ್ನು ಷೇರುಗಳಲ್ಲಿ ತೊಡಗಿಸಬಹುದು.

ಮ್ಯೂಚುಯಲ್ ಫಂಡ್



ಮ್ಯೂಚುಯಲ್ ಫಂಡ್ ಎನ್ನುವುದು ಜನ ಸಾಮಾನ್ಯರಿಗೆ ತಮ್ಮ ಹಣವನ್ನು ಹೂಡಲು ಅವಕಾಶವಿರುವ ಮತ್ತೊಂದು ಕ್ಷೇತ್ರ ಎನ್ನಬಹುದು. ಮ್ಯೂಚುಯಲ್ ಎಂದರೆ 'ಪರಸ್ಪರ' ಫಂಡ್ ಎಂದರೆ ನಿಧಿ. ಹಾಗಾಗಿ ಮ್ಯೂಚುಯಲ್ ಫಂಡನ್ನು ಕನ್ನಡದಲ್ಲಿ 'ಪರಸ್ಪರ ನಿಧಿ' ಎಂದು ಕರೆಯಬಹುದು.

ಈ ಮ್ಯೂಚುಯಲ್ ಫಂಡ್‌ಗಳ ಪ್ರಮುಖ ಕಾರ್ಯೋದ್ದೇಶವೆಂದರೆ ಸಾಮಾನ್ಯ ಹೂಡಿಕೆದಾರರಿಂದ ಹಣವನ್ನು ಸಂಗ್ರಹಿಸಿ ಅದನ್ನು ವಿವಿಧ ಕಂಪನಿಗಳ ಷೇರುಗಳಲ್ಲಿ ಹೂಡುವುದು - ಹಾಗೆ ಕೊಂಡ ಷೇರುಗಳನ್ನು ಕೊಂಡ ಬೆಲೆಗಿಂತ ಜಾಸ್ತಿ ಬೆಲೆಗೆ ಮಾರುವುದು. ಹಾಗೆ ಗಳಿಸಿದ ಲಾಭವನ್ನು ತನ್ನ ಷೇರುದಾರರಿಗೆ ಹಂಚುವುದು.

ಕಂಪನಿಗಳ ಷೇರುಗಳಿಗೂ ಮತ್ತು ಮ್ಯೂಚುಯಲ್ ಫಂಡ್‌ನ ಯೂನಿಟ್‌ಗಳಿಗೂ ಇರುವ ವ್ಯತ್ಯಾಸವೆಂದರೆ ಕಂಪನಿಗಳು ಷೇರುದಾರರಿಂದ ಹಣವನ್ನು ಸಂಗ್ರಹಿಸಿ ಅದನ್ನು ಉತ್ಪಾದನೆಗೆ ಬಳಸಿ ಲಾಭವನ್ನು ಪಡೆಯುವುದು - ಗಳಿಸಿದ ಲಾಭದಲ್ಲಿ ಸ್ವಲ್ಪ ಲಾಭಾಂಶವನ್ನು ಷೇರುದಾರರಿಗೆ ಹಂಚುವುದು. ಆದರೆ ಮ್ಯೂಚುಯಲ್ ಫಂಡ್‌ಗಳು ಯಾವುದೇ ರೀತಿಯ ಉತ್ಪಾದನಾ ಕಾರ್ಯದಲ್ಲಿಯೂ ಹಣವನ್ನು ತೊಡಗಿಸುವುದಿಲ್ಲ. ಬದಲಿಗೆ ಉತ್ಪಾದನೆಯಲ್ಲಿ ನಿರತವಾಗಿರುವ ಕಂಪನಿಗಳಲ್ಲಿ ಹಣವನ್ನು ಹೂಡಿ ತನ್ಮೂಲಕ ಗಳಿಸಿದ ಲಾಭಾಂಶ ಹಾಗೂ ಷೇರು ಮಾರಾಟದಿಂದ ಪಡೆದ ಹೆಚ್ಚುವರಿ ಹಣವನ್ನು ತನ್ನ ಖರ್ಚು ಕಳೆದು ಉಳಿದುದನ್ನು ತನ್ನ ಹೂಡಿಕೆದಾರರಿಗೆ ಹಂಚುವುದು.

ಮ್ಯೂಚುಯಲ್ ಫಂಡ್‌ಗಳಲ್ಲಿ ಪ್ರತಿ ಯೂನಿಟ್‌ನ ಮೌಲ್ಯವನ್ನು NAV ಎಂದು ಕರೆಯಲಾಗುತ್ತದೆ. Net Asset Value ಎಂಬುದರ ಸಂಕ್ಷಿಪ್ತ ರೂಪವೇ NAV. ಇದು ಮ್ಯೂಚುಯಲ್ ಫಂಡ್‌ನ ಆಸ್ತಿಯ ಒಟ್ಟು ಮೌಲ್ಯ ಒಂದು ಯೂನಿಟ್‌ನ NAV ಎಂದರೆ

$$\frac{\text{(ಸಂಸ್ಥೆಯ ಒಟ್ಟು ಹೂಡಿಕೆಯ ಮಾರುಕಟ್ಟೆ ಬೆಲೆ + ಗಳಿಸಿದ ಲಾಭ) – ಅದು ಭರಿಸಿದ ಖರ್ಚು}}{\text{ಹೊಂದಿರುವ ಒಟ್ಟು ಯೂನಿಟ್‌ಗಳ ಸಂಖ್ಯೆ}}$$

ಮೇಲಿನ ವಿವರಣೆಯಂತೆ, ನಮಗೆ ಗೋಚರಿಸುವುದು ಹೂಡಿಕೆಯ NAV ಯು ಷೇರುಗಳ ಮಾರುಕಟ್ಟೆಯ ಬೆಲೆಯ ಮೇಲೆ ನಿರ್ಧಾರವಾಗುತ್ತದೆ ಎಂದು. ಅಂದರೆ ಷೇರುಗಳ ಮಾರುಕಟ್ಟೆಯ ಬೆಲೆ ಹೆಚ್ಚಿದಷ್ಟೂ NAV ಹೆಚ್ಚಾಗುತ್ತದೆ. ಬೆಲೆ ಕಡಿಮೆಯಾದರೆ NAV ಯೂ ಸಹ ಕಡಿಮೆಯಾಗುತ್ತದೆ.

ಮ್ಯೂಚುಯಲ್ ಫಂಡ್‌ಗಳಲ್ಲಿ ಎರಡು ಬಗೆಯ ಯೋಜನೆಗಳನ್ನು ಕಾಣಬಹುದು.

1. ಮುಕ್ತ ಅಂತ್ಯ ಯೋಜನೆ Open Ended Scheme
2. ಅಂತ್ಯ ಸಹಿತ ಯೋಜನೆ Closed Ended Scheme

1. ಮುಕ್ತ ಅಂತ್ಯ ಯೋಜನೆ Open Ended Scheme :

ಈ ಯೋಜನೆಯು ನಿರಂತತೆಯ ಅಸ್ತಿತ್ವವನ್ನು (perpetual existence) ಹೊಂದಿರುತ್ತದೆ. ಈ ಯೋಜನೆಗೆ ಅಂತ್ಯವಿರುವುದಿಲ್ಲ. ದಿನನಿತ್ಯದ ಮಾರುಕಟ್ಟೆಯ ದರವನ್ನು - NAV – ಅನುಸರಿಸಿ ಕೊಳ್ಳಬಹುದು. / ಮಾರಾಟ ಮಾಡಬಹುದು. NAV ಯಲ್ಲಿ ಏರಿಳಿತವಾದಂತೆ ಕೊಳ್ಳುವ ಮಾರಾಟದ ಬೆಲೆಯಲ್ಲಿಯೂ ಸಹ ವ್ಯತ್ಯಾಸವಾಗುತ್ತಿರುತ್ತದೆ. ಈ ಯೋಜನೆಯಲ್ಲಿ ಹೂಡಿಕೆದಾರನಿಗೆ ಬೇಕೆನಿಸಿದಾಗ ಕೊಳ್ಳುವ ಹಾಗೂ ಮಾರುವ ಅವಕಾಶವಿದ್ದು ದ್ರವತೆಗೆ ಹೆಚ್ಚಿನ ಅವಕಾಶವಿರುತ್ತದೆ.

2. ಅಂತ್ಯ ಸಹಿತ ಯೋಜನೆ Closed Ended Scheme :

ಈ ಯೋಜನೆಯು ನಿರ್ದಿಷ್ಟ ಅವಧಿಗೆ ಸೀಮಿತವಾಗಿದ್ದು, ಆ ಅವಧಿ ಮುಗಿದ ನಂತರ ಯೋಜನೆಯು ಮುಕ್ತಾಯಗೊಳ್ಳುತ್ತದೆ. ಮುಕ್ತಾಯದ ಹಂತದಲ್ಲಿ ಯೋಜನೆಯನ್ನು ಪರಿಸಮಾಪ್ತಿಗೊಳಿಸಿ ಹೂಡಿಕೆಯ ಫಾಯಿದೆಯನ್ನು ಹೂಡಿಕೆದಾರರ ಹೂಡಿಕೆಯ ಪ್ರಮಾಣಕ್ಕೆ ಅನುಸಾರವಾಗಿ ಹಂಚಲಾಗುತ್ತದೆ.

ಮ್ಯೂಚುಯಲ್ ಫಂಡ್‌ಗಳಲ್ಲಿ ಹಲವು ಬಗೆಯ ಫಂಡ್‌ಗಳು ಇದ್ದು ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ:

ಈಕ್ವಿಟಿ ಫಂಡ್	- Equity Fund
ಕ್ಷೇತ್ರವಾರು ಫಂಡ್	- Sector Fund
ಸಮತೋಲನ ಫಂಡ್	- Balanced Fund
ತೆರಿಗೆ ಉಳಿತಾಯದ ಫಂಡ್	- Tax Saving Fund

ಷೇರು ಪೇಟೆಯಲ್ಲಿ ನೇರವಾಗಿ ಪ್ರವೇಶ ಮಾಡಲು ಹಿಂಜರಿಯುವವರು. ಷೇರುಪೇಟೆ ಬಗ್ಗೆ ಸರಿಯಾದ ಮಾಹಿತಿ / ತಿಳಿವಳಿಕೆ ಪಡೆದಿಲ್ಲದವರು ಮ್ಯೂಚುಯಲ್ ಫಂಡ್‌ಗಳಲ್ಲಿ ಹಣವನ್ನು ಹೂಡಬಹುದು.

ಷೇರುಗಳಿಂದ ದೊರಕುವ ಲಾಭಾಂಶಕ್ಕೆ ಹೇಗೆ ಆದಾಯ ತೆರಿಗೆಯಿಂದ ವಿನಾಯಿತಿ ಇದೆಯೋ ಅದೇ ರೀತಿ ಮ್ಯೂಚಯಲ್ ಫಂಡ್‌ನಿಂದ ದೊರಕುವ ಲಾಭಾಂಶಕ್ಕೂ ಆದಾಯ ತೆರಿಗೆ ವಿನಾಯಿತಿ ಇದೆ.

ಮ್ಯೂಚುಯಲ್ ಫಂಡ್‌ನಲ್ಲಿ ಹಣ ಹೂಡುವಾಗ ಹೂಡಿಕೆದಾರರು ಆ ಸಂಸ್ಥೆಯ ಹಿಂದಿನ ವರ್ಷಗಳ ಸಾಧನೆಯನ್ನು ಗಮನಿಸಬೇಕು. ಅದರ ಸಾಧನೆ ಉತ್ತಮವಾಗಿದ್ದು ಒಳ್ಳೆಯ ಲಾಭ ಗಳಿಸಿ ಹೂಡಿಕೆದಾರರಿಗೆ ಸೂಕ್ತ ಲಾಭಾಂಶ ನೀಡಿದೆಯೇ ಎಂಬುದನ್ನು ಗಮನಿಸಬೇಕು.

ಎಲ್ಲ ಹೂಡಿಕೆಯನ್ನೂ ಮ್ಯೂಚುಯಲ್ ಫಂಡ್‌ನಲ್ಲಿ ಮಾಡಬಾರದು. ಹಾಗೆಯೇ ಒಂದೇ ಮ್ಯೂಚಯಲ್ ಫಂಡ್ ಕ್ಷೇತ್ರದಲ್ಲಿಯೂ ಮಾಡಬಾರದು. ಅಲ್ಲದೆ ಸಾಕಷ್ಟು ವಿವರಗಳನ್ನು ಪಡೆದು ತಜ್ಞರಿಂದ ಸಲಹೆಗಳನ್ನು ಪಡೆದುಕೊಳ್ಳುವುದೂ ಅಗತ್ಯ.

ಹೂಡಿಕೆಗೆ ಅವಕಾಶ ಹಲವು-ಆಯ್ಕೆ ಹೂಡಿಕೆದಾರರದು



ನಿವೃತ್ತಿಯ ನಂತರ ವೃದ್ಧಾಪ್ಯದಲ್ಲಿ ಸ್ವಾಭಿಮಾನಿ - ಸ್ವಾವಲಂಬನೆಯ ಜೀವನ ನಡೆಸಬೇಕಾದರೆ ತಾವು ಪಡೆದ ಸೇವಾಂತ್ಯ ಸೌಲಭ್ಯದ ಹಣದ ಇಡುಗಂಟನ್ನು ತನ್ನ ಜೀವನಾಂತ್ಯದವರೆಗೂ ಸುರಕ್ಷಿತವಾಗಿ, ಜತನವಾಗಿ ಕಾಪಾಡಿಕೊಂಡು, ಮತ್ತೊಬ್ಬರಿಗೆ ಹೊರೆಯಾಗದಂತೆ ಬಾಳಬೇಕೆಂಬುದು ಪ್ರತಿಯೊಬ್ಬರೂ ತಿಳಿಯಬೇಕಾದ್ದು ಅತಿ ಮುಖ್ಯ.

ಈ ದಿಶೆಯಲ್ಲಿ ಹಣವನ್ನು ಹೂಡುವಾಗ ಭದ್ರತೆ, ಪ್ರತಿಫಲದ ಕಡೆಗೆ ಗಮನಹರಿಸಬೇಕಾದ್ದು ಅತಿ ಮುಖ್ಯ. ಇದುವರೆಗೆ ಹೂಡಿಕೆಯ ಹಲವಾರು ಅವಕಾಶಗಳ ಬಗ್ಗೆ ವಿವರವಾಗಿ ತಿಳಿ ಹೇಳಲು ಪ್ರಯತ್ನಿಸಲಾಗಿದೆ. ಈಗ ಪ್ರತಿಯೊಂದು ಹೂಡಿಕೆಯಲ್ಲಿಯೂ ಇರುವ ಗುಣಾತ್ಮಕ ಮತ್ತು ನಕಾರಾತ್ಮಕ ಅಂಶಗಳ ಬಗ್ಗೆ ಕೆಳಗಿನ ತುಲನಾತ್ಮಕ ಪಟ್ಟಿಯಲ್ಲಿ ಪರಿಶೀಲಿಸೋಣ.

ಹೂಡಿಕೆಯ ವಿವರ	ಸುರಕ್ಷತೆ	ಪ್ರತಿಫಲ / ಬಡ್ಡಿ	ದ್ರವತೆ
ಅಂಚೆ ಕಛೇರಿ ಮಾಸಿಕ ವರಮಾನ ಯೋಜನೆ, ಹಿರಿಯ ನಾಗರಿಕರ ಉಳಿತಾಯ ಯೋಜನೆ	ಅಧಿಕ	ಸಾಧಾರಣ	ಸಾಧಾರಣ
ಬ್ಯಾಂಕ್ ಠೇವಣಿ	ಅಧಿಕ	ಸಾಧಾರಣ	ಅಧಿಕ
ಚಿನ್ನ ಬೆಳ್ಳಿ ಇತ್ಯಾದಿ	ಅಧಿಕ	ಕಡಿಮೆ	ಅಧಿಕ
ಷೇರುಗಳು	ಕಡಿಮೆ	ಅಧಿಕ	ಅಧಿಕ
ಮ್ಯೂಚುಯಲ್ ಫಂಡ್	ಸಾಧಾರಣ	ಸಾಧಾರಣ	ಅಧಿಕ
ನಿವೇಶನ	ಅಧಿಕ	ಕಡಿಮೆ	ಕಡಿಮೆ

ಇದುವರೆಗೆ ತಿಳಿಸಲ್ಪಟ್ಟ ವಿವರಗಳನ್ನು ತಿಳಿದ ನಂತರ ಹೂಡಿಕೆದಾರನು ಹೊಂದಿರುವ ಒಟ್ಟು ಹಣ, ಆತನ ಅಗತ್ಯತೆಗಳು, ರಿಸ್ಕ್ ತೆಗೆದುಕೊಳ್ಳುವ ಸಾಮರ್ಥ್ಯ ಇತ್ಯಾದಿಗಳ ಮೇಲೆ ಅವಲಂಬಿತವಾಗಿರುತ್ತದೆ ಎಂದು ಹೇಳಬಹುದು. ಅದಕ್ಕನುಸಾರವಾಗಿ ಆತನು ಹೂಡುವಿಕೆಯನ್ನು ಎಲ್ಲಿ ಹೂಡಬೇಕು, ಯಾವ ಪ್ರಮಾಣದಲ್ಲಿ ಹೂಡಬೇಕು ಎಂಬುದನ್ನು ನಿರ್ಧರಿಸಬಹುದು.

ಮೇಲೆ ತಿಳಿಸಿರುವ ಎಲ್ಲ ವಿಚಾರಗಳೂ ಅಂಕಿ ಅಂಶಗಳೂ ಹೂಡಿಕೆದಾರನಿಗೆ ಒಂದು ದಿಕ್ಸೂಚಿಯೇ ಹೊರತು ಹೀಗೇ ಮಾಡಬೇಕು – ಇಷ್ಟೇ ಮಾಡಬೇಕು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಬಡ್ಡಿಯ ದರವೂ ಅಷ್ಟೇ. ಪ್ರಸ್ತುತ ಸಂದರ್ಭದಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳು ಹಾಗೂ ನೀಡುವ ಬಡ್ಡಿಯ ದರವನ್ನು ವಿವರಿಸಲಾಗಿದೆ. ಕಾಲಕಾಲಕ್ಕೆ ಇವೆಲ್ಲವೂ ಬದಲಾವಣೆಗಳಿಗೆ ಒಳಗಾಗಬಹುದು. ಹೊಸ ಹೊಸ ಯೋಜನೆಗಳು ರೂಪುಗೊಳ್ಳಬಹುದು. ಬಡ್ಡಿಯ ದರದಲ್ಲಿ ವ್ಯತ್ಯಾಸವಾಗಬಹುದು. ಹಾಗಾಗಿ ಹಣವನ್ನು ಹೂಡುವಾಗ ಹೂಡಿಕೆದಾರರು ಆಯಾ ಸಂದರ್ಭಕ್ಕನುಗುಣವಾಗಿ ಪರಿಣಿತ ಆರ್ಥಿಕ ತಜ್ಞರಿಂದ, ಸಲಹೆಗಾರರಿಂದ ನೆರವನ್ನೂ ಸೂಕ್ತ ಸಲಹೆಯನ್ನೂ ಪಡೆದು ತಮ್ಮ ಹಣವನ್ನು ಹೂಡಿಕೆಯಲ್ಲಿ ತೊಡಗಿಸಬೇಕು.

ಹೂಡಿಕೆಯ ಹಣದ ನಿರ್ವಹಣೆ

ವಿಚಕ್ಷಣೆ, ವಿವೇಚನೆಗಳಿಂದ ಹೂಡಿಕೆ ಮಾಡಿದ ನಂತರ ಗಮನ ಕೊಡಬೇಕಾದ ಅಂಶವೆಂದರೆ ಹೂಡಿದ ಹಣದ ನಿರ್ವಹಣೆ.

ಹಣ ಹೂಡುವಿಕೆಯಲ್ಲಿ ತೆಗೆದುಕೊಂಡಷ್ಟೇ ಆಸಕ್ತಿಯನ್ನು, ನೀಡಿದ ಗಮನವನ್ನೂ, ಹೂಡಿಕೆಯ ನಂತರವೂ ತೆಗೆದುಕೊಳ್ಳಬೇಕಾದ್ದು ಅತ್ಯಗತ್ಯ. ಪ್ರತಿ ತಿಂಗಳೂ ಸಂದಾಯವಾಗಬೇಕಾದ ಬಡ್ಡಿ ಪಾವತಿಯಾಗಿದೆಯೇ, ಠೇವಣಿಯ ಅವಧಿ ಪೂರೈಸುವ ದಿನಾಂಕ ಯಾವುದು, ಅದನ್ನು ನವೀಕರಿಸುವುದೋ ಅಥವಾ ಹಿಂದಕ್ಕೆ ಪಡೆಯುವುದೋ ಎಂಬುದರ ಬಗ್ಗೆ ಗಮನ ಹರಿಸಬೇಕು.

ವಯಸ್ಸಾದಂತೆ ಮರೆಗುಳಿತನ ಜಾಸ್ತಿಯಾಗುವುದರಿಂದ ಈ ಮೇಲಿನ ಎಲ್ಲ ಅಂಶಗಳನ್ನು ಒಂದು ಕಡೆ ದಾಖಲು ಮಾಡುವುದು ಸೂಕ್ತ. ಅದಕ್ಕಾಗಿ ದಾಖಲೆ ಪುಸ್ತಕವೊಂದರಲ್ಲಿ ಬರೆದಿಡುವುದು ಸಮಂಜಸವೆನಿಸುತ್ತದೆ.

ದಾಖಲೆ ಪುಸ್ತಕದಲ್ಲಿ ಏನೇನು ಬರೆದಿಡಬಹುದು?

ದಾಖಲೆ ಪುಸ್ತಕದಲ್ಲಿ ಈ ಕೆಳಗಿನ ಪ್ರಮುಖ ವಿಷಯಗಳನ್ನು ಬರೆದಿಡಬಹುದು :-



ವಿಮಾಪಾಲಿಸಿ ಹೊಂದಿದ್ದರೆ ಆ ವಿಮೆಯ ಪಾಲಿಸಿಯ ಸಂಖ್ಯೆ, ಮುಕ್ತಾಯವಾಗುವ ದಿನ, ಪಾಲಿಸಿಯ ಮೊತ್ತ, ನಾಮನಿರ್ದೇಶಿತ ವ್ಯಕ್ತಿಯ ಹೆಸರು ಇತ್ಯಾದಿ.

ಹೂಡಿರುವ ಠೇವಣಿಗಳು – ಯಾವ ಯಾವ ಸಂಸ್ಥೆಗಳಲ್ಲಿ ಠೇವಣಿ ಮಾಡಿದೆ, ಠೇವಣಿಯ ಮೊತ್ತ, ಬಡ್ಡಿಯ ದರ, ಮುಕ್ತಾಯದ ದಿನಾಂಕ, ನಾಮ ನಿರ್ದೇಶಿತ ವ್ಯಕ್ತಿಯ ಹೆಸರು, ಜಂಟೀ ಠೇವಣಿದಾರರಾಗಿ ಇದ್ದರೆ ಅವರ ಹೆಸರು ಇತ್ಯಾದಿ.

ಬ್ಯಾಂಕ್ ಲಾಕರ್ ಹೊಂದಿದ್ದರೆ ಅದರ ವಿವರಗಳು

ಷೇರುಗಳು, ಮ್ಯೂಚುಯಲ್ ಫಂಡ್‌ಗಳಲ್ಲಿ ಹಣ ಹೂಡಿದ್ದರೆ, ಅದರ ವಿವರಗಳು (ಡಿಮ್ಯಾಟ್ ಸೇವಾ ಸಂಸ್ಥೆಯವರು ಕಾಲಕಾಲಕ್ಕೆ ಕಳುಹಿಸುವ ವಿವರಣಾ ಪತ್ರವೇ ಒಂದು ದಾಖಲೆಯಾಗಿರುತ್ತದೆ) ಡಿ ಮ್ಯಾಟ್ ಖಾತೆಗೆ ನಾಮ ನಿರ್ದೇಶಿತ ವ್ಯಕ್ತಿಯ ಹೆಸರು ಮುಂತಾದುವು.

ಇವಿಷ್ಟೇ ಅಲ್ಲದೆ ತನಗೆ ಸೂಕ್ತವೆನಿಸಿದ, ಅರ್ಹವೆನಿಸಿದ ಯಾವುದೇ ಅಂಶವನ್ನಾದರೂ ಬರೆದಿಡಬಹುದು. ಒಟ್ಟಿನಲ್ಲಿ ಈ ಎಲ್ಲ ದಾಖಲೆಯ ಉದ್ದೇಶ – ತನ್ನ ಹೂಡಿಕೆಯ ಎಲ್ಲ ವಿವರಗಳೂ ಒಂದೇ ಕಡೆ ಲಭ್ಯವಿರುವುದು ಹಾಗೂ ತಕ್ಷಣದಲ್ಲಿ ಒಂದೇ ನೋಟಕ್ಕೆ (at a glance) ಬೇಕಾದ ಮಾಹಿತಿ ಸಿಗುವಂತಿರುವುದು.

ಆದಾಯ ತೆರಿಗೆ



ಹಣ ಸಂಪಾದನೆಯ ಬಗ್ಗೆ ಯೋಚನೆ ಒಂದಾದರೆ ಹಣ ಗಳಿಸಿದ ನಂತರ ಆದಾಯ ತೆರಿಗೆ ಪಾವತಿಯ ಬಗೆಗಿನ ಸಮಸ್ಯೆ ಆರಂಭವಾಗುತ್ತದೆ. ಇಲ್ಲಿ ಒಂದು ಪ್ರಶ್ನೆ ಅಥವಾ ಅನುಮಾನ ಪ್ರತಿಯೊಬ್ಬರಲ್ಲಿಯೂ ಸಾಮಾನ್ಯವಾಗಿ ಉದ್ಭವಿಸುತ್ತದೆ. ಅದೆಂದರೆ ವಾರ್ಷಿಕ ವರಮಾನದ ಪೂರಾ ಹಣದ ಮೇಲೆ ತೆರಿಗೆಯನ್ನು ಕೊಡಬೇಕೇ? ಎಂಬುದು. ಕೂಲಂಕುಷವಾಗಿ ಪರಿಶೀಲಿಸಿದರೆ ಸಂಪಾದಿಸುವ ಸಂಪೂರ್ಣ ವರಮಾನದ ಹಣಕ್ಕೆ ತೆರಿಗೆಯನ್ನು ನೀಡಬೇಕೆಂದು ಸರ್ಕಾರವು ನಿರೀಕ್ಷಿಸುವುದಿಲ್ಲ. ವರಮಾನದ ಗಳಿಕೆಯು ಒಂದು ಪರಿಮಿತಿಯನ್ನು ದಾಟಿದಾಗ ಮಾತ್ರ ತೆರಿಗೆಯನ್ನು ಕಟ್ಟಬೇಕಾಗುತ್ತದೆ. ಹಾಗೆ ಕಟ್ಟುವ ವರಮಾನ ತೆರಿಗೆಯ ಉಳಿತಾಯಕ್ಕೂ ಸಹ ಸರ್ಕಾರವೇ ಹಲವಾರು ಯೋಜನೆಗಳನ್ನು ರೂಪಿಸಿದೆ. ಈ ಯೋಜನೆಗಳನ್ನು ಹಾಗೂ ಲಭ್ಯವಿರುವ ಇತರೇ ಅವಕಾಶಗಳನ್ನು ವ್ಯವಸ್ಥಿತ ಕ್ರಮದಲ್ಲಿ ಬಳಸಿಕೊಂಡರೆ ನ್ಯಾಯಯುತವಾಗಿ, ಕಾನೂನುಬದ್ಧವಾಗಿ ತೆರಿಗೆ ಹೊಣೆಯನ್ನು ಕಡಿಮೆ ಮಾಡಿಕೊಳ್ಳಬಹುದು. ಹೀಗೆ ವ್ಯವಸ್ಥಿತ ಕ್ರಮದಲ್ಲಿ ಟ್ಯಾಕ್ಸ್ ಪ್ಲಾನಿಂಗ್ ಅಂದರೆ ತೆರಿಗೆ ಉಳಿತಾಯ ಯೋಜನೆಯನ್ನು ರೂಪಿಸಿ ಕೊಂಡಾಗ ತೆರಿಗೆಯ ಹೊರೆಯನ್ನು ಕಡಿಮೆ ಮಾಡಿಕೊಳ್ಳಬಹುದು.

ತೆರಿಗೆಗೆ ಒಳಗಾಗುವ ಆದಾಯದ ಮೂಲ

ಸಂಬಳದಿಂದ ಅಥವ ನಿವೃತ್ತಿ ವೇತನದಿಂದ ಬರಬಹುದಾದ ಆದಾಯ

ಠೇವಣಿಗಳ ಮೇಲೆ ಸಂದಾಯವಾದ ಬಡ್ಡಿಯ ಆದಾಯ

ಮನೆ ಬಾಡಿಗೆಯಿಂದ ಬರಬಹುದಾದ ಆದಾಯ

ಹೂಡಿಕೆಯನ್ನು ಮಾರಾಟ ಮಾಡಿದಾಗ ಗಳಿಸಬಹುದಾದ ಬಂಡವಾಳದ ಮೇಲಿನ ಲಾಭ – ಇತ್ಯಾದಿ

2009-10 ರ ಆರ್ಥಿಕ ವರ್ಷಕ್ಕೆ ತೆರಿಗೆ ಪಾವತಿಸಬೇಕಾದ ತೆರಿಗೆಯ ವಿವರ

65 ವರ್ಷದ ಕೆಳಗಿನ ಪುರುಷರು		65 ವರ್ಷದ ಕೆಳಗಿನ ಮಹಿಳೆಯರು		ಹಿರಿಯ ನಾಗರಿಕರು	
ವರಮಾನ	ತೆರಿಗೆ ದರ	ವರಮಾನ	ತೆರಿಗೆ ದರ	ವರಮಾನ	ತೆರಿಗೆ ದರ
1,60,000 ರೂ.ಗಳವರೆಗೆ	–	1,90,000 ರೂ ಗಳವರೆಗೆ	–	2,40,000 ರೂ.ಗಳವರೆಗೆ	–
1,60,001 ರಿಂದ 3,00,000 ರೂ. ಗಳವರೆಗೆ	ಶೇ.10	1,90.001 ರಿಂದ 3,00,000ರೂ ಗಳವರೆಗೆ	ಶೇ.10	2,40,001 ರಿಂದ 3,00,000ರೂ ಗಳವರೆಗೆ	ಶೇ.10
3,00,001 ರಿಂದ 5,00,000 ರೂ. ಗಳವರೆಗೆ	ಶೇ.20	3,00,001 ರಿಂದ 5,00,000 ರೂ. ಗಳವರೆಗೆ	ಶೇ.20	3,00,001 ರಿಂದ 5,00,000 ರೂ. ಗಳವರೆಗೆ	ಶೇ.20
5,00,001 ರೂ.ಗಳ ಮೇಲ್ಪಟ್ಟು	ಶೇ.30	5,00,001 ರೂ.ಗಳ ಮೇಲ್ಪಟ್ಟು	ಶೇ.30	5,00,001 ರೂ. ಗಳ ಮೇಲ್ಪಟ್ಟು	ಶೇ.30

ಈ ಮೇಲಿನ ಪಟ್ಟಿಯಂತೆ ಪುರುಷರಿಗೆ 1,60,000 ರೂ.ಗಳವರೆಗೆ, ಮಹಿಳೆಯರಿಗೆ (65 ವರ್ಷಗಳ ಕೆಳಗಿನ) 1,90,000 ರೂ.ಗಳವರೆಗೆ ಮತ್ತು ಹಿರಿಯ ನಾಗರಿಕರಿಗೆ 2,40,000 ರೂ.ಗಳವರೆಗಿನ ಆದಾಯದ ಪರಿಮಿತಿಗಿಂತ ಹೆಚ್ಚಿನ ಆದಾಯವಿದ್ದರೆ ಮಾತ್ರ ತೆರಿಗೆಯನ್ನು ಕಟ್ಟಬೇಕಾಗುತ್ತದೆ. ಅಲ್ಲದೆ ತೆರಿಗೆಯ ಮೇಲೆ ಶೇಕಡ 3 ರಷ್ಟು ವಿದ್ಯಾಭ್ಯಾಸದ ತೆರಿಗೆಯನ್ನು ನೀಡಬೇಕಾಗುತ್ತದೆ. ಅಂದರೆ ಈ ಪರಿಮಿತಿಗಿಂತ ಜಾಸ್ತಿ ಬಂದ ಆದಾಯಕ್ಕೆಲ್ಲಾ ತೆರಿಗೆಯನ್ನು ಕಟ್ಟಬೇಕೇ? ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಆದರೆ ವರಮಾನ ತೆರಿಗೆ ಕಾಯಿದೆಯಡಿಯಲ್ಲಿ ಸರಕಾರವೇ ನೀಡಿರುವ ಹಲವಾರು ವಿನಾಯಿತಿಯ ಅವಕಾಶವನ್ನು ಉಪಯೋಗಿಸಿಕೊಂಡು ತೆರಿಗೆಯ ಹೊರೆಯನ್ನು ನ್ಯಾಯಬದ್ಧವಾಗಿ ಕಡಿಮೆ ಮಾಡಿಕೊಳ್ಳಬಹುದು.

ತೆರಿಗೆ ವಿನಾಯಿತಿಗಾಗಿ ಲಭ್ಯವಿರುವ ಹಲವಾರು ಅವಕಾಶಗಳು

1. ಕಾರ್ಮಿಕ ಭವಿಷ್ಯ ನಿಧಿಗೆ ವಂತಿಗೆ
2. ಸಾರ್ವಜನಿಕ ಭವಿಷ್ಯನಿಧಿಗೆ ವಂತಿಗೆ
3. ಜೀವವಿಮಾ ಪಾಲಿಸಿ ವಂತಿಗೆ
4. ರಾಷ್ಟ್ರೀಯ ಉಳಿತಾಯ ಪತ್ರದಲ್ಲಿ ಹೂಡಿಕೆ
5. 5 ವರ್ಷಗಳ ಅಂಚೆ ಕಛೇರಿಯ ನಿಗದಿತ ಠೇವಣಿ
6. ಷೆಡ್ಯೂಲ್ ಬ್ಯಾಂಕಿನಲ್ಲಿ (ಐದು ವರ್ಷದ ಅವಧಿಗೆ) ಠೇವಣಿ
7. ಶೇ 9 ರ ಹಿರಿಯ ನಾಗರಿಕರ ಉಳಿತಾಯ ಯೋಜನೆ
8. ಈಕ್ವಿಟಿ ಸಂಬಂಧಿತ ಉಳಿತಾಯ ಯೋಜನೆ
9. ಮಕ್ಕಳ ಬೋಧನಾ ಶುಲ್ಕ (ಇಬ್ಬರಿಗೆ ಮೀರದಂತೆ)
10. ಗೃಹ ನಿರ್ಮಾಣ ಸಾಲದ ಮರು ಪಾವತಿ

ಮೇಲೆ ತಿಳಿಸಿದ ಯೋಜನೆಗಳಲ್ಲಿ ಹಣವನ್ನು ಹೂಡುವುದರಿಂದ ಹೂಡಿದ ಹಣದ ಮೇಲೆ ತೆರಿಗೆ ವಿನಾಯಿತಿ ದೊರೆಯುತ್ತದೆ. ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶವೆಂದರೆ ಯಾವುದೇ ಒಂದು ಯೋಜನೆಯಲ್ಲಾಗಲೀ ಅಥವಾ ಎಲ್ಲಾ ಯೋಜನೆಯಲ್ಲಾಗಲೀ ಹೂಡುವ ಗರಿಷ್ಠ ಮೊತ್ತ ಒಂದು ಲಕ್ಷ ರೂಪಾಯಿಗಳವರೆಗೆ ಮಾತ್ರ ವಿನಾಯಿತಿ ಸಿಗುತ್ತದೆ.

ವಿ.ಸೂ : ಈ ಅಧ್ಯಾಯದಲ್ಲಿ ವಿವರಿಸಿರುವ ತೆರಿಗೆಯ ದರ, ಹಾಗೂ ಉಳಿತಾಯ ಯೋಜನೆಗಳು ಕಾಲಕಾಲಕ್ಕೆ ಬದಲಾವಣೆ ಆಗುವ ಸಂಭವವಿರುತ್ತದೆ. ಪ್ರತಿ ವರ್ಷದ ಬಜೆಟ್ ಮಂಡನೆಯಾದಾಗಲೂ ತೆರಿಗೆದಾರರಿಗೆ ರಿಯಾಯಿತಿ ನೀಡುವ ಹಲವಾರು ಯೋಜನೆಗಳು ಪ್ರಕಟವಾಗುತ್ತಿರುತ್ತವೆ. ಹಾಗಾಗಿ ಇಲ್ಲಿ ನೀಡಿರುವ ಮಾಹಿತಿ ಕೇವಲ ತಿಳಿವಳಿಕೆಗಾಗಿ ಮಾತ್ರ. ಆದಾಯ ತೆರಿಗೆಯನ್ನು ನಿರ್ಧರಿಸುವಾಗ, ರಿಟರ್ನ್ ಸಲ್ಲಿಸುವಾಗ, ಸೂಕ್ತ ಸಲಹೆಗಾರರನ್ನು ಸಂಪರ್ಕಿಸಿ ಮಾರ್ಗದರ್ಶನ ಪಡೆದುಕೊಳ್ಳಬೇಕು.

ಹಿರಿಯ ನಾಗರಿಕರು – ಸವಲತ್ತುಗಳು



ಮೊದಲಿಗೆ ಹಿರಿಯ ನಾಗರಿಕರು ಎಂದರೆ ಯಾರು? ಈ ಪ್ರಶ್ನೆಗೆ ಉತ್ತರಿಸುವುದು ಅಥವಾ ವ್ಯಾಖ್ಯಾನಿಸುವುದು ಅಷ್ಟು ಸುಲಭವಲ್ಲ. ಇದಕ್ಕೆ ಕಾರಣ – ಸರ್ಕಾರವಾಗಲೀ ಅಥವಾ ಇತರೆ ಸಂಸ್ಥೆಗಳಾಗಲಿ ಅನುಸರಿಸುತ್ತಿರುವ ಮಾನದಂಡ ಅಥವ ಅಳತೆಗೋಲು.

ಕೆಲವೆಡೆ ಹಿರಿಯ ನಾಗರಿಕರಿಗೆ ಅರವತ್ತು ವರ್ಷವೆಂದು ನಿಗದಿ ಪಡಿಸಿದ್ದರೆ, ಕೆಲವು ಸರ್ಕಾರದ ಇಲಾಖೆಗಳು 65 ವರ್ಷವೆಂದು ನಿಗದಿ ಪಡಿಸಿವೆ. ಹೀಗಾಗಿ ಹಿರಿಯ ಪ್ರಜೆಗಳೆಂಬುದು ಯಾವ ವಯಸ್ಸಿನವರಿಗೆ ಅನ್ವಯವಾಗುತ್ತದೆಂಬ ಗೊಂದಲ ಅನೇಕರಲ್ಲಿ ಮೂಡಿಬರುತ್ತದೆ.

ಪ್ರಸ್ತುತದಲ್ಲಿ ಅರವತ್ತು ವರ್ಷ ಹಾಗೂ ಅರವತ್ತೈದು ವರ್ಷ ದಾಟಿದವರಿಗೆ ಏನೇನು ಸವಲತ್ತುಗಳು ಸಿಗುವುದೆಂಬುದನ್ನು ಪರಿಶೀಲಿಸೋಣ :

1. **ಅರವತ್ತು ವರ್ಷ ದಾಟಿದವರು :**

ಶೇ. 9ರ ಹಿರಿಯ ನಾಗರಿಕರ ಉಳಿತಾಯ ಯೋಜನೆ – 2004 ರಲ್ಲಿ ಠೇವಣಿ ಮಾಡಬಹುದು.

ಗೃಹ ವಾಪಸ್ ಅಡಮಾನ ಯೋಜನೆಯ ಸೌಲಭ್ಯವನ್ನು ಪಡೆಯಬಹುದು.

ಬ್ಯಾಂಕ್‌ನಲ್ಲಿ ಠೇವಣಿ ಮಾಡಿದಾಗ ಬೇರೆ ಠೇವಣಿದಾರರಿಗಿಂತ ಶೇಕಡ 0.5 ರಿಂದ ಶೇ 1.00 ರವರೆಗೆ ಹೆಚ್ಚಿನ ಬಡ್ಡಿ.

ರೈಲ್ವೇ ಪ್ರಯಾಣದಲ್ಲಿ ರಿಯಾಯಿತಿ :

ಪುರುಷರಿಗೆ : ಶೇಕಡ 30 ಮಹಿಳೆಯರಿಗೆ ಶೇಕಡ 50

2. **ಅರವತ್ತೈದು ವರ್ಷ ದಾಟಿದವರಿಗೆ :**

ಆದಾಯ ತೆರಿಗೆ ವಿನಾಯಿತಿ 2,40,000 ರೂ.ಗಳವರೆಗೆ

ಕರ್ನಾಟಕ ರಾಜ್ಯ ಸಾರಿಗೆ ನಿಗಮದ ವಾಹನದಲ್ಲಿ ಪ್ರಯಾಣ ಮಾಡಿದಾಗ ಶೇಕಡ 25 ರಷ್ಟು ರಿಯಾಯಿತಿ.

ಬೆಂಗಳೂರು ನಗರ ಸಾರಿಗೆಯಲ್ಲಿ ಪ್ರಯಾಣ ಮಾಡುವಾಗ ಶೇಕಡ 25 ರ ರಿಯಾಯಿತಿ ಮಾಸಿಕ ಬಸ್ ಪಾಸ್‌ನ್ನು ಪಡೆಯುವಾಗ ಶೇಕಡ 10 ರಷ್ಟು ರಿಯಾಯಿತಿ.

ಹಿರಿಯ ನಾಗರಿಕರ ಗುರುತಿನ ಚೀಟಿ

ಹಿರಿಯ ನಾಗರಿಕರಿಗೆ ಗುರುತಿನ ಚೀಟಿಯನ್ನು ನೀಡಲು ಸರ್ಕಾರವು ಒಂದು ಕಾರ್ಯ ಯೋಜನೆಯನ್ನು ರೂಪಿಸಿದೆ. ಈ ಗುರುತಿನ ಚೀಟಿಯಲ್ಲಿ ಆತನ ಭಾವಚಿತ್ರ, ಹೆಸರು, ಸಂಪೂರ್ಣ ವಿಳಾಸ, ಹಾಗೂ ತುರ್ತು ಪರಿಸ್ಥಿತಿಯಲ್ಲಿ ಸಂಪರ್ಕಿಸಬಹುದಾದ ಮನೆಯವರ ದೂರವಾಣಿ ಸಂಖ್ಯೆ ಅಲ್ಲದೆ ರಕ್ತದ ಗುಂಪುಗಳನ್ನು ನಮೂದಿಸಲಾಗಿರುತ್ತದೆ. ಅಷ್ಟೇ ಅಲ್ಲ, ಹುಟ್ಟಿದ ದಿನಾಂಕವನ್ನು ಸಹ ದಾಖಲಿಸಲಾಗಿರುತ್ತದೆ. ಹಾಗಾಗಿ ಈ ಗುರುತಿನ ಚೀಟಿಯನ್ನು ಪ್ರಯಾಣ ಮಾಡುವಾಗ ವಯಸ್ಸನ್ನು ಸಮರ್ಥಿಸಲು, ರಿಯಾಯಿತಿ ಸೌಲಭ್ಯವನ್ನು ಪಡೆಯಲು ಉಪಯೋಗಿಸಬಹುದು.

ಈ ಗುರುತಿನ ಚೀಟಿಯನ್ನು ನೀಡಲು ಸರ್ಕಾರ ಕೆಲವೊಂದು ಸ್ವಯಂ ಸೇವಾ ಸಂಘಗಳನ್ನು ಮಾನ್ಯ ಮಾಡಿದೆ. ಅಂತಹ ಸಂಘಗಳನ್ನು ಸಂಪರ್ಕಿಸಿ ಈ ಗುರುತಿನ ಚೀಟಿಯನ್ನು ಪಡೆದುಕೊಳ್ಳಬಹುದು.

ನಾಮ ನಿರ್ದೇಶನ



ಠೇವಣಿ ಮಾಡಿದ ನಂತರ ಅದರ ಮೂಲಕ ಬರುವ ಪ್ರತಿಫಲವನ್ನು ಜೀವನಪೂರ್ತಿ ಅನುಭವಿಸಲು ಎಷ್ಟರಮಟ್ಟಿಗಿನ ಎಚ್ಚರಿಕೆಯನ್ನು ತೆಗೆದುಕೊಳ್ಳಬಹುದೋ ಅಷ್ಟೇ ಮಟ್ಟಿಗಿನ ಎಚ್ಚರಿಕೆಯನ್ನು ತಮ್ಮ ನಿಧನಾನಂತರ ಆ ಠೇವಣಿಯ ಮೊಬಲಗು ಯಾವುದೇ ಕಾನೂನಿನ ತೊಡಕುಗಳು ಇಲ್ಲದಂತೆ ತಮ್ಮ ವಾರಸುದಾರರಿಗೆ ಹಸ್ತಾಂತರವಾಗುವಂತೆ ಸೂಕ್ತವಾದ ಮುನ್ನೇರ್ಪಾಡುಗಳನ್ನು ಮಾಡುವದೂ ಸಹ ಅತಿ ಮುಖ್ಯವಾದುದು. ಅಂತಹ ಕ್ರಮವೆಂದರೆ ಮಾಡಬಹುದಾದ ಅಥವಾ ಈಗಾಗಲೇ ಹೊಂದಿರಬಹುದಾದ ಎಲ್ಲಾ ಠೇವಣಿಗಳಿಗೂ ನಾಮನಿರ್ದೇಶನವನ್ನು ಮಾಡುವುದು.

ಬ್ಯಾಂಕುಗಳು, ಅಂಚೆಕಛೇರಿಗಳು, ಹಾಗೂ ಇನ್ನಿತರ ಕಡೆ ಮಾಡಿರುವ ಠೇವಣಿಗಳು ಜೀವವಿಮಾ ಪಾಲಿಸಿ, ರಾಷ್ಟ್ರೀಯ ಉಳಿತಾಯ ಪತ್ರ, ಸಾರ್ವಜನಿಕ ಭವಿಷ್ಯ ನಿಧಿ ಮುಂತಾದುವುಗಳು ಅಲ್ಲದೆ ಕಂಪನಿಗಳಲ್ಲಿ ಹೊಂದಿರಬಹುದಾದ ಷೇರುಗಳು, ಡಿಮ್ಯಾಟ್ ಖಾತೆ ಬ್ಯಾಂಕ್ ಲಾಕರ್‌ಗಳು ಮುಂತಾದ ಎಲ್ಲಾ ಹಣಕಾಸಿನ ವ್ಯವಹಾರಗಳಲ್ಲಿಯೂ ನಾಮನಿರ್ದೇಶನವನ್ನು ಅಗತ್ಯವಾಗಿ ಮಾಡಬೇಕು.

ಬ್ಯಾಂಕುಗಳಲ್ಲಿ ಖಾತೆಗಳನ್ನು ತೆಗೆಯುವಾಗ ಜಂಟೀ ಹೆಸರಿನಲ್ಲಿ – ಇಬ್ಬರಲ್ಲಿ ಯಾರಾದರೊಬ್ಬರು ಅಥವಾ ಉಳಿದವರು– E/S – ತೆರೆಯುವುದು ಒಳ್ಳೆಯದು. ಈ ಪದ್ಧತಿಯಲ್ಲಿ ಒಬ್ಬರ ಅನುಪಸ್ಥಿತಿಯಲ್ಲಿ – ಅಂದರೆ ಕಾಯಿಲೆ ಕಸಾಲೆ ಆದಾಗ ಅಥವಾ ಕಾರಣಾಂತರಗಳಿಂದ ಸಹಿ ಮಾಡಲು ಆಗದ ಸಂದರ್ಭದಲ್ಲಿ – ಮತ್ತೊಬ್ಬರು ಯಾವುದೇ ಅಡ್ಡಿ ಆತಂಕವಿಲ್ಲದೆ ವ್ಯವಹಾರ ನಡೆಸಬಹುದು. ದುರದೃಷ್ಟವಶಾತ್ ಇಬ್ಬರಲ್ಲಿ ಯಾರಾದರೊಬ್ಬರು ನಿಧನರಾದಾಗ ಮತ್ತೊಬ್ಬರು ಎಂದಿನಂತೆ ವ್ಯವಹಾರವನ್ನು ನಡೆಸಲು ಯಾವ ತೊಂದರೆಯೂ ಇರುವುದಿಲ್ಲ.

ಯಾರನ್ನು ನಾಮ ನಿರ್ದೇಶಿತರನ್ನಾಗಿ ಮಾಡಬಹುದು?

ಗಂಡ/ಹೆಂಡತಿ ಅಥವ ಮಕ್ಕಳು ಇವರಲ್ಲಿ ಯಾರನ್ನಾದರು ಅಥವ ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ತಮಗೆ ಸೂಕ್ತವೆನಿಸಿದ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡಬಹುದು. ನಾಮನಿರ್ದೇಶನ ಮಾಡುವಾಗ ಠೇವಣಿದಾರನಿಗೂ ಮತ್ತು ನಾಮ ನಿರ್ದೇಶಿತ ವ್ಯಕ್ತಿಗೂ ಇರುವ ಸಂಬಂಧ, ವಯಸ್ಸು ಮುಂತಾದ ವಿವರಗಳನ್ನು ಮಾಡಬೇಕಾಗುತ್ತದೆ.

ಅಪ್ರಾಪ್ತ ವಯಸ್ಕರನ್ನು ನಾಮನಿರ್ದೇಶನ ಮಾಡಿದಾಗ ವಯಸ್ಕನಾಗಿರುವ ಮತ್ತೊಬ್ಬ ವ್ಯಕ್ತಿಯನ್ನು ಪೋಷಕರನ್ನಾಗಿ ನೇಮಿಸಬೇಕಾಗುತ್ತದೆ.

ನಾಮನಿರ್ದೇಶನವಿಲ್ಲದಿದ್ದರೆ ಆಗುವ ಅನಾನುಕೂಲ

ನಾಮ ನಿರ್ದೇಶನ ಮಾಡದೆ ಠೇವಣಿದಾರನೊಬ್ಬ ನಿಧನರಾದರೆ, ಹಣ ಪಾವತಿ ಮಾಡಬೇಕಾದ ಸಂಸ್ಥೆಗಳು ತಾವು ಯಾರಿಗೆ ಸಂದಾಯ ಮಾಡಬೇಕು ಎಂಬ ಸಂದಿಗ್ಧತೆಗೆ ಒಳಗಾಗುತ್ತಾರೆ. ಒಬ್ಬರಿಗಿಂತ ಹೆಚ್ಚು ವಾರಸುದಾರರು ಹಕ್ಕನ್ನು ಮಂಡಿಸಿದಾಗ ಸಂಸ್ಥೆಗಳು ಅಂತಹವರನ್ನು ಉತ್ತರಾಧಿಕಾರದ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ಕೇಳಬಹುದು.

ಅಂತಹ ಸಂದರ್ಭದಲ್ಲಿ ವಾರಸುದಾರರು ನ್ಯಾಯಾಲಯದ ಮೂಲಕ ಅದನ್ನು ಪಡೆಯಬೇಕಾಗುತ್ತದೆ. ಅದಕ್ಕಾಗಿ ಸ್ಟಾಂಪ್ ಶುಲ್ಕ, ಲಾಯರ್ ಫೀಸ್, ಮುಂತಾದುವುಗಳಿಗೆ ಖರ್ಚು ಮಾಡಬೇಕಾಗುತ್ತದೆ. ಅಷ್ಟೇ ಅಲ್ಲ, ಅನಗತ್ಯ ಕಾಲ ಹರಣವುಂಟಾಗಿ ಪರದಾಡಬೇಕಾಗುತ್ತದೆ. ಈ ಎಲ್ಲ ಸಂಕಷ್ಟಗಳು ಬಾರದಂತೆ ಪ್ರತಿಯೊಬ್ಬ ಠೇವಣಿದಾರನೂ ತಾನು ಹೂಡುವ ಪ್ರತಿ ಠೇವಣಿಗೂ ತಪ್ಪದೆ ನಾಮನಿರ್ದೇಶನ ಮಾಡುವುದು ಒಳಿತು.

ನಾಮನಿರ್ದೇಶನವನ್ನು ಬದಲಾಯಿಸಬಹುದೆ?

ಒಂದು ಸಲ ನಾಮ ನಿರ್ದೇಶನ ಮಾಡಿದ ಮಾತ್ರಕ್ಕೇ ಅದು ಅಂತಿಮವಲ್ಲ. ತನ್ನ ಕುಟುಂಬದಲ್ಲಿ ಆಗಬಹುದಾದ ಬದಲಾವಣೆಗೆ ತಕ್ಕಂತೆ ಅಥವ ತನ್ನ ಇಷ್ಟದಂತೆ ನಾಮ ನಿರ್ದೇಶನವನ್ನು ಅಗತ್ಯವಿದ್ದಂತೆ ಬದಲಾಯಿಸಬಹುದು.

ನಾಮ ನಿರ್ದೇಶನ ಮಾಡಿದಾಕ್ಷಣ ಆ ಹಣದ ಸಂಪೂರ್ಣ ಸ್ವಾಮ್ಯ ನಾಮನಿರ್ದೇಶಿತ ವ್ಯಕ್ತಿಗೇ ಸಿಗಬೇಕೆಂದೇನಿಲ್ಲ. ವಾರಸುದಾರರಿಗೆ ಯಾವ ತೊಂದರೆಯೂ ಇಲ್ಲದಂತೆ, ವಿಳಂಬವಾಗದಂತೆ ಹಣ ಸಂದಾಯ ಮಾಡಲು ಸಂಸ್ಥೆಗಳಿಗೆ ನೀಡುವ ನಿರ್ದೇಶನ ಮಾತ್ರ. ಆ ರೀತಿ ಪಡೆದ ಹಣವನ್ನು ನಾಮ ನಿರ್ದೇಶಿತ ವ್ಯಕ್ತಿಯೊಬ್ಬನಿಗೇ ಅಲ್ಲದೆ ಅದರಲ್ಲಿನ ಪಾಲು ಬೇರೆಯವರಿಗೂ ನೀಡಬೇಕೆಂದಿದ್ದರೆ, ಅಂತಹ ವಿವರವನ್ನು ಪ್ರತ್ಯೇಕವಾಗಿ, ಉಯಿಲಿನಲ್ಲಿ ಬರೆದು ಅದರಲ್ಲಿ ಯಾರ್ಯಾರಿಗೆ ಹಣವು ಸಂದಾಯವಾಗಬೇಕು ಎಂಬುದನ್ನು ತಿಳಿಸಬಹುದು.

ಉಯಿಲು



ಉಯಿಲು ಎಂದರೇನು? ಭಾರತದ ಉತ್ತರಾಧಿಕಾರ ಅಧಿನಿಯಮ (Indian succession Act) 1925 ರ ಪ್ರಕಾರ ಒಬ್ಬನು ತಾನು ಸಂಪಾದಿಸಿದ ಆಸ್ತಿಯನ್ನು ತನ್ನ ಮರಣಾನಂತರ ಯಾರಿಗೆ ಹೋಗಬೇಕು ಎಂದು ಮನಸ್ಸು ಮಾಡಿ ಆ ನಿರ್ಧಾರವನ್ನು ಬರಹ ರೂಪದಲ್ಲಿ ಮಾಡಿಡುವ ದಾಖಲೆಗೆ ಉಯಿಲು ಎಂದು ಕರೆಯುತ್ತಾರೆ.

ಅಂದರೆ ಉಯಿಲು ಬರೆಯುವವನು ತಾನು ಉಯಿಲಿನಲ್ಲಿ ಬರೆಯಬೇಕಾದ ಆಸ್ತಿಯನ್ನು ಸ್ವಂತವಾಗಿ ಗಳಿಸಿರಬೇಕು. ಅದು ಬರಹ ರೂಪದಲ್ಲಿರಬೇಕು. ಅಲ್ಲದೆ ಅದು ಜಾರಿಗೆ ಬರುವುದು ಆತನ ಮರಣಾನಂತರ ಮಾತ್ರ.

ಉಯಿಲನ್ನು ಯಾರು ಬರೆಯಬಹುದು? Indian Majority Act ಪ್ರಕಾರ ಹದಿನೆಂಟು ವರ್ಷ ವಯಸ್ಸಾಗಿರುವ ಯಾವುದೇ ವ್ಯಕ್ತಿಯು ಉಯಿಲನ್ನು ಬರೆಯಬಹುದು. ಉಯಿಲನ್ನು ಬರೆಯುವ ವ್ಯಕ್ತಿಯು ಸ್ಥಿಮಿತ ಬುದ್ಧಿಯುಳ್ಳವನಾಗಿರಬೇಕು. ಬುದ್ಧಿ ಸರಿಯಿಲ್ಲದ ಅಥವ ಬುದ್ಧಿ ಸರಿಯಿದ್ದರೂ ಸಹ ಉಯಿಲು ಬರೆಯುವ ಸಮಯದಲ್ಲಿ ಮಾದಕ ವಸ್ತುಗಳ ಸೇವನೆಯಿಂದ ತನ್ನ ಮನಸ್ಸಿನ ಹತೋಟಿಯನ್ನು ಕಳೆದುಕೊಂಡಿರುವ ಸಂದರ್ಭದಲ್ಲಿ ಬರೆದ ಉಯಿಲಿಗೆ ಮಾನ್ಯತೆ ಇರುವುದಿಲ್ಲ.

ಉಯಿಲು ಬರೆಯಲು ತೆಗೆದುಕೊಳ್ಳಬೇಕಾದ ಕ್ರಮಗಳು

ಮೊದಲಿಗೆ ಉಯಿಲು ಬರೆಯಲು ಕಾನೂನು ತಜ್ಞರ ಸಹಾಯ ಪಡೆಯುವುದು ಒಳ್ಳೆಯದು.

ಉಯಿಲನ್ನು ಒಂದು ಪೂರಾ ಹಾಳೆಯಲ್ಲಿ ಉತ್ತಮ ಗುಣಮಟ್ಟದ ಕಾಗದದಲ್ಲಿ ಬರೆಯಬೇಕು.

ಉಯಿಲು ಯಾವಾಗಲೂ ಬರಹ ರೂಪದಲ್ಲಿಯೇ ಇರಬೇಕು. ಬಾಯಿಮಾತಿನ ಉಯಿಲಿಗೆ, ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಹೊರತುಪಡಿಸಿ, ಮಾನ್ಯತೆ ಇಲ್ಲ.

ಉಯಿಲಿನಲ್ಲಿ ಉಯಿಲು ಕರ್ತನ ಹೆಸರು, ವಿಳಾಸ ಸ್ಪಷ್ಟವಾಗಿ ಬರೆದಿರಬೇಕು.

ಯಾರ ಪರವಾಗಿ ಆಸ್ತಿಯನ್ನು ಬರೆಯಲಾಗಿದೆಯೋ ಅಂತಹವರ ವಿವರವನ್ನು ಸಂಪೂರ್ಣವಾಗಿ ನೀಡಬೇಕು.

ಉಯಿಲಿನಲ್ಲಿ ಬರೆದಿರುವ ಭಾಷೆ ಸರಳ, ಸ್ಪಷ್ಟ ಹಾಗೂ ನಿಖರತೆಯಿಂದ ಕೂಡಿರಬೇಕು. ಗೊಂದಲಗಳಿಗೆ, ದ್ವಂದ್ವಾರ್ಥಗಳಿಗೆ ಅವಕಾಶವಿರಬಾರದು.

ಯಾವುದೇ ತಪ್ಪು, ಚಿತ್ತು ಇರಬಾರದು, ಹೊಡೆದು ಹಾಕಿರಬಾರದು. ಅಂತಹ ಅನಿವಾರ್ಯತೆ ಬಂದಲ್ಲಿ ಅಂತಹ ಜಾಗದಲ್ಲಿ ಸಹಿ ಮಾಡಬೇಕು ಮತ್ತು ಕೊನೆಯ ಪುಟದಲ್ಲಿ ಎಷ್ಟು ತಿದ್ದುಪಡಿ ಮಾಡಲಾಗಿದೆ ಎಂದು ನಮೂದಿಸಬೇಕು.

ಉಯಿಲಿನ ಕೊನೆಯಲ್ಲಿ ಉಯಿಲುಕರ್ತನ ಸಹಿಯಿದ್ದು ನಂತರ ಕಡೆಯ ಪಕ್ಷ ಇಬ್ಬರು ಸಾಕ್ಷಿಗಳ ಸಹಿ ಇರಬೇಕು. ಸಾಕ್ಷಿಗಳ ಹೆಸರು, ಉದ್ಯೋಗ ಹಾಗೂ ವಿಳಾಸ ಸ್ಪಷ್ಟವಾಗಿರಬೇಕು.

ಉಯಿಲು ಬರೆಯುವಾಗ ಉಯಿಲು ಕರ್ತನು ಯಾವುದೇ ವ್ಯಕ್ತಿಯಿಂದ ಯಾವುದೇ ಅನಗತ್ಯ ಪ್ರಭಾವಕ್ಕೆ (undue influence) ಒಳಗಾಗಿರಬಾರದು.

ಒಂದು ಸಲ ಬರೆದ ಉಯಿಲನ್ನು ಬದಲಾಯಿಸಲು ಸಾಧ್ಯವೇ?

ಉಯಿಲನ್ನು ಬರೆದಿರುವ ಉಯಿಲುಕರ್ತನ ಸಂಸಾರದಲ್ಲಿ ಸಂಭವಿಸಬಹುದಾದ ಕೌಟುಂಬಿಕ ಬದಲಾವಣೆಗಳು, ಉಯಿಲುಕರ್ತನ ಮನಸ್ಸಿನಲ್ಲಿ ಬದಲಾಗಬಹುದಾದ ಮನೋಭಾವಗಳು ಮುಂತಾದ ಕಾರಣಗಳಿಂದ ಅಗತ್ಯತೆಗೆ ತಕ್ಕಂತೆ ಉಯಿಲನ್ನು ಯಾವಾಗ ಬೇಕಾದರೂ ಬದಲಾಯಿಸಬಹುದು.

ಉಯಿಲುಕರ್ತನು ಎಷ್ಟೇ ಉಯಿಲುಗಳನ್ನು ಬರೆದಿರಬಹುದು. ಆದರೆ ಅವನು ಸಾಯುವ ಮುಂಚೆ ಬರೆದಿರಬಹುದಾದ ಕಟ್ಟ ಕಡೆಯ ಉಯಿಲು ಮಾತ್ರ ಪರಿಣಾಮಕಾರಿಯಾಗಿರುತ್ತದೆ.

ಉಯಿಲಿನಲ್ಲಿ ಏನೇನು ಬರೆಯಬಹುದು :

ಉಯಿಲುಕರ್ತನು ತನಗೆ ಸೇರಿರುವ ಆಸ್ತಿ ಎಂದರೆ ನಿವೇಶನ, ಮನೆ, ಹೊಲಗದ್ದೆ, ಹೊಂದಿರಬಹುದಾದ ಅಮೂಲ್ಯವಾದ ಚಿನ್ನ, ಬೆಳ್ಳಿ ಒಡವೆಗಳು ಮುಂತಾದುವನ್ನು ಹಾಗೂ ಅದರ ಹಂಚಿಕೆಯನ್ನು ವಿವರವಾಗಿ, ಯಾರಿಗೆ ಸೇರಬೇಕು ಎಂಬುದನ್ನು ಉಯಿಲಿನಲ್ಲಿ ಬರೆಯಬಹುದು. ಈ ಎಲ್ಲಾ ಆಸ್ತಿಯೂ ಹಣಕಾಸಿನ ಮೌಲ್ಯವನ್ನು ಹೊಂದಿರತಕ್ಕಂತಹವು.

ಆದರೆ ಉಯಿಲುಕರ್ತನು, ಹಣಕಾಸಿಗೆ ಸಂಬಂಧಿಸದ, ಆದರೆ ತನ್ನ ಮನಸ್ಸಿನಲ್ಲಿ ಮೂಡಿರುವ, ಹಲವಾರು ಇಚ್ಛೆಗಳನ್ನು ಪೂರೈಸಲು ಸಹ ಉಯಿಲಿನಲ್ಲಿ ಬರೆಯಬಹುದು. ಅವು ಆತನು ತನ್ನ ಮನದಾಳದಲ್ಲಿ ಹೊಂದಿರುವ ಆಸೆ, ಆಕಾಂಕ್ಷೆಗಳಿಗೆ ಸಂಬಂಧಪಟ್ಟಿರುವಂತಹದಾಗಿರಬಹುದು. ಅಂತಹವುಗಳನ್ನು ತನ್ನ ಮರಣಾನಂತರ ಕಾರ್ಯಗತಗೊಳಿಸುವ ಅಪೇಕ್ಷೆಯನ್ನು ಸ್ಪಷ್ಟಪಡಿಸಿ ಅವುಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿಯನ್ನು ತನ್ನ ಬಾಧ್ಯಸ್ತರಿಗೆ ತಿಳಿಸಬಹುದು.

ಅಂತಹ ಮೌಲ್ಯಾಧಾರಿತ ಕೊಡುಗೆಗಳೆಂದರೆ :

1) ನೇತ್ರದಾನ

2) ದೇಹದಾನ

ಇತ್ತೀಚೆಗೆ ಇಂತಹ ದಾನಗಳನ್ನು ನೀಡಿರುವ / ನೀಡುತ್ತಿರುವ ಹಲವಾರು ಮಹನೀಯರ ಪ್ರಸಂಗಗಳನ್ನು ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ.

ತಮ್ಮ ನಿಧನಾನಂತರ ವೈದ್ಯಕೀಯ ವಿದ್ಯಾ ಸಂಸ್ಥೆಗಳಿಗೆ, ವಿದ್ಯಾರ್ಥಿಗಳ ಪ್ರಯೋಗಗಳಿಗೆ ಅನುಕೂಲವಾಗುವಂತೆ, ತಮ್ಮ ಮೃತದೇಹವನ್ನು ದಾನ ಮಾಡಿ, ತಮ್ಮ ದೇಹದ ಅಂತ್ಯಕ್ರಿಯೆ ಹೇಗೆ ನಡೆಯಬೇಕು ಎಂದು ಕೆಲವರು ಬರೆದಿದ್ದಾರೆ. ಮತ್ತೆ ಕೆಲವರು ತಮ್ಮ ಕಣ್ಣುಗಳನ್ನು ದಾನ ಮಾಡಿ ಅಂಧರಿಗೆ ಜೋಡಿಸಿ, ಅವರ ಅಂಧತ್ವವನ್ನು ಹೋಗಲಾಡಿಸಬೇಕೆಂದು ಬರೆದಿದ್ದಾರೆ.

ಉಯಿಲು ಮಾಡುವುದರಿಂದ ಆಗುವ ಅನುಕೂಲ :

ಉಯಿಲು ಕರ್ತನ ನಿಧನಾನಂತರ ಅವನ ಕುಟುಂಬದ ಸದಸ್ಯರಲ್ಲಿ ಆಸ್ತಿವಿಭಜನೆ ಅಥವ ವಿಲೇವಾರಿಯಲ್ಲಿ ಯಾವುದೇ ಗೊಂದಲ / ಸಂದೇಹಗಳಿಗೆ ಅವಕಾಶವಿರುವುದಿಲ್ಲ.

ಉಯಿಲು ತೀರಾ ವೈಯಕ್ತಿಕ ದಾಖಲೆಯಾದುದರಿಂದ ಅದರಲ್ಲಿ ತನ್ನ ಕುಟುಂಬದ ಸದಸ್ಯರೊಂದಿಗಿನ, ಬಂಧು ಬಳಗದವರ ಹಾಗೂ ಸ್ನೇಹಿತರೊಂದಿಗಿನ ತನ್ನ ಸಂಬಂಧದ ಬಗ್ಗೆ ತನ್ನ ಅಭಿಪ್ರಾಯ ಮತ್ತು ಸಂವೇದನೆಯನ್ನು ಸ್ಪಷ್ಟವಾಗಿ ತಿಳಿಸಬಹುದು.

ಕುಟುಂಬದ ಸದಸ್ಯರ ವಿಶೇಷ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಉಯಿಲನ್ನು ಬರೆಯಬಹುದು.

ವಿಧೇಯ ಸೇವಕ, ದಾದಿ / ಆಯಾ, ಗೆಳೆಯ ಅಥವಾ ಹಣದ ನೆರವನ್ನು ಬಯಸುವ ಹಾಗೂ ತಮಗಿಷ್ಟವಾದವರಿಗೇ ಅಲ್ಲದೆ ತಮ್ಮ ಧ್ಯೇಯೋದ್ದೇಶಗಳನ್ನು ನೆರವೇರಿಸುವ ಸಂಘ ಸಂಸ್ಥೆಗಳಿಗೆ ಪಾಲು ನೀಡಲು ಉಯಿಲಿನಲ್ಲಿ ಬರೆಯಬಹುದು.

ಉಯಿಲನ್ನು ಬರೆಯುವುದರ ಮೂಲಕ ಕುಟುಂಬದಲ್ಲಿ ಉಂಟಾಗಬಹುದಾದ ವೈಮನಸ್ಸನ್ನು ತಡೆಗಟ್ಟಬಹುದು.

ಉಯಿಲನ್ನು ಬರೆಯುವುದರಿಂದ ಒಬ್ಬ ವ್ಯಕ್ತಿಯು ತಾನು ತನ್ನ ಜೀವಿತಾವಧಿಯಲ್ಲಿ ಗಳಿಸಿದ ಆಸ್ತಿ–ಉಳಿಸಿದ ಹಣ, ತನ್ನ ಮರಣಾನಂತರ ತನ್ನ ವಾರಸುದಾರರಿಗೆ ನಿರಾಳವಾಗಿ ಹಸ್ತಾಂತರಿಸಲು ಅನುಕೂಲವಾಗುತ್ತದೆ. ಆದ್ದರಿಂದ ಉಯಿಲು ಬರೆಯುವವರು ತಡ ಮಾಡದೆ, ತಮ್ಮ ಮನದ ಇಂಗಿತವನ್ನು ಉಯಿಲಿನ ಮುಖಾಂತರ ಕಾರ್ಯರೂಪಕ್ಕೆ ಅಳವಡಿಸುವುದು ಸೂಕ್ತ.

ಹಾರೈಕೆ



ನಿವೃತ್ತಿಯ ನಂತರ ಜೀವನದ ಮುಸ್ಸಂಜೆಯಲ್ಲಿ ಆರೋಗ್ಯವಾಗಿ ಬಾಳಲು ಸುಖ ಸಂತೋಷದಿಂದ ಇರಲು, ತೆಗೆದುಕೊಳ್ಳಬೇಕಾದ ಹಲವಾರು ಕಾರ್ಯಯೋಜನೆಗಳು, ಸಿದ್ಧತೆಗಳು ಹಾಗೂ ಮುನ್ನೇರ್ಪಾಡುಗಳು – ಇವುಗಳ ಬಗ್ಗೆ ಸಾಕಷ್ಟು ಅರಿವು ಮೂಡಿಸಲು ಈ ಕಿರು ಪುಸ್ತಕದಲ್ಲಿ ಯತ್ನಿಸಲಾಗಿದೆ.

ಇಂದಿನ ದಿನಗಳಲ್ಲಿ ಜನರ ವಯೋಮಾನ ಹಿಂದಿಗಿಂತ ಹೆಚ್ಚಾಗುತ್ತಿದೆ. ಇದಕ್ಕೆ ಬಹು ಮುಖ್ಯ ಕಾರಣವೆಂದರೆ ವೈದ್ಯಕೀಯ ರಂಗದಲ್ಲಿ ಉಂಟಾಗುತ್ತಿರುವ ಹೊಸ ಹೊಸ ಆವಿಷ್ಕಾರಗಳು. ದೊರಕುತ್ತಿರುವ ರೋಗ ನಿರೋಧಕ ಔಷಧಗಳು ಮತ್ತು ಆಧುನಿಕ ಚಿಕಿತ್ಸಾಕ್ರಮಗಳು. ಹಾಗಾಗಿ ನಿವೃತ್ತಿಯ ನಂತರ ಜೀವಿತಾವಧಿಯು ಕೊನೆಯ ಪಕ್ಷ ಇಪ್ಪತ್ತು ಇಪ್ಪತ್ತೈದು ವರ್ಷಗಳಾದರೂ ಇರಬಹುದು. ಈ ಅವಧಿಯಲ್ಲಿ ಮನೆಯವರಿಗೆ ಹೊರೆಯಾಗದೆ ಅವರ ಮೇಲೆ ಆರ್ಥಿಕವಾಗಿ ಅವಲಂಬಿತರಾಗದೆ, ತಮ್ಮ ಪಾಡಿಗೆ ತಾವು ಸ್ವಾವಲಂಬಿಗಳಾಗಿ ಬದುಕುವುದು ಅತಿ ಮುಖ್ಯ.

ವೃದ್ಧಾಪ್ಯದಲ್ಲಿ ಆರೋಗ್ಯ ಹಾಗೂ ಸ್ವಾವಲಂಬನೆಗಳಿಗೆ ಸಮಾನ ಪ್ರಾಮುಖ್ಯತೆಯನ್ನು ನೀಡಬೇಕಾದ್ದು ಅಗತ್ಯತೆಯಷ್ಟೇ ಅಲ್ಲ, ಅನಿವಾರ್ಯವೂ ಹೌದು. ತೀರಾ ಕೊನೆಗಾಲದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಬಯಸುವುದು ಅನಾಯಾಸ ಮರಣವನ್ನು.

ಅನಾಯಾಸೇನ ಮರಣಂ ವಿನಾ ದೈನ್ಯೇನ ಜೀವನಂ ।
ದೇಹಿಂ ಮೇ ಕೃಪಯಾ ದೇವ ಶಂಭೋ ತ್ವಯಿ ಭಕ್ತಿ ಅಚಂಚಲಾಂ ॥

ಎಂಬುದು ಪ್ರತಿಯೊಬ್ಬರ ಪ್ರಾರ್ಥನೆ.


ಇದನ್ನೇ "ಕನ್ನಡದ ಭಗವದ್ಗೀತೆ" ಎಂದೇ ಪ್ರಸಿದ್ಧವಾಗಿರುವ "ಮಂಕುತಿಮ್ಮನ ಕಗ್ಗ" ದಲ್ಲಿ ಪೂಜ್ಯ ಡಿ.ವಿ. ಗುಂಡಪ್ಪನವರು ಹೀಗೆ ಹೇಳಿದ್ದಾರೆ.

ಆರ ಕೈ ತುತ್ತಿಗಂ ನಿನ್ನ ಕಾಯಿಸದೆ ವಿಧಿ ।
ಯಾರ ಭುಜಕಂ ನಿನ್ನ ಭಾರವಾಗಿಸದೆ ॥
ಆರ ಸೆಲೆ ಸುಳಿವು ಮಂಟದವೊಲಾಗಿಸಿ ನಿನ್ನ ।
ಪಾರಗಾಣಿಸಬೇಡು – ಮಂಕುತಿಮ್ಮ ॥

ದೇಹ ಪೋಷಣೆಗಾಗಿ ಯಾರ ಮುಂದೆಯೂ ಒಂದು ತುತ್ತು ಅನ್ನಕ್ಕಾಗಿ ಕೈ ಒಡ್ಡಿ ಕಾಯಿಸದಂತೆ, ನನಗೆ ವರವನ್ನು ಕೊಡು. ನಾನು ಜೀವಿಸಿರುವುದು ಯಾರ ಭುಜಕ್ಕೂ ಭಾರವಾಗದೆ ಇರಲಿ. ಯಾರ ಜೀವನವೂ ನನ್ನ ಮೇಲೆ ಅವಲಂಬಿಸಿ ನನ್ನ ಮಮಕಾರವನ್ನು ಹೆಚ್ಚಿಸದೆ ಇರಲಿ.

ಈ ರೀತಿ ಬಾಳಲು ಎಲ್ಲ ಹಿರಿಯ ಜೀವಿಗಳಿಗೂ ಸಾಧ್ಯವಾಗಲಿ. ಅದಕ್ಕೆ ಬೇಕಾದ ಶಕ್ತಿಯನ್ನು ಸಾಮರ್ಥ್ಯವನ್ನು ನೀಡಲಿ ಎಂದು ಪೂಜ್ಯ ಡಿ.ವಿ.ಜಿ. ಅವರೊಂದಿಗೆ ನಾವೂ ಹಾರೈಸೋಣ.

ಕಾರ್ಮಿಕರ ಪಿಂಚಣಿ ಯೋಜನೆ – 1995
EMPLOYEES PENSION SCHEME - 1995



ಉದ್ಯೋಗಿಗಳು ಸೇವೆಯಿಂದ ನಿವೃತ್ತಿ ಹೊಂದುವ ಸಮಯದಲ್ಲಿ ಅವರ ಮುಂದಿನ ಜೀವನವು ಸುಗಮವಾಗಿ ನಡೆಯಲು ಅನುಕೂಲವಾಗುವಂತೆ ಹಲವಾರು ಸೇವಾಂತ್ಯ ಸೌಲಭ್ಯಗಳು (Terminal benefits) ದೊರೆಯುತ್ತವೆ.

ಸರ್ಕಾರೀ ನೌಕರರಿಗಾದರೆ ಉಪದಾನ (Gratuity) ವಾಗಿ ಒಂದಷ್ಟು ಮೊತ್ತದ ಹಣ ಹಾಗೂ ಪ್ರತಿ ತಿಂಗಳೂ ದೊರಕುವಂತೆ ನಿವೃತ್ತಿ ವೇತನವು ಸಿಗುತ್ತದೆ.

ಆದರೆ, ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗದವರಿಗೆ ನಿವೃತ್ತಿ ವೇತನದ ಸೌಲಭ್ಯವಿಲ್ಲ. ಅವರಿಗೆ, ಸೇವೆಯ ಕೊನೆಯಲ್ಲಿ ದೊರಕುವುದು – ಭವಿಷ್ಯನಿಧಿ (Provident Fund) ಹಣ ಹಾಗೂ ಉಪದಾನ.

ಸಾಮಾನ್ಯವಾಗಿ ಕಾರ್ಮಿಕರು ತಮ್ಮ ಸೇವಾವಧಿಯಲ್ಲಿ ತಮ್ಮ ಭವಿಷ್ಯ ನಿಧಿಯ ಖಾತೆಯಿಂದ ದೊರೆಯಬಹುದಾದ ಸಾಲ ಸೌಲಭ್ಯವನ್ನು ಉಪಯೋಗಿಸಿಕೊಂಡು, ಆಗಾಗ್ಗೆ, ತಮ್ಮ ಅವಶ್ಯಕತೆಗಳಿಗೆ ಅನುಗುಣವಾಗಿ ಹಣವನ್ನು ಹಿಂತೆಗೆದುಕೊಂಡಿರುವುದರಿಂದ ನಿವೃತ್ತಿಯ ಸಮಯದಲ್ಲಿ ಈ ಬಾಬ್ತಿನಿಂದ ಸಿಗುವ ಹಣ ಬಹಳ ಕಡಿಮೆಯದಾಗಿರುತ್ತದೆ. ಇನ್ನು ಗಟ್ಟಿಯಾಗಿ ನಿಶ್ಚಯವಾಗಿ, ಪೂರ್ತಿಯಾಗಿ ಸಿಗುವ ಹಣವೆಂದರೆ ಉಪದಾನದ ಹಣ ಮಾತ್ರ.

ಹಾಗಾಗಿ ನಿವೃತ್ತಿಯ ನಂತರ ಜೀವನ ಸಾಗಿಸುವುದಕ್ಕೆ ಪರದಾಡಬೇಕಾಗುತ್ತದೆ. ನಿಶ್ಚಿತ ಆದಾಯವಿಲ್ಲದೆ, ದಿನೇ ದಿನೇ ಹೆಚ್ಚುತ್ತಿರುವ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯಿಂದ ಕಾರ್ಪಣ್ಯದ ಜೀವನ ನಡೆಸಬೇಕಾಗುತ್ತದೆ. ಅಲ್ಲದೆ ಹಿಂದಿನ ಕಾಲದಂತೆ ಇಂದು ಕೂಡು ಕುಟುಂಬದ ವ್ಯವಸ್ಥೆ ಕಣ್ಮರೆಯಾಗುತ್ತಿದೆ. ವೃದ್ಧ ತಂದೆ ತಾಯಿಗಳನ್ನು

– ಅಶಕ್ತರನ್ನು ಮಕ್ಕಳು ಪೋಷಿಸುತ್ತಾರೆಂಬುದು ಇಂದು ಅಪರೂಪದ ಸಂಗತಿಯಾಗುತ್ತಿದೆ. ಈ ಕಾರಣಗಳಿಂದ ಕಾರ್ಮಿಕ ಸಂಘಟನೆಗಳು, ಕಾರ್ಮಿಕರಿಗೂ ಸಹ ನಿವೃತ್ತಿ ವೇತನದ ಸೌಲಭ್ಯಕ್ಕಾಗಿ ಹೋರಾಟ ಮಾಡಲಾರಂಭಿಸಿದುವು.

ಆದರೆ, ಪ್ರಸಕ್ತ ಪರಿಸ್ಥಿತಿಯಲ್ಲಿ (1) ನಿವೃತ್ತಿ ವೇತನ ಮತ್ತು ಉಪದಾನ ಅಥವಾ (2) ಭವಿಷ್ಯನಿಧಿ ಮತ್ತು ಉಪದಾನ – ಈ ಎರಡು ಸೌಲಭ್ಯಗಳ ವಿನಃ ಅಧಿಕವಾಗಿ ಮೂರನೆಯ ಸೌಲಭ್ಯ ಒದಗಿಸುವ ಪದ್ಧತಿ ಜಾರಿಯಲ್ಲಿಲ್ಲ. ಆ ಕಾರಣದಿಂದ ಕಾರ್ಮಿಕರಿಗೆ ಅವರ ಭವಿಷ್ಯ ನಿಧಿಯಿಂದಲೇ, ಸ್ವಲ್ಪ ಭಾಗವನ್ನು ನಿವೃತ್ತಿ ವೇತನಕ್ಕಾಗಿ ವರ್ಗಾಯಿಸಿ, ಕಾರ್ಮಿಕರ ನಿಧನಾ ನಂತರ ಆತನ ಕುಟುಂಬಕ್ಕೆ ನಿವೃತ್ತಿ ವೇತನ (ಪಿಂಚಣಿ) ಯನ್ನು ನೀಡುವ ಯೋಜನೆಯೊಂದನ್ನು ರೂಪಿಸಲಾಯಿತು. ಅದರಂತೆ 1971 ರಿಂದ ಕಾರ್ಮಿಕ ಕುಟುಂಬ ಪಿಂಚಣಿ ಯೋಜನೆ – 1971 (Employees Family Pension Scheme - 1971) ಜಾರಿಗೆ ಬಂದಿತು.

ಕಾರ್ಮಿಕನು ಭವಿಷ್ಯನಿಧಿಗೆ ನೀಡುವ ವಂತಿಗೆ ಹಾಗೂ ಆಡಳಿತ ವರ್ಗದ ವಂತಿಗೆ – ಇವೆರಡರಲ್ಲಿಯೂ, ಕಾರ್ಮಿಕನ ಸಂಬಳದ ಆಧಾರದ ಮೇಲೆ ಶೇಕಡ 1 1/6 ರಷ್ಟನ್ನು (ಒಟ್ಟು ಶೇ. 2.32) ಕಡಿತ ಮಾಡಿ ಅದನ್ನು ಈ ಯೋಜನೆಗೆ ವರ್ಗಾಯಿಸುವುದು – ಕಾರ್ಮಿಕನು ಉದ್ಯೋಗದಲ್ಲಿದ್ದಾಗ ನಿಧನನಾದರೆ ಆತನ ಕುಟುಂಬಕ್ಕೆ ನಿವೃತ್ತಿ ವೇತನ ನೀಡುವುದು – ಪೂರ್ತಿ ಸೇವೆ ಸಲ್ಲಿಸಿದ ನಂತರ ಕಾರ್ಮಿಕ ನಿವೃತ್ತನಾದಾಗ, ಆತನು ನೀಡಿರುವ ವಂತಿಗೆಯ ಆಧಾರದ ಮೇಲೆ ಒಂದು ನಿಶ್ಚಿತ ಮೊಬಲಗನ್ನು ಆತನಿಗೆ ನೀಡುವುದು – ಈ ಯೋಜನೆಯ ತಿರುಳಾಗಿತ್ತು.

ಆದರೆ, ಈ ಯೋಜನೆಯಲ್ಲಿ ಕಾರ್ಮಿಕರಿಗೆ ಅವರ ಜೀವಿತಾವಧಿಯಲ್ಲಿ ಮಾಸಿಕ ನಿವೃತ್ತಿ ವೇತನ ದೊರಕುತ್ತಿರಲಿಲ್ಲ. ನಿವೃತ್ತಿಯ ನಂತರವೂ ಅವನ ಜೀವನ ನಿರ್ವಹಣೆಗೆ ಅನುಕೂಲವಾಗಲು ಆತನಿಗೂ ನಿವೃತ್ತಿ ವೇತನದ ಸೌಲಭ್ಯವನ್ನು ದೊರಕಿಸಿ ಕೊಡಬೇಕೆಂದು ಬೇಡಿಕೆ ಹೆಚ್ಚಾಗತೊಡಗಿತು.

ಹಾಗಾಗಿ ನವೆಂಬರ್ 16, 1995 ರಿಂದ ಜಾರಿಗೆ ಬರುವಂತೆ ಕಾರ್ಮಿಕರ ಪಿಂಚಣಿ ಯೋಜನೆ – 1995 ಜಾರಿಗೆ ಬಂದಿತು.

ಈ ಯೋಜನೆಯಂತೆ, ಆಡಳಿತ ವರ್ಗವು ನೀಡುವ ಭವಿಷ್ಯನಿಧಿಯ ವಂತಿಗೆಯಲ್ಲಿ ಸ್ವಲ್ಪ ಭಾಗವನ್ನು ಕಡಿತಗೊಳಿಸಿ ಅದನ್ನು ಈ ಯೋಜನೆಗೆ ವರ್ಗಾಯಿಸಲಾಗುವುದು. ಕಾರ್ಮಿಕರ ಸಂಬಳ 5000 ರೂ. ಗಳಾದರೆ ಆತನ ಭವಿಷ್ಯನಿಧಿಯ ವಂತಿಗೆ ಹೀಗಿರುತ್ತದೆ.

	ಕಾರ್ಮಿಕರ ವಂತಿಗೆ (ಭವಿಷ್ಯನಿಧಿ ಶೇ 12 ರಂತೆ)	ಆಡಳಿತ ವರ್ಗದ ವಂತಿಗೆ (ಭವಿಷ್ಯನಿಧಿ ಶೇ 12 ರಂತೆ)
	600	600
ನಿವೃತ್ತಿ ವೇತನಕ್ಕೆ ಶೇ. 8.33 ರಂತೆ ವರ್ಗಾವಣೆ	–	417
	---------	--------
ಭವಿಷ್ಯನಿಧಿಗೆ ವರ್ಗಾವಣೆ	**600**	**183**

ಹೀಗೆ ಆರಂಭದಲ್ಲಿ ವೇತನ ಮಿತಿ 5000 ರೂ.ಗಳೆಂದು ಈ ಯೋಜನೆಗೆ ನಿಗದಿಪಡಿಸಲಾಯಿತು.

ನಂತರ 1.6.2001 ರಿಂದ ಜಾರಿಗೆ ಬರುವಂತೆ ಈ ವೇತನಮಿತಿಯನ್ನು 6500 ರೂ.ಗಳಿಗೆ ಏರಿಸಲಾಯಿತು. ಈ ಏರಿಕೆಗೆ ಅನುಗುಣವಾಗಿ ವಂತಿಗೆಯೂ ಸಹ ಏರಿಕೆಯಾಗಿ ಭವಿಷ್ಯನಿಧಿಯ ಆಡಳಿತ ವರ್ಗದ ವಂತಿಗೆಯಲ್ಲಿ ಪಿಂಚಣಿಗೆ ವರ್ಗಾಯಿಸಲಾಗುವ ಹಣ 541 ರೂ. ಗಳಾಯಿತು.

ಹೀಗೆ ರೂಪಿಸಲ್ಪಟ್ಟ ಪಿಂಚಣಿ ಯೋಜನೆಯಿಂದ, ಕಾರ್ಮಿಕನಿಗೂ ಸಹ ಪಿಂಚಣಿ ದೊರಕುವಂತಾಗಿ ಆತನಿಗೆ ಸ್ವಲ್ಪಮಟ್ಟಿನ ಸಾಮಾಜಿಕ ಸುರಕ್ಷತೆ ದಕ್ಕಿ ನಿವೃತ್ತಿ ಜೀವನಕ್ಕೆ ನೆರವಾಗುವಂತಾಯಿತು. ಅವನಿಗೇ ಅಲ್ಲದೆ ಅವನ ಕುಟುಂಬಕ್ಕೆ ನೆರವಾಗುವಂತಹ ಇನ್ನೂ ಹಲವಾರು ಅನುಕೂಲಕರ ಅಂಶಗಳು ಈ ಯೋಜನೆಯಲ್ಲಿ ಅಡಕವಾದುವು.

ಯೋಜನೆಯ ಹಲವು ವೈಶಿಷ್ಟ್ಯಗಳು



ಈ ಯೋಜನೆಯು ಕಾರ್ಮಿಕರಿಗೆ ಅತ್ಯಂತ ಪ್ರಯೋಜನಕಾರಿಯಾದುದಾಗಿದೆ. ಕೇವಲ ಆತನಿಗೇ ಅಲ್ಲದೆ ಆತನ ಕುಟುಂಬದ ಸದಸ್ಯರಿಗೂ ಸಹ ಈ ಯೋಜನೆಯಿಂದ ಹಲವಾರು ರೀತಿಯ ಪ್ರಯೋಜನಗಳು ದೊರಕುತ್ತವೆ. ಈ ರೀತಿಯ ವಿನೂತನ ಯೋಜನೆ ಬೇರಾವ ನಿವೃತ್ತಿ ಯೋಜನೆಯಲ್ಲಿಯೂ ಕಂಡು ಬರುವುದಿಲ್ಲ. ಹಾಗಾಗಿ ಇದು ಅತಿ ವಿಶಿಷ್ಟವಾಗಿದ್ದು ಇತರೇ ನಿವೃತ್ತ ಯೋಜನೆಗಳಿಗಿಂತ ಭಿನ್ನವಾಗಿರುವುದೆಂದು ಹೇಳಬಹುದು.

ಹೀಗೆ ರೂಪಿತವಾದ ಈ ಯೋಜನೆಯಿಂದ ಕೆಳಕಂಡ ಹಲವು ರೀತಿಯ ಸೌಲಭ್ಯಗಳನ್ನು ಕಾರ್ಮಿಕನು / ಆತನ ಕುಟುಂಬದವರು ಪಡೆಯಲು ಅರ್ಹರಾಗಿರುತ್ತಾರೆ.

ಸದಸ್ಯರಿಗೆ ದೊರಕುವ ಸೌಲಭ್ಯ :

1. ಉದ್ಯೋಗಿಗೆ ನಿವೃತ್ತನಾದ ನಂತರ ದೊರಕುವ ನಿವೃತ್ತಿ ವೇತನ – Employee pension
2. ಖಾಯಂ ಮತ್ತು ಸಂಪೂರ್ಣ ಅಶಕ್ತ ನಿವೃತ್ತಿ ವೇತನ Total permanent disablement pension

ಸದಸ್ಯನ ಮರಣಾನಂತರ ಕುಟುಂಬದವರಿಗೆ ಸೌಲಭ್ಯ

3. ವಿಧವಾ ನಿವೃತ್ತಿ ವೇತನ – **Widow Pension**
4. ಮಾಸಿಕ ಮಕ್ಕಳ ನಿವೃತ್ತಿ ವೇತನ – Monthly children pension
5. ಅನಾಥ ಮಕ್ಕಳ ನಿವೃತ್ತಿ ವೇತನ – Orphan pension
6. ನಾಮನಿರ್ದೇಶಿತರಿಗೆ ನಿವೃತ್ತಿ ವೇತನ – Nominee Pension
7. ಅವಲಂಬಿತ ತಂದೆತಾಯಿಗೆ ನಿವೃತ್ತಿ ವೇತನ (ಸದಸ್ಯನು ಮದುವೆಯಾಗದೆ ಮೃತನಾದಾಗ) – Dependent parent pension in case member has not married.

ಉದ್ಯೋಗಿಗೆ ನಿವೃತ್ತಿ ವೇತನ – Employee pension

ಉದ್ಯೋಗಿಯು 58 ವರ್ಷಗಳನ್ನು ಪೂರೈಸಿದ ನಂತರ ಸೇವೆಯಿಂದ ನಿವೃತ್ತನಾದಾಗ ಆತನಿಗೆ ನಿವೃತ್ತಿ ವೇತನವನ್ನು ನೀಡಲಾಗುವುದು. ಹಾಗೆ ನಿವೃತ್ತಿ ವೇತನವನ್ನು ನಿರ್ಧರಿಸಿದಾಗ ಆತನ ನಿವೃತ್ತಿ ವೇತನಾರ್ಹ ವೇತನ (pensionable salary) ಮತ್ತು ನಿವೃತ್ತಿ ವೇತನಾರ್ಹ ಸೇವೆ (pensionable service) ಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

ನಿವೃತ್ತಿ ವೇತನಾರ್ಹ ವೇತನವು ಪ್ರಸ್ತುತದಲ್ಲಿ 6500 ರೂ.ಗಳು ಅಥವಾ ವೇತನದಾರನು ಅದಕ್ಕಿಂತ ಕಡಿಮೆ ವೇತನ ಪಡೆಯುತ್ತಿದ್ದರೆ ಅಂತಹ ವೇತನ (ನಿವೃತ್ತಿ ಯೋಜನೆಗೆ ನಿಗದಿಯಾಗಿರುವ ವೇತನ ಹಾಗೂ ಕಡಿತಗೊಳ್ಳುವ ವಂತಿಗೆ 6500 ರೂ. ಹಾಗೂ 541 ಎಂಬುದನ್ನು ಗಮನಿಸಬೇಕು.)

ನಿವೃತ್ತಿ ವೇತನಾರ್ಹ ಸೇವೆ ಎಂದರೆ 16.11.1995 ರಿಂದ ಅಂದರೆ ಯೋಜನೆಯು ಜಾರಿಗೆ ಬಂದ ನಂತರದಿಂದ ನಿವೃತ್ತನಾಗುವವರೆಗೆ ಸಲ್ಲಿಸಿರುವ ಸೇವೆ. ಈ ಸೇವೆಯು ಆರು ತಿಂಗಳಿಗೂ ಹೆಚ್ಚಿದ್ದರೆ ಅದನ್ನು ಒಂದು ವರ್ಷವೆಂದೂ ಪರಿಗಣಿಸಿ, ಆರು ತಿಂಗಳಿಗಿಂತ ಕಡಿಮೆ ಇದ್ದರೆ ಅದನ್ನು ಕಡೆಗಣಿಸಲಾಗುವುದು.

ಹೀಗೆ ನಿಗದಿಯಾದ ನಿವೃತ್ತಿ ವೇತನವನ್ನು ಆತನು ಜೀವಂತನಾಗಿರುವವರೆಗೂ ಪಡೆಯಲು ಅರ್ಹನಾಗಿರುತ್ತಾನೆ. ಇದರೊಂದಿಗೆ ನಿವೃತ್ತಿದಾರನು ಈ ಕೆಳಕಂಡ ಸೌಲಭ್ಯಗಳನ್ನು ಪಡೆಯಬಹುದು.

ಬಂಡವಾಳದ ಮರುಪಾವತಿ (Return to capital)

ನಿವೃತ್ತಿ ವೇತನವನ್ನು ಪಡೆಯುವ ಸದಸ್ಯರು ತಮಗೆ ಮಂಜೂರಾದ ನಿವೃತ್ತಿ ವೇತನದಲ್ಲಿ ಶೇಕಡ 90 ರಷ್ಟನ್ನು ತಾವು ಬದುಕಿರುವವರೆಗೂ ಪಡೆಯಲು ಆಯ್ಕೆ ಮಾಡಿಕೊಂಡ ಪಕ್ಷದಲ್ಲಿ, ಅಂತಹ ಸದಸ್ಯರು ನಿಧನರಾದಾಗ, ಅವರ ನಾಮನಿರ್ದೇಶಿತ ವ್ಯಕ್ತಿಗೆ ನಿವೃತ್ತಿದಾರನ ಮೂಲ ನಿವೃತ್ತಿ ವೇತನದ 100 ಪಟ್ಟನ್ನು ನೀಡಲಾಗುವುದು.

(ಉದಾಹರಣೆಗೆ 2000 ರೂಪಾಯಿಗಳ ನಿವೃತ್ತಿ ವೇತನವು ಮಂಜೂರಾಗಿ ನಿವೃತ್ತಿದಾರನು ಶೇಕಡಾ 90 ರಷ್ಟನ್ನು, ಅಂದರೆ 1800 ರೂ.ಗಳನ್ನು ಪಡೆಯಲು ಆಯ್ಕೆ ಮಾಡಿಕೊಂಡಾಗ ಆತನ ನಿಧನಾ ನಂತರ ಆತನ ಮೂಲ ನಿವೃತ್ತಿ ವೇತನದ 100 ಪಟ್ಟನ್ನು ಅಂದರೆ ಎರಡು ಲಕ್ಷ ರೂಪಾಯಿಗಳನ್ನು ಆತನ ನಾಮ ನಿರ್ದೇಶಿತ ವ್ಯಕ್ತಿಗೆ ನೀಡಲಾಗುವುದು.)

ಅಂದರೆ ಈ ಸೌಲಭ್ಯವು ಒಂದು ರೀತಿಯ ಇನ್ಶೂರೆನ್ಸ್ ಇದ್ದಂತೆ. ಹಾಗಾಗಿ ಅದರ ಮಹತ್ವವನ್ನರಿತುಕೊಂಡು ನಿವೃತ್ತದಾರನು ತನ್ನ ನಿರ್ಧಾರವನ್ನು ತೆಗೆದುಕೊಳ್ಳುವುದು ಉತ್ತಮ.

ನಿವೃತ್ತಿ ವೇತನದ ಪರಿವರ್ತನೆ
(Commutation)

ನಿವೃತ್ತದಾರನಿಗೆ ಸಿಗುವ ಮತ್ತೊಂದು ಸೌಲಭ್ಯವೆಂದರೆ ನಿವೃತ್ತಿ ವೇತನದ ಪರಿವರ್ತನೆ. ಆತನು ಅಪೇಕ್ಷಿಸಿದಲ್ಲಿ, ನಿವೃತ್ತಿಯ ಸಮಯದಲ್ಲಿ ನಿವೃತ್ತಿ ವೇತನದ 1/3 ಭಾಗದ 100 ಪಟ್ಟು ಮೊಬಲಗನ್ನು ಒಂದು ಇಡುಗಂಟಾಗಿ ಪಡೆಯಬಹುದು. ಉದಾಹರಣೆಗೆ 1200 ರೂ.ಗಳ ನಿವೃತ್ತಿವೇತನದ 1/3 ಭಾಗವನ್ನು ಪರಿವರ್ತನೆ ಮಾಡಲು ಇಚ್ಛಿಸಿದಾಗ ಆತನಿಗೆ 400 X 100 = ಅಂದರೆ 40,000 ರೂ.ಗಳನ್ನು ನೀಡಲಾಗುವುದು. ಈ ಹಣವನ್ನು ಮುಂದಿನ ತಿಂಗಳುಗಳಲ್ಲಿ ಆತನಿಗೆ ನೀಡುವ ಮಾಸಿಕ ನಿವೃತ್ತಿ ವೇತನದಲ್ಲಿ ಕಡಿತಗೊಳಿಸಲಾಗುವುದು.

ಖಾಯಂ ಮತ್ತು ಸಂಪೂರ್ಣ ಅಶಕ್ತ ನಿವೃತ್ತಿ ವೇತನ
(Total permanent disablement pension)

ಉದ್ಯೋಗಿಯು ಸೇವೆಯಲ್ಲಿದ್ದಾಗಲೇ ಖಾಯಂ ಆದ ಮತ್ತು ಸಂಪೂರ್ಣವಾಗಿ ಅಂಗವಿಕಲನಾಗಿ, ಕೆಲಸ ಮಾಡಲು ಅಶಕ್ತನಾದರೆ, ಅಂತಹವರು ಅಶಕ್ತತಾ ನಿವೃತ್ತಿ ವೇತನವನ್ನು ಪಡೆಯಲು ಅರ್ಹರಾಗುತ್ತಾರೆ. ಈ ಸೌಲಭ್ಯವನ್ನು ಪಡೆಯಲು ಇಂತಿಷ್ಟೇ ವರ್ಷಗಳು ಸೇವೆಯನ್ನು ಸಲ್ಲಿಸಿರಬೇಕೆಂದು ನಿಯಮವೇನಿಲ್ಲ. ಕನಿಷ್ಠ ಒಂದು ತಿಂಗಳು ವಂತಿಗೆಯನ್ನು ನೀಡಿದ್ದರೂ ಸಾಕು. ಆದರೆ ಕೆಲವೊಂದು ನಿಗದಿತ ವೈದ್ಯಕೀಯ ಪರೀಕ್ಷೆಗೆ ಒಳಪಡಬೇಕಾಗುತ್ತದೆ.

ಈ ನಿಯಮದಡಿ ನೀಡುವ ನಿವೃತ್ತಿ ವೇತನವನ್ನು ಉದ್ಯೋಗಿಯು ಖಾಯಂ ಮತ್ತು ಸಂಪೂರ್ಣ ಅಶಕ್ತತೆ ಹೊಂದಿದ ಮಾರನೇ ದಿನದಿಂದಲೇ ಜಾರಿಗೆ ಬರುವಂತೆ ನೀಡಲಾಗುವುದು.

ವಿಧವಾ ನಿವೃತ್ತಿ ವೇತನ

(Widow Pension)

ಅ) ನಿವೃತ್ತಿ ವೇತನ ಪಡೆಯುತ್ತಿರುವ ಸದಸ್ಯನು / ಳು ಮೃತ ಹೊಂದಿದಾಗ ಆತನ / ಳ ವಿಧವೆ / ವಿಧುರನು, ಸದಸ್ಯನು ಪಡೆಯುತ್ತಿದ್ದ ನಿವೃತ್ತಿ ವೇತನದ ಅರ್ಧದಷ್ಟನ್ನು ಪಡೆಯಲು ಅರ್ಹನಾಗುತ್ತಾಳೆ/ನೆ.

ಆ) ಸದಸ್ಯನು / ಸದಸ್ಯಳು ಸೇವೆಯಲ್ಲಿರುವಾಗಲೇ ದುರದೃಷ್ಟವಶಾತ್ ಮೃತಪಟ್ಟರೆ, ಆತನ / ಳ ವಿಧವೆ / ವಿಧುರನು ವಿಧವಾ ನಿವೃತ್ತಿ ವೇತನವನ್ನು ಪಡೆಯಲು ಅರ್ಹರಾಗುತ್ತಾರೆ. ಈ ನಿವೃತ್ತಿ ವೇತನವು ಮರಣ ಹೊಂದಿದ ಸದಸ್ಯನು ನಿಧನನಾದಾಗ ಪಡೆಯುತ್ತಿದ್ದ ಸಂಬಳಕ್ಕೆ ಅನುಗುಣವಾಗಿ ನಿರ್ಧರಿಸಲ್ಪಡುತ್ತದೆ. ವಿಧವಾ ವೇತನವು ಮರಣ ಹೊಂದಿದ ಸದಸ್ಯನು ಕೇವಲ ಒಂದು ತಿಂಗಳ ವಂತಿಗೆಯನ್ನೂ ನೀಡಿದ್ದರೂ ಸಹ, ನೀಡಲ್ಪಡುತ್ತದೆ. ಹಾಗೂ ವಿಧವೆಯ / ವಿಧುರನ ಮರಣದವರೆಗೆ ಅಥವಾ ಅವರ ಪುನರ್ವಿವಾಹದವರೆಗೆ ನೀಡಲ್ಪಡುವುದು.

(ಸದಸ್ಯನು ಒಬ್ಬರಿಗಿಂತ ಹೆಚ್ಚು ಪತ್ನಿಯರನ್ನು ಹೊಂದಿದ್ದರೆ, ಅಂತಹ ಸಂದರ್ಭದಲ್ಲಿ ಹಿರಿಯ ಪತ್ನಿಗೆ, ನೀಡಲಾಗುವುದು. ಹಿರಿಯರು ಎಂದರೆ ವಯಸ್ಸಿನಲ್ಲಿ ಅಲ್ಲ. ಯಾವ ಹೆಂಡತಿಯನ್ನು ಮೊದಲು ವಿವಾಹವಾಗಿರುವನೋ ಅಂತಹವರು ಎಂದು ಅರ್ಥೈಸಿಕೊಳ್ಳಬೇಕು)

ಮಕ್ಕಳ ಮಾಸಿಕ ನಿವೃತ್ತಿ ವೇತನ
(Monthly Children Pension)



ಸದಸ್ಯನ ಮರಣಾನಂತರ, ಆತನ ವಿಧವೆಯು ಪಡೆಯುವ ವಿಧವಾ ನಿವೃತ್ತಿ ವೇತನದೊಂದಿಗೆ ಮರಣ ಹೊಂದಿದ ಸದಸ್ಯನ ಮಕ್ಕಳೂ ಸಹ ನಿವೃತ್ತಿ ವೇತನವನ್ನು ಪಡೆಯಲು ಅರ್ಹರಾಗುತ್ತಾರೆ. ಇಂತಹ ಮಕ್ಕಳ ಮಾಸಿಕ ವೇತನವು ಒಂದು ಸಲಕ್ಕೆ ಗರಿಷ್ಠ ಇಬ್ಬರು ಮಕ್ಕಳಿಗೆ ಮೀರದಂತೆ ನೀಡಲಾಗುವುದು. ಹಾಗೂ ಆ ಮಕ್ಕಳಿಗೆ 25 ವರ್ಷ ವಯಸ್ಸಾಗುವವರೆಗೂ ನೀಡಲಾಗುವುದು. ಇಬ್ಬರಿಗಿಂತ ಹೆಚ್ಚು ಮಕ್ಕಳಿದ್ದರೂ, ಈ ಸೌಲಭ್ಯವು ಸರದಿಯಂತೆ, ಮುಂದುವರೆಯುವುದು.

ವಿಧವೆ/ವಿಧುರ ಪಡೆಯುವ ನಿವೃತ್ತಿ ವೇತನದ ಶೇಕಡಾ 25 ರಷ್ಟನ್ನು ಪ್ರತಿ ಮಗುವಿಗೂ (ಅಂದರೆ ಒಂದು ಸಲಕ್ಕೆ ಇಬ್ಬರಿಗೆ ಮೀರದಂತೆ) ನೀಡಲಾಗುವುದು.

ಅನಾಥ ಮಕ್ಕಳ ನಿವೃತ್ತಿ ವೇತನ (Orphan pension)

ದುರದೃಷ್ಟವಶಾತ್ ಮರಣ ಹೊಂದಿದ ಸದಸ್ಯನ ಹೆಂಡತಿಯೂ ನಿಧನಳಾದರೆ, ಹಾಗೂ ಆತನಿಗೆ ಮಕ್ಕಳಿದ್ದರೆ ಅಂತಹ ಮಕ್ಕಳು ಈ ನಿವೃತ್ತಿ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ. ಆಕಸ್ಮಾತ್ ಮೃತನ ಹೆಂಡತಿಯು ಬದುಕಿದ್ದೂ, ಆಕೆ ಪುನರ್ವಿವಾಹವಾದರೆ, ಅಂತಹ ಸಂದರ್ಭದಲ್ಲಿಯೂ ಸಹ ಮಕ್ಕಳನ್ನು ಅನಾಥ ಮಕ್ಕಳೆಂದು ಪರಿಗಣಿಸಿ ನಿವೃತ್ತಿ ವೇತನವನ್ನು ನೀಡಲಾಗುವುದು. ಮಕ್ಕಳ ಮಾಸಿಕ ನಿವೃತ್ತಿ ವೇತನದಂತೆಯೇ ಇಲ್ಲಿಯೂ ಸಹ ಮಗುವಿಗೆ 25 ವರ್ಷ ವಯಸ್ಸಾಗುವವರೆಗೂ ನೀಡಲಾಗುವುದು. ಅಲ್ಲದೆ ಒಂದು ಸಲಕ್ಕೆ ಗರಿಷ್ಠ ಇಬ್ಬರು ಮಕ್ಕಳಿಗೆ ನೀಡಲಾಗುವುದು. ಇಬ್ಬರಿಗಿಂತ ಹೆಚ್ಚು

ಮಕ್ಕಳಿದ್ದರೆ ಸರದಿಯಂತೆ, ಎಲ್ಲ ಮಕ್ಕಳಿಗೂ ಒಬ್ಬರ ನಂತರ ಮತ್ತೊಬ್ಬರಿಗೆ ಮುಂದುವರೆಯುವುದು.

ನಿವೃತ್ತಿ ವೇತನದ ಪ್ರಮಾಣವು ತಾಯಿಯು ಪಡೆಯುತ್ತಿದ್ದ ನಿವೃತ್ತಿ ವೇತನದ ಶೇಕಡ 75 ರಷ್ಟನ್ನು ಪ್ರತಿ ಮಗುವಿಗೂ (ಅಂದರೆ ಒಂದು ಸಲಕ್ಕೆ ಎರಡು ಮಕ್ಕಳಿಗೆ ಸೀಮಿತಗೊಳಿಸಿ) ನೀಡಲಾಗುವುದು.

ನಾಮನಿರ್ದೇಶಿತ ವ್ಯಕ್ತಿಗೆ ನಿವೃತ್ತಿ ವೇತನ
(Nominee Pension)

ಒಂದು ವೇಳೆ ಸದಸ್ಯನು ಮದುವೆಯಾಗಿಲ್ಲದಿದ್ದರೆ, ಅಥವಾ ಮದುವೆಯಾಗಿಯೂ ಗಂಡ / ಹೆಂಡತಿ ಬದುಕಿಲ್ಲವಾದರೆ, ಅಥವಾ ಅರ್ಹ ಮಕ್ಕಳು ಇಲ್ಲದಿದ್ದರೆ, ಅಂತಹ ಸಂದರ್ಭದಲ್ಲಿ ಸದಸ್ಯನು ಮೃತನಾದಾಗ ನಿವೃತ್ತಿ ವೇತನದ ಸೌಲಭ್ಯವು ಯಾರಿಗೆ ದೊರೆಯುವುದು ಎಂಬ ಪ್ರಶ್ನೆ ಉದ್ಭವಿಸುವುದು ಸಹಜ.

ಅಂತಹ ಸಂದರ್ಭದಲ್ಲಿ ಅವಿವಾಹಿತ ಸದಸ್ಯನಾದರೆ, ತನ್ನ ಇಚ್ಛೆಯಂತೆ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಬಹುದು. ಆದರೆ ವಿವಾಹವಾದ ನಂತರ ಆ ನಾಮನಿರ್ದೇಶನವನ್ನು ಬದಲಾಯಿಸಿ ತನ್ನ ಕುಟುಂಬದ ಸದಸ್ಯರ ಅಂದರೆ ಗಂಡ / ಹೆಂಡತಿಯನ್ನು ಹೆಸರಿಸಿ ನಾಮ ನಿರ್ದೇಶನ ಮಾಡಬಹುದು.

ಅವಲಂಬಿತ ತಂದೆ ತಾಯಿಗೆ ನಿವೃತ್ತಿ ವೇತನ

(Dependent Parent Pension)



ದುರದೃಷ್ಟವಶಾತ್ ಒಂದು ವೇಳೆ ವಿವಾಹವಾಗದೆ ಮೃತಪಟ್ಟಲ್ಲಿ ಆತನ ಅವಲಂಬಿತ ತಂದೆ ಅಥವಾ ತಾಯಿ (ಇಬ್ಬರಲ್ಲಿ ಯಾರಾದರೂ ಒಬ್ಬರು) ನಿವೃತ್ತಿ ವೇತನದ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಹೀಗೆ ನಿರ್ಧರಿತವಾದ ನಿವೃತ್ತಿ ವೇತನದ ಮೊತ್ತವು ವಿಧವಾ ನಿವೃತ್ತಿ ವೇತನದ ಸರಿಸಮಾನವಾಗಿರುತ್ತದೆ.

ಈ ನಿವೃತ್ತಿ ವೇತನ ನೀಡುವಾಗ ಮೊದಲು ಪ್ರಾಧಾನ್ಯತೆ ತಂದೆಗಿರುತ್ತದೆ. ಆತನ ನಿಧನಾ ನಂತರ ಈ ಸೌಲಭ್ಯವನ್ನು ತಾಯಿಗೆ ವಿಸ್ತರಿಸಲಾಗುವುದು.

ಯೋಜನಾ ಪ್ರಪತ್ರ

(Scheme Certificate)



ನಿವೃತ್ತಿ ವೇತನದ ಈ ಯೋಜನೆಯಲ್ಲಿ ಸದಸ್ಯನು ನಿವೃತ್ತಿ ವೇತನವನ್ನು ಪಡೆಯಲು ಇರಬೇಕಾದ ಅರ್ಹತೆಯೆಂದರೆ ಕನಿಷ್ಠ ಹತ್ತು ವರ್ಷಗಳ ಸದಸ್ಯತ್ವವನ್ನು ಪಡೆದಿರಬೇಕು. ಹಾಗೂ 50 ವರ್ಷಗಳನ್ನು ಪೂರೈಸಿರಬೇಕು.

ಈ ಹತ್ತು ವರ್ಷಗಳ ಸೇವೆಯನ್ನು ಪರಿಗಣಿಸುವಾಗ ಆತನು ಹಿಂದಿನ ಕುಟುಂಬ ನಿವೃತ್ತಿ ಯೋಜನೆ – 1971 ರ ಅಡಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಸಹ ಪರಿಗಣಿಸಲಾಗುವುದು.

ಕೆಲವೊಮ್ಮೆ ಉದ್ಯೋಗಿ ಈ ಎರಡೂ ನಿಬಂಧನೆಗಳನ್ನು ಪೂರೈಸುವ ಮುಂಚೆಯೇ ಉದ್ಯೋಗವನ್ನು ಬಿಡಬೇಕಾಗುವುದು. ಉದಾಹರಣೆಗೆ ಮಹಿಳಾ ಉದ್ಯೋಗಿಗಳು ವಿವಾಹವಾದಾಗ ಅಥವ ಪುರುಷರು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅಥವಾ ಉನ್ನತ ಹುದ್ದೆಯನ್ನು ಅರಸಿಕೊಂಡು ವಿದೇಶಗಳಿಗೆ ಹೋದಾಗ, ಅಥವಾ ಸ್ವಂತ ಉದ್ದಿಮೆ / ವ್ಯವಹಾರ ನಡೆಸುವ ಯೋಜನೆ – ಇವೇ ಮುಂತಾದ ಕಾರಣಗಳಿಗೆ ಉದ್ಯೋಗವನ್ನು ಬಿಡಬೇಕಾಗಬಹುದು.

ಅಂತಹ ಸಂದರ್ಭದಲ್ಲಿ ಅವರಿಗೆ ಈ ಯೋಜನೆಯಲ್ಲಿ ಎರಡು ಅವಕಾಶಗಳಿರುತ್ತವೆ ಅವೆಂದರೆ

(1) ಇದುವರೆಗೆ ತಾವು ನೀಡಿರುವ ವಂತಿಗೆಯನ್ನು ಹಿಂದಕ್ಕೆ ಪಡೆಯುವುದು.

(2) ಯೋಜನಾ ಪ್ರಪತ್ರ (Scheme Certificate) ವನ್ನು ಪಡೆಯುವುದು.

ಈ ಎರಡರಲ್ಲಿ ಸದಸ್ಯನು ಯಾವುದನ್ನು ಪಡೆದುಕೊಳ್ಳುವುದು ಸೂಕ್ತ?

ಮೊದಲನೆಯದನ್ನು ಆಯ್ಕೆ ಮಾಡಿಕೊಂಡಾಗ ಆತನು ತನ್ನ ಸೇವಾವಧಿಯಲ್ಲಿ ಯೋಜನೆಗೆ ನೀಡಿದ್ದ ವಂತಿಗೆಯನ್ನು ನಿಯಮಾನುಸಾರ ಹಿಂದಕ್ಕೆ ಪಡೆಯುತ್ತಾನೆ. ಆದರೆ, ಕಾಲಾನಂತರದಲ್ಲಿ ಆತನಿಗೆ ಈ ಯೋಜನೆಯಿಂದ ಮತ್ತ್ಯಾವುದೇ ಪ್ರತಿಫಲವು ದೊರಕುವುದಿಲ್ಲ.

ಆದರೆ ಎರಡನೆ ಆಯ್ಕೆಯನ್ನು ಮಾಡಿಕೊಂಡಾಗ ಆತನಿಗೆ ತಕ್ಷಣವೇ, ಆತನು ನೀಡಿದ ವಂತಿಗೆಯನ್ನು ಮರುಪಾವತಿ ಮಾಡುವುದಿಲ್ಲ. ಅದರ ಬದಲಾಗಿ ಯೋಜನಾ ಪ್ರಪತ್ರ Scheme Certificate ನೀಡಲಾಗುವುದು.

ಯೋಜನಾ ಪ್ರಪತ್ರವನ್ನು ಪಡೆಯುವುದರ ಅನುಕೂಲಗಳು :

1. ಕಾಲಾ ನಂತರದಲ್ಲಿ ಸದಸ್ಯನು ಪುನಃ ಕೆಲಸಕ್ಕೆ ಸೇರಿಕೊಳ್ಳುವ ಅನಿವಾರ್ಯತೆ

ಉಂಟಾದಾಗ ಅಂತಹ ಸಂದರ್ಭದಲ್ಲಿ, ನಿವೃತ್ತಿ ವೇತನ ನಿರ್ಧರಿಸುವಾಗ, ಯೋಜನಾ ಪ್ರಪತ್ರದಲ್ಲಿ ನಮೂದಿಸಿರುವ ಹಿಂದಿನ ಸೇವೆಯನ್ನು ಪರಿಗಣಿಸಲಾಗುವುದು.

2. ಸದಸ್ಯನು, ಎಲ್ಲೂ ಕೆಲಸಕ್ಕೆ ಸೇರದಿದ್ದರೂ, ದುರದೃಷ್ಟವಶಾತ್, 58 ವರ್ಷಗಳಿಗೆ ಮುಂಚೆಯೇ ನಿಧನನಾದರೆ, ಆತನ ಕುಟುಂಬದವರಿಗೆ, ಯೋಜನೆಯ ಪ್ರಕಾರ ಸಿಗಬಹುದಾದ ನಿವೃತ್ತಿ ವೇತನದ ಎಲ್ಲಾ ಸೌಲಭ್ಯಗಳೂ ದೊರೆಯುತ್ತವೆ.

3. ಸದಸ್ಯನೇ ಬದುಕುಳಿದಿದ್ದರೆ, ಸಂದಾಯ ಮಾಡಿರುವ ವಂತಿಗೆಯ ಮರುಪಾವತಿಯನ್ನು, ಕೊಂಚ ಹೆಚ್ಚುವರಿ ಹಣದೊಂದಿಗೆ ಹಿಂತಿರುಗಿಸಲಾಗುವುದು.

ಹೀಗಾಗಿ ಈ ಸನ್ನಿವೇಶವನ್ನು ಎದುರಿಸುವ ಸದಸ್ಯರು ವಿಚಾರ ಮಾಡಿ ನಿರ್ಧಾರ ಮಾಡುವುದು ಒಳ್ಳೆಯದು. ವಿವೇಚನಾಯುಕ್ತ ತೀರ್ಮಾನವೆಂದರೆ, ಅಂತಹ ಸಂದರ್ಭದಲ್ಲಿ, ಹಣವನ್ನು ಮರುಪಾವತಿ ಪಡೆಯುವುದರ ಬದಲು ಯೋಜನಾ ಪ್ರಪತ್ರವನ್ನು ಪಡೆಯುವುದು ಸೂಕ್ತ.

ಸದಸ್ಯರು ಗಮನಿಸಬೇಕಾದ ಕೆಲವು ಅಂಶಗಳು :

ಮೇಲೆ ವಿವರಿಸಿರುವ ಎಲ್ಲಾ ಸೌಲಭ್ಯಗಳನ್ನು ಗಮನಿಸಿದಾಗ ಕಾರ್ಮಿಕರ ಪಿಂಚಣಿ ಯೋಜನೆ 1995 ಒಂದು ರೀತಿಯ ವಿಶಿಷ್ಟವೂ ಅನನ್ಯವೂ ಆದ ಯೋಜನೆಯಾಗಿದೆಯೆಂದು ತಿಳಿಯಬಹುದು.

ಇದರ ಸಂಪೂರ್ಣ ಪ್ರಯೋಜನ ಪಡೆಯಬೇಕಾದರೆ ಸದಸ್ಯರು / ಫಲಾನುಭವಿಗಳೂ ಸಹ ಜವಾಬ್ದಾರಿಯುತವಾಗಿದ್ದು ಕೆಲವೊಂದು ನೀತಿ ನಿಯಮಗಳನ್ನು ಅನುಸರಿಸಬೇಕಾಗುತ್ತದೆ.

ಅವುಗಳೆಂದರೆ :

1. ಉದ್ಯೋಗಕ್ಕೆ ಸೇರಿದಾಗ ಈ ಯೋಜನೆಗೆ ಸಂಬಂಧಪಟ್ಟ ಎಲ್ಲ ಅರ್ಜಿ ನಮೂನೆಗಳನ್ನು ಭರ್ತಿ ಮಾಡಿಕೊಡಬೇಕು.

2. ಕುಟುಂಬದ ಸದಸ್ಯರ / ವಾರಸುದಾರರ ಹೆಸರು, ವಿವರಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ತಮ್ಮ ಕೌಟುಂಬಿಕ ಜೀವನದಲ್ಲಿ ಬದಲಾವಣೆಯಾದಾಗಲೆಲ್ಲ / ಅವಶ್ಯಕತೆ ಕಂಡು ಬಂದಾಗಲೆಲ್ಲ, ಅಂತಹ ಬದಲಾವಣೆಗಳನ್ನು ಭವಿಷ್ಯನಿಧಿ ಕಛೇರಿಗೆ ತಿಳಿಸಬೇಕು.

3. ಉದ್ಯೋಗವನ್ನು ಬದಲಿಸಿ ಬೇರೊಂದು ಸಂಸ್ಥೆಗೆ ಸೇರಿದಾಗ ಹಿಂದಿನ ಸಂಸ್ಥೆಯಲ್ಲಿ ಇದ್ದ ಸದಸ್ಯತ್ವದ ಎಲ್ಲಾ ವಿವರಗಳನ್ನು ಹೊಸದಾಗಿ ಸೇರಿಕೊಂಡ ಸಂಸ್ಥೆಗೆ ತಿಳಿಸಬೇಕು.

4. ನಿವೃತ್ತಿ ವೇತನಕ್ಕೆ ಅರ್ಜಿ ಸಲ್ಲಿಸುವಾಗ ಬಂಡವಾಳದ ಮರುಪಾವತಿ, ನಿವೃತ್ತಿ ವೇತನದ ಪರಿವರ್ತನೆ – ಇವುಗಳ ಬಗ್ಗೆ ಸ್ಪಷ್ಟವಾಗಿ ನಮೂದಿಸಬೇಕು.

5. ನಿವೃತ್ತಿ ವೇತನವನ್ನು ಕೆಲವು ನಿರ್ದಿಷ್ಟ ಬ್ಯಾಂಕುಗಳ ಮುಖಾಂತರ ನೀಡಲಾಗುತ್ತದೆ. ಪ್ರಸ್ತುತದಲ್ಲಿ ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹೆಚ್.ಡಿ.ಎಫ್.ಸಿ ಬ್ಯಾಂಕ್ ಮತ್ತು ಕಾರ್ಪೋರೇಷನ್ ಬ್ಯಾಂಕ್ ಮುಖಾಂತರ ನೀಡಲಾಗುತ್ತಿದೆ.

ನಿವೃತ್ತಿದಾರನು ತನಗೆ ಅನುಕೂಲಕರವಾದ ಯಾವುದಾದರೂ ಬ್ಯಾಂಕಿನಲ್ಲಿ ಈ ಉದ್ದೇಶಕ್ಕಾಗಿ ಖಾತೆಯನ್ನು ತೆರೆಯಬೇಕು. ಅಲ್ಲದೆ ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ತಮ್ಮ ಜೀವಂತ ಧೃಢೀಕರಣ ಪತ್ರ / ಹಾಗೂ ಮರುವಿವಾಹ ಆಗದಿರುವ ಬಗ್ಗೆ ಧೃಢೀಕರಣ ಪತ್ರವನ್ನು ಬ್ಯಾಂಕಿಗೆ ನೀಡಬೇಕಾಗುತ್ತದೆ.



● ಎನ್. ಆನಂದರಾಮ ರಾವ್

" **ನಿವೃತ್ತಿಯ ಚಿಂತೆ ಏಕೆ** " ಎಂಬ ಈ ಕಿರು ಪುಸ್ತಕವನ್ನು ನಮ್ಮ ಬಿ.ಇ.ಎಲ್.
ಯ ನಿವೃತ್ತ ಅಧಿಕಾರಿಗಳಾದ ಶ್ರೀ ಎನ್. ಆನಂದರಾಮ ರಾವ್ ರವರು
ತರುತ್ತಿರುವುದು ಅತ್ಯಂತ ಸಂತೋಷದ ವಿಷಯ. ಈ ಮೂಲಕ ಅವರು
ತ್ತಿದಾರರು ಮತ್ತು ನಿವೃತ್ತಿಯಾಗಲಿರುವವರನ್ನು ನಿವೃತ್ತಿಯ ನಂತರ ಎದುರಿಸುವ
ಸ್ಯೆಗಳಿಂದ ಪಾರುಮಾಡಿದ್ದಾರೆ ಎಂದರೆ ತಪ್ಪಾಗಲಾರದು. ಈ ಪುಸ್ತಕವು
ಎಲ್. ಕಾರ್ಖಾನೆಯ ಈಗಾಗಲೇ ನಿವೃತ್ತರಾಗಿರುವ ಮತ್ತು ಮುಂದೆ
ತ್ತಿಯಾಗಲಿರುವ ಎಲ್ಲ ನೌಕರರಿಗೆ ಮಾರ್ಗಸೂಚಿಯಂತೆ ಇರುವುದಲ್ಲದೆ, ಇತರೆ
ರ್ವಜನಿಕ ಸಂಸ್ಥೆಗಳ ಕಾರ್ಮಿಕರಿಗೂ ಮತ್ತು ಸಾರ್ವಜನಿಕರಿಗೂ ಸಹ ಅನ್ವಯವಾಗಿ
ು ಕೂಡ ಇದರ ಲಾಭವನ್ನು ಪಡೆಯಬಹುದಾಗಿದೆ. ಈ ಪುಸ್ತಕವು
ಆನಂದರಾಮ ರಾವ್ ರವರ ವೃತ್ತಿಯಲ್ಲಿನ ಸ್ವಂತ ಅನುಭವ ಮತ್ತು ಅವರು
ೀತಿ ಕಾರ್ಯಕ್ರಮಗಳಲ್ಲಿ ನೀಡಿದ ಉಪನ್ಯಾಸಗಳ ಸಂಕ್ಷಿಪ್ತ ಬರಹ ರೂಪವಾಗಿದ್ದು,
ಲ್ಲಿ ಅನೇಕ ಮಾಹಿತಿಗಳು, ನಿಯಮಾವಳಿಗಳು, ನಿಬಂಧನೆಗಳು, ಅಂಕಿ
ಗಳು ಮತ್ತು ಮಾರ್ಗದರ್ಶನಗಳು ಅಡಕವಾಗಿ ಬಹಳ ಉಪಯುಕ್ತವಾಗಿದೆ.
ನಂದರಾಮ ರಾವ್ ರವರು ಈ ಪುಸ್ತಕವನ್ನು ಸರಳ ಕನ್ನಡ ಭಾಷೆಯಲ್ಲಿ ಬರೆದು
ಮಾನ್ಯರಿಗೆ ಅನುಕೂಲವಾಗುವಂತೆ ಮಾಡಿರುವುದು ಅತ್ಯಂತ ಹೆಮ್ಮೆಯ ಸಂಗತಿ.
ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಶೀಘ್ರಗತಿಯಲ್ಲಿ ಕಾರ್ಯ
ನಗಳು ಮತ್ತು ನಿಯಮ ನಿಬಂಧನೆಗಳು ಬದಲಾಗುವುದು ಸಾಮಾನ್ಯ. ಇದಕ್ಕೆ
ಣವಾಗಿ ಈ ಪುಸ್ತಕದ ಪರಿಷ್ಕೃತ ಆವೃತ್ತಿಗಳು ಇವರಿಂದ ಹೊರಹೊಮ್ಮಲಿ
ು ನಾನು ಈ ಸಂದರ್ಭದಲ್ಲಿ ಆಶಿಸುತ್ತೇನೆ.

– ಎಮ್. ಜೆ. ರಘುವೀರ್
ಹಣಕಾಸು ನಿರ್ದೇಶಕರು
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
ಬೆಂಗಳೂರು